CARLOS
THAMIZHAVAN

# SHAMBALA

(A POLTICAL NOVEL)



# ಶಂಬಾಲ

( ರಾಜಕೀಯ ಕಾದಂಬರಿ )

ಕನ್ನಡಕ್ಕೆ: ಡಾ. ಜಯಲಲಿತಾ

PROF. CARLOS THAMIZHAVAN

# SHAMBALA

(A POLTICAL NOVEL)

# ಶಂಬಾಲ

(ರಾಜಕೀಯ ಕಾದಂಬರಿ)

ಕನ್ನಡಕ್ಕೆ : ಡಾ.ಜಯಲಲಿತಾ

ವಿಜಯನಗರ, ಬೆಂಗಳೂರು–೫೬೦ ೦೪೦

ಶಂಬಾಲಾ (ರಾಜಕೀಯ ಕಾದಂಬರಿ)
**SHAMBALA (A POLTICAL NOVEL)**
**BY : PROF. CARLOS THAMIZHAVAN**
**This Book Originally Published in 2019 IN TAMIL**
**TRANSLATED INTO KANNADA BY : Prof. Jayalalitha,**
Dept of Kannada language & TS,
Dravidian University, srinivasa vanam ,
Kuppam 517426 (A.P,) Mob : 99593 69473.
E-Mail : lalithajaya19@gmail.com

**Published by :**
**Asha Nagesh**
**DESI PUSTAKA**
# 121, 13th Main Road, M.C. Layout,
Vijayanagara, Bengaluru - 560 040.
Ph : 080 - 23153558;
Mob: 94484 39998
E-Mail: desipustaka@gmail.com

**First Impression : 2022**
Page: XVI + 4 + 184 = 204
Book Size : 1/4 Crown (23 x 15.5)
**(International Standarad Book Size)**
₹ **: 270/-**
Paper used: 70 Gsm Ns Book Print
**© : Prof. Carlos Thamizhavan 2022**
Cover Page : **Kiran Madalu**

Printed at :
**POORNIMA PRINTERS**
Vijayanagara, Bengalore-560 040
Ph: 080-23351210

This book is protected by copyright laws. No part of this book is to be reproduced transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.



ಶಂಬಾಲ ಎಂಬ ಹೆಸರಿನ ಬಗ್ಗೆ ಒಂದು ಮಾತು. ಇತಿಹಾಸದಲ್ಲಿ ಶಂಬಾಲ ಎನ್ನುವುದು ಟಿಬೆಟ್ ಬೌದ್ಧಿಜಂನಲ್ಲಿ ಒಂದು ಆಧ್ಯಾತ್ಮಿಕ ರಾಜ್ಯವೆಂತಲೂ ಕಾಲಚಕ್ರವು ಸೂಚಿಸುತ್ತದೆ. ಹಿಟ್ಲರ್‌ನ ಕಾರ್ಯಗಳನ್ನು ಆಧರಿಸಿ ನೋಡುವುದಾದರೆ, ಅವನ ಆಶಯವು ರಾಜಕೀಯವಾಗಿ ಬೆಳೆಯುವುದು ಮಾತ್ರವೇ ಅಲ್ಲದೆ ಸಾಮಾಜಿಕವಾಗಿ ಕೂಡ ತಾನು ಒಬ್ಬ ಯುಗಪುರುಷ ಎಂಬ ಭಾವನೆ ಜನರಲ್ಲಿ ಮೂಡಿಸಬೇಕೆಂದು ಪ್ರಯತ್ನಿಸುವುದಾಗಿತ್ತು. ಹಾಗೆ ಮಾಡುವ ಮೂಲಕ ತನ್ನ ಕೆಟ್ಟ ಕಾರ್ಯಗಳನ್ನು ಮರೆಮಾಡಿ ಉತ್ತಮನಂತೆ ಕಾಣಿಸಿಕೊಳ್ಳಬಹುದೆನ್ನುವುದು ಅವನ ಆಲೋಚನೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯು ಶ್ರೀಮಂತರು, ತಪಿತಸ್ಥರು, ಪ್ರತಿಷ್ಟಿತ ಕುಲದವರ ಕೈವಶವಾಗಿರುವುದನ್ನು, ಉನ್ನತ ಉದ್ಯೋಗದಲ್ಲಿರುವ ದಲಿತವರ್ಗದ ಪೊಲೀಸರ ಅವಸ್ಥೆಯನ್ನು ಕೂಡ ಲಕ್ಷ್ಮಣ್ ಎಂಬ ಪಾತ್ರದ ಮೂಲಕ ಕಾದಂಬರಿಕಾರರು ಮಾರ್ಮಿಕವಾಗಿ ವಿವರಿಸಿದ್ದಾರೆ. ಒಂದೆಡೆ ಕಾದಂಬರಿಕಾರರು ಹೇಳಿರುವಂತೆ ದೇಶದೆಲ್ಲೆಡೆ ಸಾಹಿತ್ಯಿಕ ವಾತಾವರಣ ಕ್ರಮೇಣ ಕುಸಿಯುತ್ತಿದೆ. ಸಾಹಿತ್ಯಾನುಭ ಇಲ್ಲದವರೂ ಕೂಡ ದೊಡ್ಡ ಸಾಹಿತಿಗಳಂತೆ ಬಿಂಬಿತಗೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಿಜವಾದ ಸಾಹಿತಿಗಳಿಗೆ ಸ್ಥಾನವಿಲ್ಲದಂತಾಗಿದೆ. ಈ ಬೆಳವಣಿಗೆ ತುಂಬಾ ಆಲೋಚಿಸತಕ್ಕದ್ದಾಗಿದೆ.

ಡಾ. ಚೆಲ್ಲಪ್ಪ
(ನಿವೃತ್ತ ಐ.ಎ.ಎಸ್ ಅಧಿಕಾರಿ), ವಕೀಲರು

ಪುಸ್ತಕ
127
NOVEL
₹270/-

RESEARCH ARTICLE

INTERNATIONAL RESEARCH JOURNAL OF TAMIL
சர்வதேசத் தமிழ் ஆய்விதழ்

DOI: 10.34256/irjt2139

OPEN ACCESS

# பண்டைய தமிழ் மற்றும் கன்னட நூல்களில் பேய் காட்சிகள்

**ஜெயலலிதா** [அ, *]

[அ] கன்னட மொழி மற்றும் மொழிபெயர்ப்பு துறை, திராவிடப் பல்கலைக்கழகம், குப்பம்-517425, ஆந்திரப் பிரதேசம், இந்தியா.

# Ghost Theme is Ancient Kannada and Tamil texts

**Jayalalitha** [a, *]

[a] Department of Kannada, Dravidian University, Kuppam-517425, Andhra Pradesh, India.

* Corresponding Author: lalithajaya19@gmail.com

Received : 20-11-2020
Revised : 06-07-2021
Accepted : 12-07-2021
Published : 15-07-2021

Check for updates

## ABSTRACT

As members of Dravidian family of Languages, Kannada and Tamil are close to each other. Apart from linguistic and grammatical similarities there are comparable elements in literary texts also. There are similar motifs and themes in Ancient Kannada and Tamil literary works. Though a few studies have concentrated in the similarities of Kannada and Tamil grammars, very little is done on the similar features of literary works. This paper makes an attempt to bring out a surprising motif of ghosts that occur in Ancient Kannada and Tamil texts. Tolkappiyam is an early grammatical work in Tamil and date of which is believed to be from 1 to 3 AD. This book speaks of a concept of 'Thodakkaanji'. This concept is explained by commentators as not allowing the evil spirit to eat the body of the hero who died during a war. The same concept, though the technical term to denote the concept is absent, is present in the Kannada text 'Sahasa Bheema Vijaya or Gadhayuddha' by the Ranna, who belongs to the tenth century. While the theme of the narration centers around the battle of maces between Bhima and Duryodhana on the last day of the eighteen-day war, the poet uses a technique similar to flashbacks. This technic we can see in Tamil as a "Singanokku" which is used in grammar text to explain the 'noorpaa'. Ranna the Kannada poet gives the details of an incident of the war field where the dead leader's body is guarded from evil spirits/ ghosts by the fellow warriors whose wounds are less fatal. Tolkappiyam is an earlier work and Ranna's work is late period. But that the particular theme of Thodakkanchi occurs in the Kannada and Tamil contexts merits mention and study a rare example which has not been brought out by anybody so far. Such similar points of comparison are brought out elaborately in this article.

**Keywords:** Thodakkanchi, Epigraphy, ErumaiNattu, Peykkanchi, Bhootharadhane, KalingaththupParani, Puranaanuru

## முன்னுரை

பல திராவிட மொழிகளுக்கு இடையிலே கன்னட மற்றும் தமிழ் மொழிகள் தான் மிக நெருக்கமான தொடர்பைக் கொண்டுள்ளன. இவ்விரண்டு மொழிகளிலும் பண்டைய கல்வெட்டுகள், இலக்கிய-இலக்கண நூல்கள் ஏராளமாக உருவாகியுள்ளன. இலக்கண செயல் முறைகளில், மொழி வளர்ச்சியின் பார்வையால் தோன்றிய சில மாற்றங்களை தவிர்த்தால் பெருமளவில் வேற்றுமைகள் தெரியவில்லை. கி.பி. ஐந்திலிருந்து ஏழாவது நூற்றாண்டுகளில் காணப்பட்ட கன்னட கல்வெட்டுகளைப் பார்த்தால் அங்குள்ள சில சொற்கள் தமிழ் போலவே உள்ளன என்பது தெரியவருகிறது. நாட்டு, நகர,

நாயகன், பெத்தசெயன், விட்டார் போன்றவை தமிழ் மற்றும் கன்னட மொழிகளுக்கு இடையிலுள்ள நெருக்கமான தொடர்பை வெளிக்காட்டுகின்றன.

தமிழ் மற்றும் கன்னட மொழிகளின் உறவு மிகப் பழமைக் கொண்டது. சங்ககால தொகை நூல்களைப் பார்த்தால் இது தெளிவாகும். எருமை நாடு என்று சங்க இலக்கியம் குறிக்கும் இடம் கர்நாடகத்திலுள்ள மைசூரு. இந்த எருமைநாட்டை சேர்ந்த எருமை வெளியனார், அவர் புதல்வரான எருமை வெளியனார் மகனார் கடலனாரும் அகநானுறு (73,72) மற்றும் புறநானூறில் (271,303) சில பாடல்களைப் பாடியுள்ளார். இளங்கோ அடிகள் எழுதிய சிலப்பதிகாரத்தில் சேரமன்னன் செங்குட்டுவன் வடநாட்டுக்கு திக்விஜயம் போனான். அங்கு நீலகிரியில் 'கருநாடர்' ஆடிய நடனத்தைப் பார்த்து மகிழ்ந்தான் என்று விளக்கியுள்ளன. பத்தாம் நூற்றாண்டைச் சார்ந்த அமிர்தசாகரர் இயற்றிய 'யாப்பருங்கலக்காரிகை' எனும் நூலுக்கு குணசாகரர் உரை எழுதியுள்ளார். அதில் வரும் பாயிரத்தில் "குணகாங்கி எனும் கருநாடகச் சந்தமே போல மகடூஉ முன்னிலைத்தாய், அவையடக்கமும் உடையதாய்" என்று கூறுகிறான். இதன் மூலமாக குணகாங்கி எனும் கருநாட்டின் யாப்பு நூலொன்றைத் தான் பார்த்ததாகவும் அதில் சில அம்சங்களை பின் பற்றியதாகவும் குறிப்பிடுகிறான். சேக்கிழாரின் பெரியபுராணத்தின் தாக்கத்தினால் கன்னட கவிஞரான ஹரிஹரன் 'புராதனரரகளெ' அதாவது பண்டையரின் ரகளை எனும் நூலை எழுதியுள்ளான். இந்த கன்னட நூலில் பலதமிழ்ச் சொற்களை (பெருமாளே, திருநாள், சிலந்தி, உலகம்) அப்படியே பயன்படுத்தி உள்ளதைக் கவனிக்கலாம்.

இவை கூர்ந்து பார்த்தால் கன்னட மற்றும் தமிழ் மொழிகளுக்கு இடையில் உள்ள நெருக்கமான தொடர்பு தெரிய வருகிறது. ஜீவக சிந்தாமணி, யசோதர காவியம், போன்ற பல நூல்களைக் கன்னட மற்றும் தமிழ் இரண்டு மொழிகளிலும் பார்க்கலாம். ஆகையால் கன்னட மற்றும் தமிழ்மொழிகளின் பண்டைய நூல்களில் தோன்றும் சில ஒற்றுமைகளை ஒப்பிட்டுப் பார்ப்பதே இக்கட்டுரையின் நோக்கமாகும்.

## விவாதம்

மனிதர்கள் மனதில் பேய், பிசாசுகள் குறித்த நம்பிக்கை பலகாலத்திலிருந்து உண்டு. தொடக்கத்தில் அச்சத்திற்கு காரணமான இவை பின்னர் வணக்கத்திற்கு உரியனவாக மாறியதை நாம் கவனிக்கலாம். திராவிட மொழி பேசும் மக்கள் சமூகத்திலும், பழங்கன்னட இலக்கியங்களிலும், தொல்காப்பியத்திலும், சங்க இலக்கியங்களிலும், சிலப்பதிகாரத்திலும் இந்த பேய் குறித்த நம்பிக்கையைச் சமமாகப் பார்க்கலாம். சிலப்பதிகார்த்தில் வரும் 'தேவர் கோமான் ஏவலிற் போந்தகாவற் பூதத்துக் கடைகெழுபீடிகை' எனக் குறிக்கப் பட்டுள்ளது. அந்த பூதம் இந்திரனின் ஏவலால் பூமிக்கு வந்ததாகவும், நிணம், பொங்கல், முதலிய படையல்களை ஏற்றுக் கொள்வதாகவும் இங்குக் கூறியுள்ளன. மேலும் வில், வேல், வாள் போன்ற ஆயுதங்களைப் பூதத்தின் முன் வைத்து வெற்றி வேண்டி வழிப்பட்டதையும் சிலப்பதிகாரத்தில் குறிப்பிட்டுள்ளது. அதே போல கடலோர கர்நாடக அதாவது துளு நாட்டில் 'பூதாராதனை' எனும் நாட்டுப்புற சடங்கு ஒன்று வழக்கில் உள்ளது. துளு நாட்டு மக்கள் இந்த பூதத்தை Evil spirit என்று எடுக்காமல் தெய்வீக சக்திகள் protective spirit என்றே நம்புகிறார்கள். பெரும்பாலும் பூதங்களை மூன்று வகையாக பிரிக்கிறார்கள். விலங்குகளின் உருவத்திலுள்ள பூதங்கள், மனிதர் இறந்த பின்பு தெய்வமாக மாறிய பூதங்கள் மற்றும் புராணங்களில் குறிப்பிடும் பாத்திரங்களின் பூதங்கள். புலி, பன்றி, எருமை, நந்தி போன்ற விலங்குகள் பிலிசண்டி, பஞ்சுர்லி முதலிய பெயர்களில் வழிப்படுகின்றன. ஜூமாதி, கல்குட, கல்குர்சி, காந்தாபாரே, பூதாபாரே முதலிய ஆட்கள் மனிதராக இருக்கும் பொழுது நற்செயல்களை செய்து, அகால மரணம் பெற்று தெய்வங்களாய் மாறியுள்ளன. பெர்மெ எனும் தெய்வம் 'பூதபிரம்ம' எனும் பெயரில் வழிபடப்படும். இப்படி கன்னட மற்றும் தமிழ் வழக்காறுகளில், இலக்கியங்களில் பேய் மற்றும் பூத காட்சிகளைச் சமமாகக் காணலாம்.

தமிழின் முதல் இலக்கண நூலான தொல்காப்பியத்தின் மூன்றாம் அதிகாரமான பொருளதிகாரத்தில் காஞ்சி எனும் திணையைக் கூறி அவற்றின் பத்து இயல்களை நூற்பா(77)வில் விளக்கியுள்ளார். அதில் பேய் காஞ்சி தொடா காஞ்சி என்பது போர்க்களத்தில் உள்ள பேய்களைப் பற்றிக்

கூறுகிறது. கடைச் சங்க காலத்தில் பேயனார், பேய் மகள் இளவெயினி. பேயாழ்வார், பூதத்தாழ்வார் எனப் புலவர்களையும் பார்க்கலாம்.

பேய் காஞ்சி என்பது தொல்காப்பியரின் பார்வையில்' பாதுகாக்கும் சுற்றத்தார் எவரின்றிப் புண்பட்டுப் போர்க்களத்தை கிடந்தோனைப் பேய்கள் பாதுகாப்பது. ஆனால் சேர இனத்திற்குச் சேர்ந்த ஐயனாரிதனார் எழுதிய புறப்பொருள் வெண்பாமாலை (நூற்பா-77) வில் பிணங்களால் நிறைந்த போர்க்களத்தில் புண்பட்டு விழுந்த வீரனைப் பேய்கள் பயமுறுத்துவதை பேய்காஞ்சி என்று கூறியுள்ளார் (Elankumaran, 2003). தொல்காப்பியத்தில் தொடாகாஞ்சி என்றால் 'இனிய புன்னகையுடையவளாம் மனைவி இப்போது, புண்பட்டுக் கிடந்த தன் கணவனைப் பேய்கள் தொடாதவாறு காத்தது'. ஆனால் புறப்பொருள் வெண்பா மாலையில் (79) தொடாகாஞ்சி என்றால் எதிரிகளைக் கொல்வதில் நிபுணனான வீரனொருவனின் புண்ணைத் தொடப் பேய்கள் அஞ்சி ஓடுவதைக் குறிக்கிறது.

பதினொன்றாம் நூற்றாண்டைச் சார்ந்த செயங்கொண்டார் எனும் புலவரால் இயற்றப்பட்ட கலிங்கத்துப்பரணி என்ற நூல் முதலாம் குலோத்துங்க சோழனின் கலிங்கப் போர் வெற்றி குறித்துப் பாடப்பட்ட நூல் இதில் பல இடங்களில் பேய்களைப் பற்றிய குறிப்புகளைக் காணலாம் (Puliyur Kesikan, 2010). 'பேய்களைப் பாடியது' எனும் தலைப்பின் அடியில் பேய்களின் இயற்கையை விளக்கியுள்ளார். அவைகளின் காலும், கையும் நீளமானவை என்பதை அழகான உவமையுடன் கூறியுள்ளார்.

கரு நெடும் பனங்காடு முழுமையும்

காலும் கையும் உடையன போல்வன

பேய்களின் வாய்கள் மிகப் பெரியவை குகைகளின் வாயை விடப் பேய்களின் வாய்களே பெரியனவாம்!

வன்பில்த் தோடுவாது செய்வாயின

வாயினால் நிறா இயாத வயிற்றின

வாயைப் போலவே வயிறும் மிக பெரியது (Puliyur Kesikan, 2010). வாயின் வழியே எவ்வளவு உணவு போட்டாலும் நிரம்பாத நிலை இருந்தன. அதே போல குலோத்துங்க சோழனை எதிர்த்துப் போரிட்ட அரசர்களின் மூளைகள் போர்க்களத்தில் சிதறின. அம்மூளையாகிய சேற்றில் வழுக்கி விழுந்த பேய்கள், தம் கணுக்கால் பிறழ்ந்து, ஒரு கால் முடமாயின.

மூளைச் சேற்றில் வழுக்கி விழுந்திட

மொழிபெய்ர்ந்தொருகால் முடமானவும்

உலக்கை பட்டு வலக்கை சொற்றானவும்

அந்த போர்க்களத்தில் இரத்தத்தையும் கொழுப்புடைய குடல்களையும் சேர்த்துச் சமைத்த சூடான கூழ் தெறித்து சில பேய்களுக்கு ஒரு கண் குருடானவும் (148) (Puliyur Kesikan, 2010). சுவையான நிணக்கூழை சமைத்த பேய்கள் கொதிக்கும் கூழை ஆவலோடு குடிக்கும் பொழுது சில பேய்களின் நாக்கு சுருண்டு அதனால் அவை முற்றிலும் ஊமையாகி விட்டன (149). சேனைவீரர்கள் செய்யும் ஆரவாரத்தினால் சில பேய்களின் காதுகள் செவிடாயின (150) இப்படி பதினேழு பாட்டுகளில் செயங்கொண்டார் பேய்களை பற்றிய கருத்துகளைப் பாடியுள்ளார்.

இனி பத்தாம் நூற்றாண்டைச் சார்ந்த கன்னட இலக்கிய நூல்களை இந்த பார்வையில் அதாவது பேய்கள் பற்றிய பொருளில் கவனித்தால், ஆதி கவி பம்ப மற்றும் ரன்ன எனும் புகழ்பெற்ற கவிஞர்கள் எழுதிய, விக்கிரமார்ஜுனவிஜய' (பம்ப) மற்றும் 'ஸாஹஸபீமவிஜய' (ரன்ன) எனும் இரண்டு நூல்களிலும் பேய்களைப் பற்றிய காட்சிகள் காணப்படுகின்றன. விக்கிரமார்ஜுன விஜயத்தின் பதிமூன்றாம் இயலின் (54,55) பாடலொன்றில், பேய்கள் 'அர்ஜுனனோடு சமரசம் செய்து கொள்ளாத துரியோதனனைக் கேலி செய்கின்றன (Ananda Ranga Pillai, 2000). இங்கு வெறும் இரண்டு பாடல்களில் மட்டும் தான் பேய்கள் காட்சி தருகின்றன. ஆனால் ரன்ன கவியின் 'ஸாஹஸ பீம விஜய'த்தில் பேய்

காட்சி மிக அருமையாக உள்ளது. பாடலொன்றில் பேய்களின் கூட்டம் பெரிதான பிணத்தைத் தேடிக்கொண்டு போர்க்களத்திற்க்கு வந்தன. அப்பொழுது புண்பட்ட வீரர்கள், இறந்து கிடைந்த தம் தலைவனின் பிணத்தைச் சாப்பிடப் பேய்கள் தொடாதவாறு பாதுகாத்துக் கொண்டிருந்தார் எனும் விளக்கம் உள்ளது. இது தொல்காப்பியத்தின் தொடாகாஞ்சியை நினைவூட்டுகிறது (Sannaiah, 2000).

செயகொண்டர் பாடிய கலிங்கத்துப்பரணியில்,

சாதுரங்கத் தலைவனைப் போர்க்களத்தில் வந்த

தழை வயிற்றுப் பூதம்தான் அருந்தி, மிக்க

சாதுரங்கம் தலை சுமந்து, கம்ஞ்சூல் கொண்டு

தனிப்படும் கார் எனவரும்: அத்தன்மை காண்பின் (502)

எனும் பாட்டில் போர்களத்துக் குவந்த பருத்த வயிற்றையுடைய பூதம் ஒன்று நால்வகைப் படைத் தலைவனின் உடலை வயிறு நிரம்பத் தின்றுவிட்டு ஆசை தீராமல் இறந்துபட்ட பெருவாரியான குதிரைகளைத் தலையில் சுமந்து கொண்டு வருவதை அழகாகச் சித்திரிக்கிறார். அதே போல பேராசைக் கொண்ட பேய் ஒன்றின் காட்சியை ரன்ன கவியும் அற்புதமாக விளக்கியுள்ளார். 'கொஞ்சம் கொஞ்சமாகச் சாப்பிடுவேன், ஒரே முறை தின்றால் தீர்ந்து போகும் இது என்று எண்ணி, யானையின் பிணத்தைத் தானும் சாப்பிடாமல், பிறர்க்கும் கொடுக்காமல் மனத்தை பசியால் துடிக்கச் செய்தது. என்று பேராசை கொண்ட பூதத்தின் இயற்கையை இங்குக் கூறியுள்ளார் (Sannaiah, 2000).

கலிங்கத்துப் பரணியில் பல மதத்தை சார்ந்த, பல தொழில்களை செய்கின்ற பேய்களை பற்றி விளக்கியுள்ளார்.

அவதிஇல்லாதச்சுவைக்கூழ்கண்டு

அங்காதுஅங்காதுஅடிக்கடியும்

"பவதிபிட்சான்தேகி" எனும்

பனவப்பேய்க்கு வாரீரே

மிகுந்த சுவையுடைய கூழைப் பார்த்து, வாயை திறந்து 'அம்மா பிச்சை போடுங்கள்' என்று அடிக்கடி கேட்கும் பிராமணப் பேய்களுக்கு கூழை ஊற்றுங்கள்.

உயிறைக் கொல்லாச் சமண் பேய்கள்

ஒருப் பொழுது உண்ணும் அவை உண்ண

மயிரைப் பார்த்து நிணத் துகிலால்

வடித்துக் கூழை வாரீரே

எந்த உயிர்களையும் கொல்லாத சமண சமயத்தை சார்ந்த பேய்கள் ஒரு நாளில் ஒரு முறை மட்டும் தான் உணவு உட்கொள்ளுகின்றன. இப்படிபட்ட சமண பேய்களுக்கு கூழில் கலந்திருக்கும் மயிரை வடிகட்டி நன்கு பார்த்து கூழை ஊற்றுங்கள்.

முழுத் தோல் போர்க்கும் புத்தப் பேய்

மூளைக் கூழை, நாக்குழறக்

கழுத்தேகிட்ட, மணம் திரியாக்

கஞ்சியாக வாரீரே

இப்படி பல மதத்தை சார்ந்த பேய்களை பற்றி இங்கு கூறியுள்ளார்.

ரன்ன கவியின் நூலிலும் இதே போலப் பார்ப்பனப் பேய் பற்றிய விளக்குகள் உள்ளன.

புது சிகப்பு வண்ண ஆடையை போட்டுக் கொண்டு, புது பூநூலை அணிந்துக் கொண்டு, பேய்கூட்டத்தை அமைதியாக இருக்கும்படி புது வேதத்தைச் சொல்லிக்கொண்டிருந்தன பார்பனப் பேய்கள் எனும் வரியில் அதை பார்க்கலாம்.

கலிங்கத்துப் பரணியில் பல தொழில்களைச் செய்யும், பல இனத்தை சார்ந்த பேய்களின் எடுத்துகாட்டும் உள்ளன.

துதிக்கைத் துணியைப் பல்லின் மேற்

செவ்வே நிறுத்தித், துதிகையின்

நுதிக்கே கூழை வாரென்னும்

நோக்கப் பேய்க்கு வாரீரே

இறந்தார் வீட்டின் முன் நின்று, தாரை என்னும் வாத்தியத்தை ஊதும் தொழில் செய்யும் 'நோக்க' எனும் குலத்தைச் சார்ந்த பேய்க்குக் கூழ் வாங்கப் பாத்திரம் கிடைக்கவில்லை (Puliyur Kesikan, 2010). அதனால், அது போரில் வெட்டப்பட்டு கீழே விழுந்த யானையினது தும்பிக்கைத் துண்டத்தில் ஒன்றை எடுத்து வாயில் வைத்து பற்களால் பற்றிக்கொண்டு, 'தும்பிக்கையின் நுனியில் கூழை ஊற்று' என்று சொல்லிக்கொண்டிருக்கிறது.

கணக்கப் பேய்க்கு மகங்களிக்கக்

கையாலெடுத்து வாரீரே

கணக்கிட்டு உரைக்கும் தொழிலுடைய பேய்க்குக் கூழைக் கையால் எடுத்து உள்ளம் மகிழ ஊற்றுங்கள் (Puliyur Kesikan, 2010).

ரன்ன கவியின் நூலிலும் பல இனத்தைச் சார்ந்த, பல தொழில்களைச் செய்யும் பேய்களின் காட்சிகளைப் பார்க்கலாம். போர்க்களத்தில் பிணங்கள் குவிந்து கொண்டிருந்ததை பார்த்த பேராசைக் கொண்ட வணிக குலத்தைச் சார்ந்த பேய்கள், மிகத் தொலைவிலிருந்து வந்த பேய்க் கூட்டங்களுக்கு இறைச்சியை விற்பனைச் செய்து கொண்டிருந்தன.20 அதே போலக் கவிதையை எழுதும் தொழிலை செய்து கொண்டிருந்த பேய்கள் புது பூத மொழியில் கவிதைகளைப் பாடி, பெரிய புலவர்களை மிஞ்சுவது போல் எழுதிக் கொண்டிருந்தன (Sannaiah, 2000).

கலிங்கத்துப்பரணியில் பேய்களின் குறும்பு குணம் சில இடங்களில் சித்திரிக்கப்பட்டுள்ளன.

வழுதியர் வரை முழை நுழை வடிவு இது என

மத கரி வயிறுகள் புக நுழைவன சில

பாண்டியர் மலைக் குகைகளில் நுழைவது போல், சில பேய்கள் மதயானைகளின் வயிறுகளில் புகுந்து விளையாடின. மகிழ்ச்சியால் தங்கள் மேலாடையை வீசி எறிந்துக் கொண்டும் பேய்கள் கூத்தாடின. சிற்சில பேய்கள் தலை விரிகோலத்தோடு களிப்பின் மிகுதியால் முதுகு காட்டித் திரும்பி ஓடலாயின (Puliyur Kesikan, 2010).

ரன்ன கவியின் நூலிலும் குறும்பு செய்யும் பேய்களுக்கு எடுத்துக்காட்டுகள் உள்ளன. ஒரு பேய் போர்க்களத்தில் நடந்து வரும் துரியோதனனைப் பார்த்து கேலி செய்கிறது "குருது ரோணரின் இரத்தத்தைக் குடிப்போம் என்றால் அவர் பிராமணர், உன் தம்பியின் இரத்தத்தைக் குடிப்போம் என்றால் ஏற்கெனவே பீமன் உறிஞ்சி விட்டான், பீஷ்மரின் இரத்தத்தைக் குடிப்போம் என்றால் அவர் இன்னும் சாகவில்லை. ஆகையால் துரியோதனனே நான் உன் இரத்தத்தைக் குடிக்க விரும்புகிறேன்' என்று அவனுக்குக் கோபம் மூட்டியது (Sannaiah, 2000). ஆனால் அவன் எதுவும் பேசாமல் விலகி நடந்துக்கொண்டிருந்தான். ஆனால் பேய் அவனைப் போகவிடாமல்' நில் துரியோதனனே, பதில் அழிக்காமல் போனால் சிவனின் மேல் ஆணை. அதையும் மீறிப் போனால் பீமனின் மேல்ஆணை' என்றது. பீமனின் பெயர் கேட்ட துரியோதனன் கோபம் கொண்டு கையிலிருந்த கதையால் பேய்களை

அடிக்கப் போனான். அதை பார்த்து பேய் தானும் ஒரு குச்சியைக் கையில் பிடித்து அடிப்பது போல் நடித்துக் காட்டியது (Elankumaran, 2003).

புறநானூறிலும் பேய்காட்சிகள் மிகையாகவே உள்ளன. போர்க்களத்தின் பயங்கரமான சூழ்நிலையை இங்கு விளக்கியுள்ளார். 'பெண் பேய்களால் சுற்றப்பட்ட போர்க்களத்தில் பிணத்தைப் பருந்துகள் தொடாத படி பேய்கள் பாதுகாத்துக் கொண்டிருந்தன. பெண் பேய் ஒன்று தன் காலுக்குச் சுற்றிக்கொண்டிருந்த வீரனின் குடலை வீசி எறிந்து அலறிக்கொண்டிருந்தது. சில பேய்கள் மிகையான பிணத்தை அழித்த அரசனுக்கு நன்றி தெரிவித்துக் கொண்டிருந்தன. பேய்கள் வீட்டுக்குள் வரக்கூடாது என்று வாசற்படியில் வேம்பு இலைகளைக் கட்டி இருந்ததை, வெண்கடுகை போடுவதை இங்குக் குறிப்பிட்டுள்ளன.

இப்படி சங்க நூல்களிலும், பத்தாம் நூற்றாண்டைச் சார்ந்த கன்னட இலக்கியத்திலும், பதினோராம் நூற்றாண்டின் இறுதியில் அல்லது பன்னிரண்டாம் நூற்றாண்டின் முற்பகுதியில் இருந்த சயங்கொண்டாரின் நூலிலும் பேய் காட்சிகள் சமமாக காணப்படுகின்றன.

## முடிவுரை

இவற்றை ஒப்பிட்டுப் பார்த்தால் கன்னட மற்றும் தமிழ் இலக்கியங்களில் சில பொருள்களில் ஒற்றுமை இருப்பதை அரியலாம். இது திராவிட மொழிகளுக்கு இடையிலுள்ள நட்பு எவ்விதமானது என்பதைக் குறிக்கிறது. மேலும் இந்த ஒற்றுமை கலிங்கத்துப்பரணி மற்றும் ரன்ன கவியின் 'ஸாஹஸ பீம விஜய'த்தில் தான் மிகையாக தோன்றுகின்றன. இந்த பேய் காட்சிகளின் விளக்கத்தை திராவிட மொழிகளின் பண்பாடு என்று எடுத்துக் கொண்டால், இது பண்டைய கன்னட கவிஞரான பம்பனை விட ரன்னனில் விரிவாக உள்ளது. ஆகையால் இக்கவி திராவிட பண்போடு நெருக்கமான தொடர்பு கொண்டுள்ளான் என்று யூகிக்கலாம். அதற்குச் சான்றாக இன்னொரு முக்கிய விஷயம் இங்குக் குறிப்பிடலாம். பதிமூன்றாம் நூற்றாண்டில் பவணந்தி முனிவரால் எழுதப்பட்ட நன்னூல் எனும் இலக்கணநூல், இலக்கண நூலில் வரும் நூற்பாக்களின் விதிமுறை எப்படி இருக்கவேண்டும் என்று கூறுகிறது. அவை ஆற்றொழுக்கு, தவளை பாய்த்து, பருந்துப் பார்வை, சிங்க நோக்கு என்று நான்கு வகைகள். அவற்றில் ஒன்றான சிங்கநோக்கு எனும் விதிமுறையைக் கன்னட கவிஞரான ரன்னன் மகாபாரதத்தின் கதையைச் சுருக்கமாக்கி கூறும் போது பின்னணியாக முன்பு நடந்தகதையை 'சிம்மாவலோகன' அதாவது, இலக்கணநூலிற்குக் கூறிய சிங்கநோக்கு எனும் விதியை பின்பற்றியுள்ளார். அவ்விதி முறை கன்னட இலக்கிய உலகத்திற்கு புதிதானது. ஆனால்அதன் காலடிச்சுவடுகளை நன்னூலில் காணலாம். திராவிட மொழிகளுக்கு இடையில் இப்படிப்பட்ட ஒப்பீடு ஆராய்சிகளைச் செய்வதன் மூலமாக அவைகளுக்கு இடையிலுள்ள ஒற்றுமை, வேற்றுமை, தாக்கங்கள் எல்லாவற்றையும் அறிந்து கொள்ளலாம்.

### References

Elankumaran, R., (2003) Purappporul Venba Maalai, Koviloor Madalayam, Chennai, India.

Puliyur Kesikan, (2010) Kalingattuparani, Shree Shenbaga Pathippagam, Chennai, India.

Ananda Ranga Pillai, (2018) Pamba Bharatham, Kannada Saahithya Parishath, Bangalore, India.

Sannaiah, P.S., (2000) Ramegowda, Ranna Sahasa Bhima Vijayam, Mysore University, Chennai, India.

Elankumaran, R., (2003) Purananuru, Koviloor Madalayam, Chennai, India.

**Funding:** NIL

**Acknowledgment:** NIL

**Conflict of Interest:** NIL

**About the License:**

Attribution 4.0 International (CC BY 4.0)

© The author 2021. The text of this article is licensed under a Creative Commons Attribution 4.0 International License

# ಕಂಜಣಿ

(ವಿಮರ್ಶಾ ಲೇಖನಗಳು)

ಮಲ್ಲೇಶಪ್ಪ ಸಿದ್ರಾಂಪೂರ

ಮೇಘನಾ ಪ್ರಕಾಶನ, ಕೊಪ್ಪಳ

ಕಂಪಣ
(ವಿಮರ್ಶಾ ಲೇಖನಗಳು)
ಮಲ್ಲೇಶಪ್ಪ ಸಿದ್ರಾಂಪೂರ
ಪ್ರಥಮ ಮುದ್ರಣ : 2022
© ಲೇಖಕರು
ಬೆಲೆ: 90/-
ಪುಟಗಳು: 114
ಪ್ರತಿಗಳು: 500
ಪುಸ್ತಕದ ಆಕಾರ: 1/8 ಕ್ರೌನ್
ಬಳಸಿದ ಕಾಗದ: 80 ಜಿಎಸ್‌ಎಮ್
ಎನ್.ಎಸ್.ಮ್ಯಾಪಲಿಥೋ
ಐಎಸ್‌ಬಿಎನ್:
978-93-5659-040-3
ಮುಖಪುಟ ವಿನ್ಯಾಸ
ಕೆ.ಮಂಜುನಾಥ
ಪ್ರಕಾಶಕರು
ಮೇಘನ ಪ್ರಕಾಶನ
'ಕನಸು'
ಮಹಾಂತಯ್ಯನಮಠ ಶಾಲೆ ಎದುರಿಗೆ
ಬಿ.ಟಿ.ಪಾಟೀಲ ನಗರ,
ಕೊಪ್ಪಳ-583231

**KAMPANA**
(Critical Articles)
*by*
**Malleshappa Sidrampur**
First Edition: 2022
© Author
Price: Rs.90/-
No. of Pages: 114
Copies: 500
Book Size: 1/8 Crown
Paper : 80 GSM N.S.Maplitho
ISBN:
978-93-5659-040-3
Cover Page Design
K.Manjunath
*Published by*
Meghana Prakashana
'KANASU'
Opp: Mahanthayyanamath
School, B.T.Patil Nagar,
Koppal-583231

# ಕಂಪಣ

ಮಲ್ಲೇಶಪ್ಪ ಸಿದ್ರಾಂಪೂರ

ಬಾಡಿಗೆಯ ಚಕ್ಕಡಿಗೆ ಎಣ್ಣೆಯಿಲ್ಲದ ಕೀಲ
ಎಳೆಯಲಾರದ ಎತ್ತು ಎಳೆಯುತ್ತದೆ,
ಧೂಳಿ ಮಾಂಕಾಳಿಯೊಲು ಬುಸುಗುಟ್ಟಿ ಬರುತಿರುವ
ಕಾರು ಘೋಂಕರಿಸುತ್ತ ಒತ್ತರಿಸಿದೆ!

–ಚೆನ್ನವೀರ ಕಣವಿ

ISBN 978-93-5659-040-3
9 789356 590403
ಬೆಲೆ: 90/-
ಮೇಘನಾ ಪ್ರಕಾಶನ, ಕೊಪ್ಪಳ

# ಕಂದಳಿ

(ವಿಮರ್ಶಾ ಲೇಖನಗಳು)

ಮಲ್ಲೇಶಪ್ಪ ಸಿದ್ರಾಂಪೂರ



ಮೇಘನಾ ಪ್ರಕಾಶನ, ಕೊಪ್ಪಳ

**ಕಂದಳಿ**
(ವಿಮರ್ಶಾ ಲೇಖನಗಳು)

**ಮಲ್ಲೇಶಪ್ಪ ಸಿದ್ರಾಂಪೂರ**
ಪ್ರಥಮ ಮುದ್ರಣ : 2022

© ಲೇಖಕರು

ಬೆಲೆ: 100/–
ಪುಟಗಳು: 120
ಪ್ರತಿಗಳು: 500
ಪುಸ್ತಕದ ಆಕಾರ: 1/8 ಡೆಮಿ
ಬಳಸಿದ ಕಾಗದ: 80 ಜಿಎಸ್ ಎಮ್
ಎನ್.ಎಸ್.ಮ್ಯಾಪಲಿಥೋ
ಐಎಸ್‌ಬಿಎನ್
978–93–5659–190–5
ಮುಖಪುಟ ವಿನ್ಯಾಸ
ಕೆ.ಮಂಜುನಾಥ
ಪ್ರಕಾಶಕರು
ಮೇಘನ ಪ್ರಕಾಶನ
'ಕನಸು'
ಮಹಾಂತಯ್ಯನಮಠ ಶಾಲೆ ಎದುರಿಗೆ
ಬಿ.ಟಿ.ಪಾಟೀಲ ನಗರ,
ಕೊಪ್ಪಳ–583231

**KANDALI**
**(Critical Articles)**
*by*
**Malleshappa Sidrampur**
First Edition: 2022

© Author

Price: Rs.100/-
No. of Pages: 120
Copies: 500
Book Size: 1/8 Demy
Paper :
80 GSM N.S. Maplitho
ISBN:
978-93-5659-190-5
Cover Page Design
K.Manjunath
*Published by*
Meghana Prakashana
'KANASU'
Opp Mahanthayyanamath School
B.T.Patil Nagar,
Koppal-583231

# ಕಂದಳಿ

ಮಲ್ಲೇಶಪ್ಪ ಸಿದ್ರಾಂಪೂರ

ಕಾಲವೆಂದರೆ ಏನು? ರವಿಯ ದೂರಕೆ ನಾನು
ದಬ್ಬಿದೆನು: ಆ ಆತ್ಮಬಲವೆ ಕಾಲ!
ದೇಶವೆಂದರೆ ಏನು? ಒಲಿದು ಭೂಮಿಯ ನಾನು
ತಬ್ಬಿದೆನು; ಆ ಆತ್ಮದೊಲವೆ ದೇಶ!

-ಕುವೆಂಪು

ಇಲ್ಲಸಲ್ಲದ ಕಾಲತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
ಎಲ್ಲರೂ ಒಂದಾಗಿ ಒಂದಾಗಿ ನಡೆದು
ಹೋಗೋಣ ನಾವೆಲ್ಲ ಸೀಮೆಯನು ದಾಟಿ।

-ದ.ರಾ.ಬೇಂದ್ರೆ

ಮೇಘನಾ ಪ್ರಕಾಶನ, ಕೊಪ್ಪಳ

ISBN 978-93-5659-190-5

ಬೆಲೆ: 100/-

ಎಸ್.ಬಿ.ಡಿ. ಪ್ರಕಾಶನ

ವಿದ್ಯಾರ್ಥಿ ಸ್ನೇಹಿ
ಕಡಿಮೆ ಬೆಲೆಯ ಆವೃತ್ತಿ

# ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಸಂಪಾದಕರು
ಮಲ್ಲೇಶಪ್ಪ ಸಿದ್ರಾಂಪೂರ



ಜೆರಾಕ್ಸ್ ಬೇಡ ಎಂದು ಹೇಳಿ

**AADHUNIKA KANNADA SAHITYA CHARITRE** : (*Textbook for B.A. Second Semester of Gulbarga University*) *Chief Editor*: **Prof. H.T. Pote**, *Edited by*: **Malleshappa Sidrampur**, Published by **Basavaraj G. Konek**,**Sri Siddalingeswara Book Depot & Prakashana**, Main Road, Kalaburagi - 585101. Mobile : 9448124431; 9880020808; 9731828999

Frist Edition : 2022

Pages : 152

Price : ₹ 70/-

© : Publisher

Book Size : Crown 1/8

**ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ** (ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಬಿ.ಎ. ಎರಡನೆಯ ಸೆಮಿಸ್ಟರ್ ಐಚ್ಛಿಕ ಪಠ್ಯಪುಸ್ತಕ) *ಪ್ರಧಾನ ಸಂಪಾದಕರು:* **ಪ್ರೊ. ಎಚ್. ಟಿ. ಪೋತೆ.** ಅಧ್ಯಕ್ಷರು ಸ್ನಾತಕ ಕನ್ನಡ ಅಭ್ಯಾಸ ಮಂಡಳಿ ಹಾಗೂ ಡೀನರು ಕಲಾ ವಿಭಾಗ. *ಸಂಪಾದಕರು:* **ಮಲ್ಲೇಶಪ್ಪ ಸಿದ್ರಾಂಪೂರ.** **ಪ್ರಕಾಶಕರು : ಬಸವರಾಜ ಜಿ. ಕೊನೇಕ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ,** ಮುಖ್ಯರಸ್ತೆ, ಕಲಬುರಗಿ – 585101, ಮೊ. 9448124431, 9880020808, 9731828999

| | | |
|---|---|---|
| **ಹಕ್ಕುಗಳು** | : | **ಪ್ರಕಾಶಕರು** |
| **ಪ್ರಥಮ ಮುದ್ರಣ** | : | **2022** |
| **ಪುಟಗಳು** | : | **152** |
| **ಬೆಲೆ** | : | **₹ 70/-** |
| **ಬಳಸಿದ ಕಾಗದ** | : | **60 ಜಿಎಸ್ಎಂ ಎನ್.ಎಸ್ ಮ್ಯಾಪ್‌ಲಿಥೋ** |
| **ಪುಸ್ತಕದ ಆಕರ** | : | **ಕ್ರೌನ್ 1/8** |
| **ISBN** | : | **978-93-93167-35-4** |

ಮುದ್ರಣ : ಓಂಶಕ್ತಿ ಗ್ರಾಫಿಕ್ಸ್, ಬೆಂಗಳೂರು

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

## ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನದ ಪುಸ್ತಕಗಳು



















**ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ**
ಮುಖ್ಯಬೀದಿ, ಕಲಬುರಗಿ – 585 101
ಮೊ. 9448124431, 9880020808, 9731828999
Website: www.siddalingeshwar.com
Email: sbdglb@gmail.com, info@siddalingeshwar.com

ISBN: 978 - 93 - 93167 - 35 - 4

ಕನ್ನಡ ಸಾಹಿತ್ಯ : ಪುನರಾವಲೋಕನ ಮಾಲೆ

ಸಂಪುಟ–೮

ಪ್ರಧಾನ ಸಂಪಾದಕರು

ಡಾ. ಕಲ್ಯಾಣರಾವ ಜಿ. ಪಾಟೀಲ

# ದಲಿತ-ಬಂಡಾಯ ಸಾಹಿತ್ಯ

ಸಂಪಾದಕರು

ಡಾ. ರಾಮಚಂದ್ರ ಗಣಾಪೂರ



೧೧. ದಲಿತ-ಬಂಡಾಯ ವಿಮರ್ಶೆ ೧೭೪
– ಡಾ. ಭೀಮಾಶಂಕರ ಬಿರಾದಾರ

೧೨. ದಲಿತ-ಬಂಡಾಯ ಸಾಹಿತ್ಯ :
ಕನ್ನಡ ಕಾವ್ಯಮೀಮಾಂಸೆಯ ವಿವಿಧ ಚಿಂತನೆಗಳು ೧೮೨
– ಡಾ. ವಿಜಯಕುಮಾರಿ ಕರಿಕಲ್

೧೩. ಕನ್ನಡ ದಲಿತ ಬಂಡಾಯ ಸಾಹಿತ್ಯದ : ಕಾವ್ಯ ಧೋರಣೆಗಳು ೧೮೯
– ಡಾ. ಡಿ.ಬಿ. ಶಿವರುದ್ರಪ್ಪ

೧೪. ದಲಿತ-ಬಂಡಾಯ ಕಾವ್ಯದಲ್ಲಿ ಮಹಿಳಾ ಚಿತ್ರಣ ೧೯೬
– ಡಾ. ನಾಯಕರ ಹುಲುಗಪ್ಪ

೧೫. ದಲಿತ-ಬಂಡಾಯ ಘಟ್ಟದ ಕಥೆಗಾರ್ತಿಯರು ೨೦೩
– ಡಾ. ಸುವರ್ಣ ಎಂ. ಹಿರೇಮಠ

೧೬. ದಲಿತ-ಬಂಡಾಯ ಸಾಹಿತ್ಯ ಮತ್ತು ಪ್ರಗತಿಶೀಲ ೨೧೬
– ಡಾ. ಬಸವರಾಜ.ಪಿ. ನಾಯಕ

೧೭. ದಲಿತ-ಬಂಡಾಯ ಸಾಹಿತ್ಯ ಮತ್ತು ಸ್ತ್ರೀವಾದ ೨೨೬
– ಡಾ. ಶಿವಗಂಗಾ ರುಮ್ಮಾ

೧೮. ದಲಿತ-ಬಂಡಾಯ ಸಾಹಿತ್ಯ ಮತ್ತು ಮಾರ್ಕ್ಸ್‌ವಾದ ೨೩೬
– ಡಾ. ಮಲ್ಲೇಶಪ್ಪ ಸಿದ್ರಾಂಪೂರ

೧೯. ದಲಿತ-ಬಂಡಾಯ ಸಾಹಿತ್ಯ ಮತ್ತು ಅಂಬೇಡ್ಕರ್‌ವಾದ ೨೪೩
– ಡಾ. ಪ್ರೇಮಾ ಅಪಚಂದ

೨೦. ದಲಿತ-ಬಂಡಾಯ ಸಾಹಿತ್ಯದ ಹೊಸ ಸವಾಲುಗಳು ೨೬೭
– ಡಾ. ಎಂ.ಎಸ್. ಇಟಗಿ

೨೧. ದಲಿತ ಸಾಹಿತ್ಯ ಮತ್ತು ಚಳವಳಿ ೨೮೦
– ಡಾ. ಎಂ.ಬಿ. ಕಟ್ಟಿ

೨೨. ಇಪ್ಪತ್ತೊಂದನೆಯ ಶತಮಾನದ ದಲಿತ ಕಾವ್ಯ :
ವಸ್ತು ಮತ್ತು ಧೋರಣೆ ೨೯೦
– ಡಾ. ಚೆನ್ನರಾಜು.ಎಂ ಬಸಪ್ಪನದೊಡ್ಡಿ

೨೩. ದಲಿತ ಕಥೆಗಾರರು ಮತ್ತು ಕಥೆಗಳಲ್ಲಿ ಭಾಷೆ ೩೦೧
– ಡಾ. ಗೌತಮ ಬಕ್ಕಪ್ಪ ಸಂಗಣ್ಣೋರ

## ೧೮

# ದಲಿತ-ಬಂಡಾಯ ಸಾಹಿತ್ಯ ಮತ್ತು ಮಾರ್ಕ್ಸ್‌ವಾದ

■ ಡಾ. ಮಲ್ಲೇಶಪ್ಪ ಸಿದ್ರಾಂಪೂರ

*

*"Marxism, famously a cry of pain rather than a science, has had its poets, but so has every other major religious heresy."*

**-Harold Bloom**

*

**"ನಾ**ವು ಯಾವುದನ್ನು ಚರಿತ್ರೆಯೆಂದು ಹೇಳುತ್ತೇವೆಯೋ ಅದು ಅಂತಿಮವಾಗಿ ಮನುಷ್ಯನ ಚಹರೆಗಳನ್ನೇ ಹೇಳುತ್ತದೆ. ಜೊತೆಗೆ ಯಾವುದನ್ನು ನಾವು ಮನುಷ್ಯತ್ವ ಎಂದು ಹೇಳುತ್ತೇವೆಯೋ ಅದು ಮೂಲತಃ ಚಾರಿತ್ರಿಕ ಆಗುವಿಕೆಗೆ ಸಂಬಂಧಪಟ್ಟದ್ದು"- ಮಾರ್ಕ್ಸ್‌ನ ಈ ಮಾತು ಸಾರ್ವತ್ರಿಕ ಅನುಭವದಿಂದ ಕೂಡಿದ್ದು, ಚರಿತ್ರೆಯನ್ನು ಅಧ್ಯಯನ ಮಾಡಲು ಉತ್ತಮವಾದ ಸಂಯೋಜಿತ ಚೌಕಟ್ಟನ್ನು ರೂಪಿಸುತ್ತದೆ. ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಕೋನವನ್ನು 'ಚಾರಿತ್ರಿಕ ಭೌತವಾದ' ಎಂದು ಕರೆಯಲಾಗುತ್ತದೆ. ಆದರ್ಶವಾದಿಗಳ ಪ್ರಾಚೀನ ಹಾಗೂ ಪೂಜ್ಯನೀಯ ಪೂರ್ವಾಗ್ರಹಗಳಾಧಾರಿತ ಚಾರಿತ್ರಿಕ ನೋಟಕ್ಕೆ ಬದಲಾಗಿ ಸಾಮಾಜಿಕ ರಚನೆಗಳ ಕಾರ್ಯನಿರ್ವಹಣೆಯ ಹಿನ್ನೆಲೆಯಲ್ಲಿ ಚರಿತ್ರೆಯನ್ನು ಗ್ರಹಿಸುತ್ತಾನೆ ಮಾರ್ಕ್ಸ್.

ಯಾವುದೇ ಸಮಾಜ ಶೂನ್ಯದಿಂದ ಹುಟ್ಟಿದ್ದಲ್ಲ. ಅದಕ್ಕೆ ಅದರದೇ ಆದ ಚಾರಿತ್ರಿಕತೆಯಿರುತ್ತದೆ. ಹಾಗಾಗಿ ವರ್ತಮಾನವನ್ನು ವಿಶ್ಲೇಷಿಸುವುದಕ್ಕೆ ಮೊದಲು ನಾವು ಅರಿತುಕೊಳ್ಳಬೇಕಾದುದು ಚರಿತ್ರೆಯನ್ನು. ಚರಿತ್ರೆಯ ಚಹರೆಗಳು ವರ್ತಮಾನದ ಅಸ್ಮಿತೆಯ ಕಟ್ಟಿಕೊಳ್ಳುವಿಕೆಗೆ ಅನೇಕ ರೀತಿಯಲ್ಲಿ ಆಧಾರವಾಗಿವೆ. ಅಜ್ಜಿ ಹೇಳುವ ಕಥೆಗಳಿಂದ ಮೊದಲ್ಗೊಂಡು ಆಧುನಿಕ ಚರಿತ್ರಕಾರರು ಕಟ್ಟಿಕೊಂಡಿರುವ ಚರಿತ್ರೆಗಳೆಲ್ಲವನ್ನೂ ಗಮನಿಸಿದಾಗ ಚರಿತ್ರೆಯು ಎಷ್ಟೊಂದು ವೈಭವೋಪೇತವಾಗಿದೆಯೋ ಅಷ್ಟೇ ಸಲ್ಲದ ಸಂಗತಿಗಳನ್ನು



ತನ್ನ ಒಡಲಲ್ಲಿಟ್ಟುಕೊಂಡದ್ದು ಬಹಿರ್ಗತವಾಗುತ್ತದೆ. ಉಳ್ಳವರ ದರ್ಪ-ಇಲ್ಲದವರ ಆರ್ತನಾದ; ಸಂಪತ್ತು-ಬಡತನ; ಸೊಬಗು-ದಾರಿದ್ರ್ಯ; ಭದ್ರತೆ-ಅಭದ್ರತೆ; ಕೇಕೆ-ಅಳು; ಸಂಭ್ರಮ-ಸಂಕಟ, ಅಸಹನೆ-ಸಹನೆ... ಇಂತಹ ಚರಿತ್ರೆಯಲ್ಲಿನ ಚಹರೆಗಳನ್ನು ಎರಡೂ ನೆಲೆಗಳಿಂದ ಗುರುತಿಸಿದಾಗ ಮಾತ್ರ ನಿಜ ಚರಿತ್ರೆಯ ರೂಪ-ಸ್ವರೂಪ ಕಟ್ಟಲಿಕ್ಕೆ ಸಾಧ್ಯ. ಇಂತಹ ಪ್ರಯತ್ನಗಳು ಆಧುನಿಕ ಕಾಲಘಟ್ಟದಲ್ಲಿ ನಡೆದಿವೆ, ನಡೆಯುತ್ತಲೂ ಇವೆ. ಚರಿತ್ರೆಯ ರೂಪ-ಸ್ವರೂಪಗಳು ದೃಷ್ಟಿಕೋನಕ್ಕನುಗುಣವಾಗಿ ಬದಲಾಗುತ್ತಲೇ ಇವೆ. ಅದರಲ್ಲೂ ಮಾನವೀಯ ಅಂತಃಕರಣವುಳ್ಳ, ಜೀವಪರ ಕಾಳಜಿಯುಳ್ಳ, ಮುಖ್ಯವಾಹಿನಿಯು ನಿರಾಕರಿಸಲ್ಪಟ್ಟ ಸಮುದಾಯಗಳ ಅಸ್ಮಿತೆಯನ್ನು ಹುಡುಕುವ ಪ್ರಗತಿಪರರು, ಚಿಂತನಾಶೀಲರು ಚರಿತ್ರೆಯನ್ನು ಕಾಲಕಾಲಕ್ಕೆ ಪುನರ್‌ಮೌಲ್ಯೀಕರಿಸುತ್ತಲೇ ಅದರ ಚಹರೆಗಳನ್ನು ಗುರುತಿಸುತ್ತಿದ್ದಾರೆ. ಇಂತಹ ಚಿಂತನಶೀಲರಲ್ಲಿ ಕಾರ್ಲ್‌ಮಾರ್ಕ್ಸ್ ಒಬ್ಬ. ಮಾರ್ಕ್ಸ್ ಒಂದೆಡೆ ಹೇಳುತ್ತಾನೆ: "ಮಾನವ ಸಮಾಜದ ಚರಿತ್ರೆಯೆಲ್ಲವೂ ವರ್ಗ ಹೋರಾಟಗಳ ಚರಿತ್ರೆ".

ಮಾರ್ಕ್ಸ್‌ವಾದವು ಎಲ್ಲಾ ಮಾನವ ಇತಿಹಾಸವನ್ನು ವರ್ಗ ಹೋರಾಟಗಳ ಇತಿಹಾಸವಾಗಿ ನೋಡುವ ವಿಚಾರಗಳ ಸಮೂಹ. ನಿರ್ದಿಷ್ಟವಾಗಿ ಬಂಡವಾಳಶಾಹಿ ವ್ಯವಸ್ಥೆಯ ಚಲನಶೀಲತೆ ಮತ್ತು ವಿರೋಧಾಭಾಸಗಳನ್ನು ವಿಶ್ಲೇಷಿಸಲು ಮತ್ತು ಬಂಡವಾಳಶಾಹಿಗಳನ್ನು ಉರುಳಿಸಲು ಮತ್ತು ಶ್ರೇಷ್ಠ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಹಾಗೂ ಕಾರ್ಮಿಕ ವರ್ಗವು ಹೇಗೆ ಐತಿಹಾಸಿಕ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಸಾಬೀತುಪಡಿಸಲು ಮಾರ್ಕ್ಸ್‌ವಾದವು ಪ್ರಯತ್ನಿಸುತ್ತದೆ.

ಆಧುನಿಕ ಜಗತ್ತಿನ ಅದ್ಭುತ ಪರಿವರ್ತನೆಗೆ ಕಾರಣವಾದ ಮಾರ್ಕ್ಸ್‌ವಾದವು ಸಾಂಪ್ರದಾಯಿಕ ಯಾಜಮಾನ್ಯ ವ್ಯವಸ್ಥೆಯ ಅನೇಕ ಮುಖಗಳನ್ನು ಪರಿಚಯಿಸಿತು. ಆರ್ಥಿಕವಾಗಿ ಸದೃಢವಾದ ವರ್ಗವು ದುರ್ಬಲ ವರ್ಗವನ್ನು ಹೇಗೆ ರೀತಿ ಬಳಸಿಕೊಳ್ಳುತ್ತದೆ, ಯಾವ್ಯಾವ ನೆಲೆಯಲ್ಲಿ ಅವರನ್ನು ಶೋಷಿಸುತ್ತದೆ ಎನ್ನುವುದನ್ನು ಈ ವಾದ ತೋರಿಸಿಕೊಟ್ಟಿದೆ. ಇಂತಹ ವಿಶಿಷ್ಟ ವಾದವು ನಂತರ ಕಾಲದಲ್ಲಿ ಸಾಹಿತ್ಯದಲ್ಲಿ ಪ್ರತಿಫಲನಗೊಂಡದ್ದುಂಟು. ಅಂದರೆ ಸಾಮಾಜಿಕ ವರ್ಗ ವ್ಯವಸ್ಥೆಯನ್ನು ಮಾರ್ಕ್ಸ್‌ವಾದವು ಗ್ರಹಿಸಿದ ನೆಲೆಯಲ್ಲಿಯೇ ಸಾಹಿತ್ಯವೂ ಸಹ ಗ್ರಹಿಸ ತೊಡಗಿತು. ಮಾರ್ಕ್ಸ್ ಗುರುತಿಸಿದ ಸಂಗತಿಗಳನ್ನಿಟ್ಟುಕೊಂಡೇ ಸಾಹಿತ್ಯವು ವರ್ಗ ವ್ಯವಸ್ಥೆಯ ಸಮಾಜವನ್ನು ವಿಭಿನ್ನವಾಗಿ ನಿರ್ವಚಿಸಿತು. ಇಂತಹ ನಿರ್ವಚನದ ಬಗೆಗಳು ಪ್ರದೇಶಕ್ಕೆ, ಕಾಲಕ್ಕೆ ಅನುಗುಣವಾಗಿ ಭಿನ್ನವಾಗಿದ್ದಾಗಲೂ ಅದರ ಮೂಲ ತಾತ್ವಿಕ ದೃಕ್ಪಥ ಒಂದೇ ಆಗಿದೆ. ಈ ಹಿನ್ನೆಲೆಯಲ್ಲಿಯೇ ಇಲ್ಲಿ ಕನ್ನಡದ ದಲಿತ-ಬಂಡಾಯ ಸಾಹಿತ್ಯವು ಅರಗಿಸಿಕೊಂಡ ಮಾರ್ಕ್ಸ್‌ವಾದದ ಮಾದರಿಯನ್ನು, ಅದಕ್ಕೆ ತೊಡಿಸಿದ ಸ್ಥಳೀಯ ಹೊರಮೈಯನ್ನು, ತುಂಬಿದ ಒಳ ಹೂರಣದ ಪ್ರಾತಿನಿಧಿಕ ಅಂಶಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ದಲಿತ-ಬಂಡಾಯ ಸಾಹಿತ್ಯದ ಚರ್ಚೆಗೆ ತೊಡಗುವ ಮುನ್ನ ಒಂದಿಷ್ಟು ಮಾರ್ಕ್ಸ್‌ವಾದದ ಪ್ರಮುಖ ಅಂಶಗಳನ್ನು ಒಮ್ಮೆ ಅವಲೋಕಿಸಬೇಕು.- ನಮ್ಮ ಸಮಾಜ ಬಹುಕಾಲದಿಂದಲೂ ಎರಡು ವರ್ಗಗಳಾಗಿ ವಿಭಜನೆಗೊಂಡಿದೆ. ಅವು ಶೋಷಕ ವರ್ಗ

ಮತ್ತು ಶೋಷಣೆಗೆ ಗುರಿಯಾಗುವ ವರ್ಗ. ಭೂಮಿ, ಕೈಗಾರಿಕೆಗಳಂತಹ ಉತ್ಪಾದನಾ ಸಾಧನಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಲಾಭಾರ್ಜನೆಯನ್ನೇ ಧ್ಯೇಯವಾಗಿಸಿಕೊಂಡು ಕಾರ್ಮಿಕರನ್ನು, ಬಳಕೆದಾರರನ್ನು ದೋಚಿಕೊಳ್ಳುವ ಯಾಜಮಾನ್ಯವೇ ಶೋಷಕ ವರ್ಗ. ಅವರು ತಮ್ಮ ಕೈಯಲ್ಲಿರುವ ಉತ್ಪತ್ತಿ ಸಾಧನಗಳಲ್ಲಿ ನೇರವಾಗಿ ಕೆಲಸ ಮಾಡುವುದಿಲ್ಲ. ಅವುಗಳಲ್ಲಿ ಹೂಡಿಕೆ ಮಾತ್ರ ಮಾಡುತ್ತಾರೆ. ಈ ಸಮಾಜದಲ್ಲಿ ಹೂಡಿಕೆದಾರರು, ಭೂಮಾಲೀಕರು, ಲೇವಾದೇವಿಗಾರರು ಮತ್ತು ಕಳ್ಳ ವ್ಯಾಪಾರಿಗಳು ಶೋಷಕ ವರ್ಗಕ್ಕೆ ಸೇರಿದವರು. ಎರಡನೆಯ ವರ್ಗ ಶೋಷಣೆಗೆ ಗುರಿಯಾಗುವ ಕಾರ್ಮಿಕ ವರ್ಗ. ಈ ವರ್ಗಕ್ಕೆ ತಮ್ಮ ಉದ್ಯೋಗದಾತರ ಉತ್ಪಾದನಾ ಸಾಧನಗಳ ಮೇಲೆ ಕೆಲಸ ಮಾಡುವುದು, ಕೂಲಿಗೆ ತಮ್ಮ ಶ್ರಮವನ್ನು ಮಾರಿಕೊಳ್ಳುವದೇ ವಿನಃ ಅನ್ಯ ಮಾರ್ಗವಿಲ್ಲ. ಇವರಿಗೆ ದುಡಿಯುವ ಶಕ್ತಿಯನ್ನು ಹೊರತು ಪಡಿಸಿ ಮತ್ತಾವ ಆಸ್ತಿ ಇಲ್ಲ. ನಮ್ಮ ಕಣ್ಣಮುಂದೆ ಕಾಣುವ ಸಮಸ್ತವೆಲ್ಲವೂ ಈ ವರ್ಗದವರ ಶ್ರಮದ ಫಲ. ಆದರೆ ಇವರು ಹಸಿವು, ಬಡತನದಿಂದ ನರಳುತ್ತಿದ್ದಾರೆ. ಇವರ ಶ್ರಮವನ್ನು ಕಸಿದುಕೊಳ್ಳುವ ಬಂಡವಾಳಶಾಹಿ ವರ್ಗವು ಮಾತ್ರ ಸಮಸ್ತ ಭೋಗಗಳನ್ನು ಅನುಭವಿಸುತ್ತಿದೆ. ಶೋಷಣೆಯ ಬುನಾದಿಯ ಮೇಲೆ ಆಧಾರಪಟ್ಟಿರುವ ಇಂತಹ ಹೂಡಿಕೆದಾರಿ ಸಮಾಜವನ್ನು ತೊಲಗಿಸಿ, ಅದರ ಸ್ಥಾನದಲ್ಲಿ ಕಮ್ಯೂನಿಷ್ಟ ಸಮಾಜವನ್ನು ಸ್ಥಾಪಿಸಬೇಕೆನ್ನುವುದು ಕಮ್ಯುನಿಷ್ಟರ ಆಶಯ. ಅದೇ ಅವರ ಅಂತಿಮ ಗುರಿ. ಇದೇ ಮಾರ್ಕ್ಸ್‌ವಾದ.

ಮಾರ್ಕ್ಸ್ ಮತ್ತು ಎಂಗಲ್ಸ್ ಸಾಹಿತ್ಯವನ್ನು ಮೂಲ ರಚನೆಯ ನಿರ್ಮಾಣವೆಂದು ನಂಬುತ್ತಾರೆ. ಅವರ ಪ್ರಕಾರ .ಸಾಹಿತ್ಯವು ಧರ್ಮ, ಸಂಸ್ಕೃತಿ, ಕಾನೂನುಗಳಂತೆಯೇ ಸಮಾಜದ ಮೇಲ್ ರಚನೆಯಲ್ಲಿದೆ(ಖಣಾಿಜಡಿ ಖಣಡಿಣಾಭಿಣಣಡಿಜ). ಏಕೆಂದರೆ ಸಾಹಿತ್ಯಿಕ ಪಠ್ಯಗಳು ಮನುಷ್ಯನ ಅನುಭವದ ಸುತ್ತಲೂ ಮತ್ತು ಮನುಷ್ಯ ಗ್ರಹಿಸುವ ಅನೇಕ ವಸ್ತುಗಳ ಅಸ್ತಿತ್ವದ ಸುತ್ತಲೂ ಹೆಣೆಯಲ್ಪಟ್ಟವುಗಳು. ಸುತ್ತಣದ ಜೀವಂತ ಜಗತ್ತು ಸಮಾಜ, ಚರಿತ್ರೆ, ಸಂಸ್ಕೃತಿ, ರಾಜಕೀಯ ಎನ್ನುವಂತಹ ಅಸ್ಥಿರವಾದ ವಿಭಾಗದ ಹಿನ್ನೆಲೆಯಲ್ಲಿ ವಿಂಗಡಿಸಲ್ಪಟ್ಟಿದೆ. ಆದರೆ ಸಾಹಿತ್ಯಿಕ ಪಠ್ಯವು ಮಾತ್ರ ಈ ವಿಭಾಗವನ್ನು ಮೀರಿ ನಿಲ್ಲಬಲ್ಲದು. ಹಾಗಾಗಿ ಸಾಹಿತ್ಯ ಮಾರ್ಕ್ಸ್‌ವಾದವನ್ನು ವಿಶಿಷ್ಟ ನೆಲೆಯಲ್ಲಿ ಗ್ರಹಿಸಿದೆ ಮತ್ತು ವರ್ತಮಾನದ ತುರ್ತುಗಳಿಗೆ ಅನುಗುಣವಾಗಿ ಅಭಿವ್ಯಕ್ತಿಸಿದೆ. ಆ ಮೂಲಕ ಒಂದು ವರ್ಗದ ಸಾಹಿತ್ಯವು ಮಾರ್ಕ್ಸ್‌ವಾದದ ಸೈದ್ಧಾಂತಿಕ ತತ್ವಗಳಿಗೆ ಹೊಸ ಹೊಸ ನಿರ್ವಚನವನ್ನು ನೀಡಿದೆ. ಹೀಗೆ ಸಾಹಿತ್ಯ ಮತ್ತು ಮಾರ್ಕ್ಸ್‌ವಾದದ ಸಂಬಂಧ ಹುಟ್ಟಿಕೊಂಡು ಕಾಲಾಂತರದಲ್ಲಿ ಅದು ಭಿನ್ನ ರೂಪ-ಸ್ವರೂಪಗಳನ್ನು ಪಡೆದು, ಆಯಾ ಕಾಲದ ಸಾಮಾಜಿಕ ಒತ್ತಾಸೆಗಳಿಗೆ ಅನುಗುಣವಾಗಿ ಮಾರ್ಕ್ಸ್‌ವಾದದ ಸಾಧ್ಯತೆಗಳನ್ನು ವಿಸ್ತರಿಸುತ್ತಾ ಬಂದಿದೆ.

ಸಾಹಿತ್ಯಿಕ ಪಠ್ಯ ಎನ್ನುವುದು ಯಾವಾಗಲೂ ಎಲ್ಲಾ ಕಾಲದ, ಎಲ್ಲಾ ಪ್ರದೇಶದ ಚಾರಿತ್ರಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಅಸ್ತಿತ್ವದಲ್ಲಿರುತ್ತದೆ. ಸಾಹಿತಿ ಅಥವಾ ಬರಹಗಾರನಾದವನು ತನ್ನ ಕಾಲದ ಈ ಸಂಗತಿಗಳೊಂದಿಗೆ ಅನುಭವಿಸಿದ ಸನ್ನಿವೇಶಗಳೊಂದಿಗೆ ಸಂಘರ್ಷಕ್ಕಿಳಿದು ಹೊಸ ಸೃಷ್ಟಿಯೊಂದಕ್ಕೆ ಕಾರಣನಾಗುತ್ತಾನೆ.



ಅಂತಹ ಸೃಷ್ಟಿ ಸಹಜವಾಗಿಯೇ ತನ್ನ ಕಾಲದ ಸೈದ್ಧಾಂತಿಕ ಚಿಂತನೆಯೊಂದಿಗೆ ಸಮೀಕರಣಗೊಳ್ಳುತ್ತದೆ ಮತ್ತು ಮುಖಾಮುಖಿಯಾಗುತ್ತದೆ. ಈ ಬಗೆಯಲ್ಲಿಯೇ ಏರ್ಪಟ್ಟದ್ದು ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ನಡುವಿನ ಸಂಬಂಧ. ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ಸಂಬಂಧ ತುಂಬಾ ವಿಶಿಷ್ಟವಾದುದು. ಮಾರ್ಕ್ಸ್‌ವಾದಿ ವಿಧಾನವು ಸಾಹಿತ್ಯಿಕ ಪಠ್ಯವನ್ನು ಸಮಾಜ, ಇತಿಹಾಸ ಮತ್ತು ಸಾಂಸ್ಕೃತಿಕ ವ್ಯವಸ್ಥೆಯೊಂದಿಗೆ ಸಮೀಕರಣಗೊಳಿಸುತ್ತದೆ. ಮಾರ್ಕ್ಸ್‌ವಾದದಲ್ಲಿಯಂತೆಯೇ ಸಾಹಿತ್ಯದಲ್ಲಿಯೂ ಸಹ ವರ್ಗ ಹೋರಾಟವಿದೆ. ಒಂದು ನಿರ್ದಿಷ್ಟ ಸಮಾಜಕ್ಕೆ ಸೇರಿದ ಸಂಸ್ಕೃತಿಯೊಂದರಲ್ಲಿನ ಪ್ರಾಬಲ್ಯ ಮತ್ತು ದಬ್ಬಾಳಿಕೆಗಳು, ಮತ್ತು ಪಠ್ಯವೊಂದರ ರೂಪುಗಳ್ಳುವಿಕೆಯಲ್ಲಿನ ಸಾಮಾಜಿಕ ಒತ್ತಾಸೆಗಳಂತಹ ಪ್ರಭಾವಿ ಅಂಶಗಳಿವೆ. ಅಂದರೆ ಸಾಹಿತ್ಯಿಕ ಪಠ್ಯವೊಂದು ಯಾರಿಗಾಗಿ ಮತ್ತು ಯಾತಕ್ಕಾಗಿ ರೂಪುಗೊಂಡಿದೆ ಎನ್ನುವುದರ ಸ್ಪಷ್ಟತೆಯಿದೆ. ಇಂತಹ ಅಂಶಗಳೇ ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ನಡುವಣದ ಪರಸ್ಪರ ಅನುಸಂಧಾನಕ್ಕೆ ಕಾರಣವಾಗಿವೆ.

ವಿಶೇಷವಾಗಿ ಇಪ್ಪತ್ತನೆಯ ಶತಮಾನದ ಸಾಹಿತ್ಯದ ಹಲವರು ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದಾರೆ ಮತ್ತು ಅವರ ಸೃಜನಶೀಲ ಒಳನೋಟಗಳನ್ನು ಹೀರಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ನಡುವಿನ ಈ ನಿಕಟವಾದ ಪರಸ್ಪರ ಸಂಬಂಧಕ್ಕೆ ಹಲವು ಕಾರಣಗಳನ್ನು ನೀಡಲಾಗಿದೆ. ಮೆಸ್ಜಾರೋಸ್ ಎನ್ನುವ ವಿದ್ವಾಂಸ 'ಅನ್ಯೀಕರಣ'ದ ಪ್ರಶ್ನೆ ಮಾರ್ಕ್ಸ್‌ವಾದದ ಚಿಂತನೆಗೆ ಕಾರಣವೆಂದು ಹೇಳುತ್ತಾನೆ. ಲುಕಾಕ್ಸ್ ಸಾಹಿತ್ಯ ಸೈದ್ಧಾಂತಿಕ ಸ್ಪಷ್ಟೀಕರಣಕ್ಕೆ ಸೂಕ್ತವಾದ ಪ್ರದೇಶವೆಂದು ಹೇಳುತ್ತಾನೆ. ಸಾಹಿತಿಗಳ ಸಾಮಾಜಿಕ ದೃಷ್ಟಿಕೋನ ಮತ್ತು ಸಮಾಜದೆಡೆಗಿನ ವಿಶೇಷ ಆಕರ್ಷಣೆ ಅನೇಕ ಸಿದ್ಧಾಂತಗಳು ಸಾಹಿತ್ಯದಲ್ಲಿ ಪ್ರತಿಫಲನಗೊಳ್ಳುವುದಕ್ಕೆ ಮುಖ್ಯ ಕಾರಣಗಳಾಗಿವೆ. ಇನ್ನು ಕನ್ನಡ ಸಾಹಿತ್ಯ ಸಂದರ್ಭಕ್ಕೆ ಬಂದರೆ ಮಾರ್ಕ್ಸ್‌ವಾದದೊಂದಿಗಿನ ಅದರ ಒಡನಾಟ ಆರಂಭಗೊಂಡದ್ದು ಮಹತ್ತ್ವದ ಚಾರಿತ್ರಿಕ ಸಂದರ್ಭದಲ್ಲಿ. ಸಮಾಜವಾದಿ ಚಿಂತನೆಗಳು ಭಾರತೀಯ ಸಮಾಜಿಕ ಬದುಕಿನಲ್ಲಿ ಹೊಕ್ಕ ನಂತರದಲ್ಲಿ ಸಹಜವಾಗಿಯೇ ಅವು ಸಾಹಿತ್ಯವನ್ನು ಪ್ರವೇಶಿಸಿವೆ. ಸ್ವಾತಂತ್ರ್ಯ ಪೂರ್ವದ ನಿರೀಕ್ಷೆಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹುಸಿಯಾದಾಗ ಬುದ್ಧಿಜೀವಿಗಳು ಹಾಗೂ ಪ್ರಗತಿಪರರು ಆ ಸನ್ನಿವೇಶವನ್ನು ಭಿನ್ನ ನೆಲೆಯಲ್ಲಿ ಗ್ರಹಿಸಿ ಅಭಿವ್ಯಕ್ತಿಸಿದರು. ಅನೇಕ ಸಾಮಾಜಿಕ ಚಿಂತನೆಗಳು ಅಂದಿನ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಅಂತಹದರ ಭಾಗವಾಗಿಯೇ ಬಂದದ್ದು ಮಾರ್ಕ್ಸ್‌ವಾದ ಪ್ರಭಾವಿತ ಸಾಹಿತ್ಯ.

ಕನ್ನಡದ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಪ್ರಭಾವ ಸ್ವಾತಂತ್ರ್ಯಪೂರ್ವದ ಸಂದರ್ಭಕ್ಕಾಗಲೇ ಆಗಿತ್ತಾದರೂ ಅದು ಮತ್ತಷ್ಟು ಸ್ಪಷ್ಟವಾಗಿ ಮತ್ತು ವಿಭಿನ್ನವಾಗಿ ಕಾಣಿಸಿಕೊಂಡದ್ದು ಎಪ್ಪತ್ತರ ದಶಕದ ನಂತರ. ಸಮಾನ ಪ್ರಗತಿಯ ಸಮಾಜದ ಕನಸನ್ನು ಹೊತ್ತಿದ್ದ ಆ ಸಂದರ್ಭದ ದಲಿತ-ಬಂಡಾಯ ಲೇಖಕರು ವಿಶೇಷವಾಗಿ ಆರ್ಥಿಕ ಸಮತೆಯ ಹಣತೆಯನ್ನು ಹಚ್ಚಿದ ಮಾರ್ಕ್ಸ್‌ನ ಪ್ರಭಾವಕ್ಕೆ ಒಳಗಾದರು. ಇಲ್ಲಿನ ಬದುಕಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವ್ಯವಸ್ಥೆಗೆ ಮಾರ್ಕ್ಸ್‌ನ ಚಿಂತನೆಗಳನ್ನು

ಪ್ರಸ್ತುತಗೊಳಿಸಿಕೊಳ್ಳಲು ಪ್ರಯತ್ನಿದ್ದಾರೆ. ಈ ದಲಿತ-ಬಂಡಾಯ ಸಾಹಿತ್ಯವು ನೊಂದವರ, ಅಸಹಾಯಕರ, ಶೋಷಣೆಗೆ ಒಳಗಾದವರ, ಬಡತನದ ಬಲೆಯಲ್ಲಿ ಬಿದ್ದು ನರಳುತ್ತಿರುವವರ ಬದುಕಿನ ವ್ಯಥೆಯನ್ನು ಚಿತ್ರಿಸತೊಡಗಿತು. ಇದೊಂದು ರೀತಿಯ ಜಾಗೃತ ಪ್ರಜ್ಞೆ. ಇಂತಹ ಒಂದು ಜಾಗೃತಿ ಪ್ರಜ್ಞೆ ಒಡಮೂಡಲು ಮುಖ್ಯ ಪ್ರೇರಣೆ-ಪ್ರಭಾವಗಳು ಅನೇಕ. ಅಂತಹ ಪ್ರೇರಣೆ-ಪ್ರಭಾವಗಳಲ್ಲಿ ಒಂದು ಮಾರ್ಕ್ಸ್‌ವಾದ.

ದಬ್ಬಾಳಿಕೆಯ ಅಸ್ತಿತ್ವವನ್ನು ಕಿತ್ತೊಗೆಯುವುದು ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಹತಾಶ ಜೀವನದಲ್ಲಿ ಜಾಗೃತಿಯನ್ನು ಮೂಡಿಸುವುದು ಈ ಧ್ಯೇಯದೊಂದಿಗೆ ಹುಟ್ಟಿಕೊಂಡದ್ದು ದಲಿತ-ಬಂಡಾಯ ಸಾಹಿತ್ಯ. ಈ ದಬ್ಬಾಳಿಕೆಯು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅಸಹಾಯಕ ಬದುಕನ್ನು ನುಂಗಿ ಹಾಕಿತ್ತು. ಶತಮಾನಗಳಿಂದಲೂ ಈ ದಬ್ಬಾಳಿಕೆ ಅವ್ಯಾಹತವಾಗಿ ಸಾಂಸ್ಕೃತಿಕವಾಗಿ ಸುವ್ಯವಸ್ಥಿತವಾಗಿ ನಡೆದುಕೊಂಡು ಬಂದಿತ್ತು. ಅದರಲ್ಲೂ ಸಾಮಾಜಿಕವಾಗಿ ಸೃಷ್ಟಿಯಾದ ಜಾತಿ ವ್ಯವಸ್ಥೆ ತಳ ಸಮುದಾಯಗಳನ್ನು ಸಮಾಜದ ಕಟ್ಟಕಡೆಗೆ ತಳ್ಳಿದ್ದರೆ, ಆರ್ಥಿಕ ವ್ಯವಸ್ಥೆಯು ಅವರನ್ನು ಯಂತ್ರಗಳಂತೆ ತಯಾರು ಮಾಡಿತ್ತು. ಇಂತಹ ಸ್ಥಿತಿಯನ್ನು ಕಂಡ ಸ್ವಾತಂತ್ರ್ಯೋತ್ತರ ಭಾರತೀಯ ಪ್ರಜ್ಞಾವಂತ ಸಮುದಾಯವು ಇದರ ವಿರುದ್ಧ ಸಾಮಾಜಿಕ ಚಳುವಳಿಗಳ ಜೊತೆಗೆ ಅಕ್ಷರ ಚಳವಳಿಯನ್ನೂ ಆರಂಭಿಸಿತು. ಅದನ್ನೇ ದಲಿತ-ಬಂಡಾಯ ಎಂದು ಗುರುತಿಸಲಾಗುತ್ತದೆ.

ದಲಿತ-ಬಂಡಾಯ ಸಾಹಿತ್ಯದಲ್ಲಿ ಮಾರ್ಕ್ಸ್ ಚಿಂತನೆಯ ಚಹರೆಗಳು ಸಾಕಷ್ಟಿವೆ. ಯಾವ ಅಸಮಾನತೆಯ ವಿರುದ್ಧ ಈ ಸಾಹಿತ್ಯ ತನ್ನ ಆಕ್ರೋಶವನ್ನು ಹೊರಹಾಕಿತೋ ಅಂತಹ ಅಸಮಾನತೆಯ ಭಾಗವಾದ ವರ್ಗ ತಾರತಮ್ಯದ ಕುರಿತಾಗಿಯೂ ತನ್ನದೇ ಆಲೋಚನೆಗಳನ್ನು ಅಭಿವ್ಯಕ್ತಿಸಿತು. ಬಂಡಾಯದವರ ಪ್ರಣಾಳಿಕೆಯಲ್ಲಿಯೇ ಹೇಳಿದಂತೆ "ಅಸ್ಪೃಶ್ಯತೆ, ಜಾತಿ ಪದ್ಧತಿ, ಲಿಂಗಭೇದ ಮತ್ತು ವರ್ಗ ಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲೊಂದಾಗಿದೆ" ಎನ್ನುವ ಮಾತಿಗೆ ಅನುಗುಣವಾಗಿ ವರ್ಗ ಸಂಘರ್ಷದ ಅನೇಕ ನೆಲೆಗಳು ಇವರ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಶ್ರಮವಸ್ತು ಮತ್ತು ಶ್ರಮಸಾಧನಗಳ ಮಾಲೀಕರು ಶ್ರಮಶಕ್ತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡರು. ಹೀಗೆ ಸಂಪತ್ತಾಧಾರಿತ ವರ್ಗಾಧರಿತ ಸಮಾಜ ಸೃಷ್ಟಿಗೊಂಡು ನಂತರ ಕಾಲದಲ್ಲಿ ಅದು ಗುಲಾಮಗಿರಿ, ಫ್ಯೂಡಲ್ ಹಂತಗಳನ್ನು ದಾಟಿ ಬಂಡವಾಳಶಾಹಿಯಾಗಿ ಬೆಳೆಯಿತು. ಈ ಬೆಳವಣಿಗೆಯ ಕ್ರಮವನ್ನೇ ದಲಿತ-ಬಂಡಾಯದ ಬರಹಗಾರರು ತೀವ್ರವಾಗಿ ಟೀಕಿಸಿದರು. ಹೇಗೆ ಮಾರ್ಕ್ಸ್ ಪ್ರಪಂಚದ ಎಲ್ಲಾ ಸಮಾಜಗಳ ಬೆಳವಣಿಗೆಯನ್ನು ವರ್ಗಗಳು ಮತ್ತು ಅವುಗಳ ಸಂಘರ್ಷದ ಮೂಲಕ ಗುರುತಿಸಿದನೋ ಹಾಗೆ ದಲಿತ-ಬಂಡಾಯ ಸಾಹಿತ್ಯದಲ್ಲಿ ಶ್ರಮಸಂಸ್ಕೃತಿ ಎನ್ನುವುದು ವರ್ಗ ಸಂಘರ್ಷದ ಮೂಲಕ ಬಿತ್ತರಗೊಂಡಿತು. ದಲಿತ-ಬಂಡಾಯ ಸಾಹಿತ್ಯ ಗುರುತಿಸಿದ ಗೌಡ-ಆಳು, ಮೇಲ್ವರ್ಗ-ಕೆಳವರ್ಗ, ಮಾಲಿಕ-ಕಾರ್ಮಿಕ, ಸಾಹುಕಾರ-ಬಡವ, ಉಳ್ಳವ-ಇಲ್ಲದವ... ಮುಂತಾದ ಪರಿಕಲ್ಪನೆಗಳು ವರ್ಗ ಸಂಘರ್ಷದ



ಭಾಗವಾಗಿಯೇ ಹುಟ್ಟಿಕೊಂಡವುಗಳು. ಇವು ಒಮ್ಮೆಗೆ ಶೋಷಣೆಯ ಎರಡು ನೆಲೆಗಳನ್ನು ತೆಕ್ಕೆತೆಳೆದುಕೊಳ್ಳುತ್ತವೆ. ಪರಿಣಾಮವಾಗಿ ಈ ಸಾಹಿತಿಗಳು ಶೋಷಿತರ ಬದುಕಿಗೆ ಮಾರಕವಾದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಚಿತ್ರಿಸಿದರು. ಮೇಲ್ವರ್ಗದವರ ಮೆದುಳು ತಳಸಮುದಾಯಗಳ ರಟ್ಟೆಗಳನ್ನು ಬಳಸಿಕೊಂಡ ಬಗೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಮಾರ್ಕ್ಸ್‌ವಾದಿ ಚಿಂತನೆಗಳಿಂದ ಪ್ರೇರೇಪಿತರಾದ ಈ ಸಾಹಿತಿಗಳು ಮೇಲ್ವರ್ಗ ಮತ್ತು ಬಂಡವಾಳಶಾಹಿಗಳ ವಿರುದ್ಧ ಮಾತನಾಡಿದ ಕವಿ ಸಿದ್ಧಲಿಂಗಯ್ಯ ನನ್ನ ಜನಗಳು ಕವನದಲ್ಲಿ "ಹೊಲವನೊತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು/ ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು/ ಬರಿಗೈಲೆ ಬಂದೋರು ಉಸ್ಸೆಂದು ಕೂತೋರು/ ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು" ಎನ್ನುತ್ತಾರೆ. ದುಡಿಯುವ ವರ್ಗ ಶತಮಾನಗಳಿಂದಲೂ ಭೂಮಾಲೀಕರ, ಮೇಲ್ವರ್ಗದವರ, ಬಂಡವಾಳಶಾಹಿಗಳ ಕೈಯಲ್ಲಿ ಕಾರ್ಮಿಕರಾಗಿ, ಜೀತದಾಳುಗಳಾಗಿ ತಮ್ಮ ಬೆವರನ್ನು ಬಸಿದು ಅವರ ಏಳ್ಗೆಗಾಗಿ ದುಡಿದಿದೆ. ಇದನ್ನೇ ಮಾರ್ಕ್ಸ್ ತನ್ನ ಸಿದ್ಧಾಂತದಲ್ಲಿ ಜಮೀನುದಾರಿ ಸಮಾಜದಲ್ಲಿ ಕೆಲವು ಯಜಮಾನರು ಅಸಂಖ್ಯಾತ ಜನರ ಬೆವರ ಹನಿಯನ್ನು ಬಳಸಿಕೊಂಡು ತಮ್ಮ ಬೆಳೆಯನ್ನು ಬೆಳೆಸಿಕೊಂಡರು ಎಂಬುದನ್ನು ವ್ಯವಸ್ಥಿತವಾಗಿ ಹೇಳಿದ. ಉಳ್ಳವರು ಇಲ್ಲದವರಿಂದ ಎಲ್ಲಾ ಬಗೆಯ ಚಾಕರಿಗಳನ್ನು ಮಾಡಿಸಿಕೊಂಡು ಮೇಲೆ ಬಂದವರೇ ಆಗಿದ್ದಾರೆ. ಇಲ್ಲದವರು ಅವರ ಕೈಯಾಳುಗಳಾಗಿ ಒಂದು ಬಗೆಯ ಬಾನಿಸದ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ. ಯಾರದ್ದೋ ಶ್ರಮ ಮತ್ತಾರದ್ದೋ ಸುಖ ಎನ್ನುವಂತೆ ಶ್ರಮಪಟ್ಟವನು ಶ್ರಮಿಸುತ್ತಾಲೇ ಇದ್ದಾನೆ. ಶ್ರಮಪಡವದನು ಸುಖಿಸುತ್ತಿದ್ದಾನೆ. ಇಂತಹ ಅಮಾನವೀಯವಾದ ವರ್ಗ ವ್ಯವಸ್ಥೆ ಆರಂಭದಿಂದಲೂ ಇದ್ದುದಲ್ಲ ಎನ್ನುವುದು ಮಾರ್ಕ್ಸ್‌ನ ಅಭಿಪ್ರಾಯ. ಮನುಷ್ಯನು ಆರಂಭದ ದೆಶೆಯಲ್ಲಿ ಸಣ್ಣ ಸಣ್ಣ ಗುಂಪುಗಳಾಗಿದ್ದವನು. ಅವನ ಸಮಷ್ಟಿ ಶ್ರಮದ ಫಲಿತದಿಂದ ಬಂದ ಆಹಾರವನ್ನು ಎಲ್ಲರೂ ಸಮಷ್ಟಿಯಾಗಿ ಅನುಭವಿಸುತ್ತಿದ್ದರು. ಆಗ ಅವರ ಬಳಿ ಕಟ್ಟಿಗೆ, ಕಲ್ಲುಗಳ ಉಪಕರಣಗಳನ್ನು ಬಿಟ್ಟರೆ ಬೇರೇನೂ ಇರಲಿಲ್ಲ. ಅಂತಹ ಸಮಾಜದಲ್ಲಿ ಯಾವ ವರ್ಗಗಳೂ ಇರಲಿಲ್ಲ. ಶೋಷಕನೂ ಇರಲಿಲ್ಲ. ಶೋಷಿತನೂ ಇರಲಿಲ್ಲ. ಮನುಷ್ಯರೆಲ್ಲರೂ ಸಮಾನವಾಗಿಯೇ ಇದ್ದರು.

ಆದರೆ ಇಲ್ಲಿ ಮುಖ್ಯವಾಗಿ ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ ಕೆಲವು ಬಂಡವಾಳಶಾಹಿ ಚರಿತ್ರೆಕಾರರು ಮೊದಲಿನಿಂದಲೂ ವೈಯಕ್ತಿಕ ಹೂಡಿಕೆ ಪದ್ಧತಿ ಜಾರಿಯಲ್ಲಿತ್ತೆಂದು ಹೇಳಿದ್ದಾರೆ. ಅದನ್ನು ರುಜುವು ಮಾಡಲಿಕ್ಕೆ ಅವರು ಹೇಳುವುದೇನೆಂದರೆ ಸಮಾಜವು ಎಷ್ಟು ಪುರಾತನವಾದುದೋ ಈ ಪದ್ಧತಿಯೂ ಸಹ ಅಷ್ಟೇ ಪುರಾತನವಾದುದು ಎನ್ನುವುದು. ಇನ್ನೂ ಕೆಲವರಂತೂ ಪ್ರಾಣಿಗಳಲ್ಲಿಯೂ ಕೂಡ ಈ ಭಾವನೆ ಇತ್ತೆಂದು, ಅದು ಪ್ರಕೃತಿ ಸಹಜವಾದುದೆಂದು ಹೇಳುವುದಕ್ಕಾಗಿ ನಾನಾ ಅವಸ್ಥೆಯನ್ನು ಪಟ್ಟಿದ್ದಾರೆ. ಅವರು ಹೇಳುವುದೇನೆಂದರೆ ಇರುವೆಗಳು ಆಹಾರವನ್ನು ಕೂಡಿಟ್ಟು ಭದ್ರಪಡಿಸಿಕೊಳ್ಳುವುದು ಸಂಪಾದನ ಭಾವನೆಯಲ್ಲದೆ ಮತ್ತೇನು ಎನ್ನುವುದು. ಈ ವಿಷಯವನ್ನು ಸಾರಾಸಟಗವಾಗಿ ತಿರಸ್ಕರಿಸುವ ಮಾರ್ಕ್ಸ್‌ವಾದವು ಇರುವೆಗಳು ಆಹಾರವನ್ನು ಸಂಗ್ರಹಿಸಿಕೊಟ್ಟುಳ್ಳುತ್ತವೆಯೇ

ವಿನಃ ಅಲ್ಲಿ ಲಾಭದ ಭಾವನೆ ಇಲ್ಲ ಜೊತೆಗೆ ಅದು ಕರಾಳ ವ್ಯಾಪಾರವು ಅಲ್ಲ. ಅದಕ್ಕಾಗಿ ಮಾನವನ ಆರಂಭದ ದಿನಗಳಲ್ಲಿ ವರ್ಗ ವ್ಯವಸ್ಥೆ ಇದ್ದಿಲ್ಲ. ನಾಗರೀಕತೆ ಬೆಳೆದಂತೆಲ್ಲ, ಮಾನವ ತನ್ನ ಅವಶ್ಯಕತೆಗಳಿಗನುಗುಣವಾಗಿ ಹೊಸ ಹೊಸ ಉಪಕರಣಗಳನ್ನು ತಯಾರಿಸಿಕೊಂಡ. ಬೆಂಕಿಯನ್ನು ಬಳಸುವುದು, ಪಶುಗಳನ್ನು ಸಾಕುವುದು, ಮಣ್ಣಿನ ಮಡಿಕೆಗಳನ್ನು ಮಾಡಿಕೊಳ್ಳುವುದು, ಮೊಳಕೆಯೊಡೆಸುವುದನ್ನು ಕಂಡುಕೊಂಡ. ಅಲ್ಲಿಂದ ವ್ಯವಸಾಯವು ಆರಂಭಗೊಂಡಿತು. ಮುಂದೆ ಭಿನ್ನ ಗುಂಪುಗಳು ವ್ಯವಸಾಯ, ಪಶು ಸಾಕಾಣಿಕೆಯಂತಹ ವಿವಿಧ ಬಗೆಯ ವೃತ್ತಿಗಳಲ್ಲಿ ತೊಡಗಿಕೊಂಡವು. ಆಗ ಹಿಂದಿಗಿಂತಲೂ ಹೆಚ್ಚಿನ ಶ್ರಮ ಬೇಕಾಯಿತು. ಈ ಮಧ್ಯೆ ಗುಂಪುಗಳ ಮಧ್ಯೆ ಯುದ್ಧಗಳು ಆರಂಭಗೊಂಡವು. ಮೊದಲು ಯುದ್ಧದಲ್ಲಿ ಕೊಲ್ಲುವ ಪ್ರಕ್ರಿಯೆ ಕಾಣಿಸಿಕೊಂಡರೆ ನಂತರದಲ್ಲಿ ಸೋತವರನ್ನು ಸೇವಕರನ್ನಾಗಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು. ಹೀಗೆ ಕೆಲಸದ ವಿಭಜನೆಯಿಂದ ಸಮಾಜವು ಸಹ ವಿಭಜನೆಗೊಳ್ಳಲು ಆರಂಭವಾಯಿತು. ಅದರಲ್ಲೂ ಮುಖ್ಯವಾಗಿ ಯಜಮಾನ ಮತ್ತು ಸೇವಕ ಎನ್ನುವ ವರ್ಗಗಳು ಹುಟ್ಟುಕೊಂಡವು. ಹೆಚ್ಚು ಸಾಮರ್ಥ್ಯವನ್ನು ಹೊಂದಿದ ಯಜಮಾನರು ಸೇವಕರ ಶ್ರಮದ ಮೇಲೆ ಬದುಕುತ್ತ ತಮ್ಮ Identityಯನ್ನು ನಿರ್ಮಿಸಿಕೊಂಡಿತು. ಆದರೆ ಸೇವಕ ಅಥವಾ ಶ್ರಮಿಕ ವರ್ಗ ತನ್ನ Identityಯನ್ನು ಕಟ್ಟಿಕೊಳ್ಳಲಾಗಲಿಲ್ಲ.

ದಲಿತ-ಬಂಡಾಯ ಸಾಹಿತ್ಯವು ಮಾರ್ಕ್ಸ್‌ವಾದದಂತೆಯೇ ವರ್ಗ ತರತಮ ವ್ಯವಸ್ಥೆಯು ಮನುಷ್ಯ ಸಂಬಂಧಗಳ ನಾಶಕ್ಕೆ ಕಾರಣ ಎಂದಿತು. ವರ್ಗ ಎನ್ನುವ ಸ್ತರವಿನ್ಯಾಸದ ಕಾಲಡಿಯಲ್ಲಿ ಮನುಷ್ಯತೆ ಎನ್ನುವುದು ಸಾಯುತ್ತಿದೆ ಎಂದು ಸಾರಿತು. ಅದರೊಟ್ಟಿಗೆ ತಳಸಮುದಾಯಗಳ ಕನಸುಗಳನ್ನು ಅಭಿವ್ಯಕ್ತಿಸಿತು. "ಉಕ್ಕಿನ ಮೈಯ ಹೂವಿನ ಮನಸ್ಸು/ ಮಾಡುವ ಭೂಮಿಯ ಗೇಣಿಯ ಕನಸು/ ಭೂಮಿ ತಾಯಿಯ ಮಲಮಕ್ಕಳು ನಾವು/ ನೋವಲೆದ್ದವರು" ಎನ್ನುವ ಸಿದ್ಧಲಿಂಗಯ್ಯನವರ 'ಚೋಮನ ಮಕ್ಕಳ ಹಾಡು' ಕವಿತೆ ಭೂಮಾಲಿತ್ವದಲ್ಲಿನ ಅಸಮಾನತೆಯ ವರ್ಗೀಕರಣವನ್ನು ಕುರಿತು ಮಾತನಾಡುತ್ತದೆ. ಯಾರು ನಿಜವಾದ ಶ್ರಮಿಕರೋ ಅವರಿಗೆ ದಕ್ಕಬೇಕಾದ ನ್ಯಾಯ ದಕ್ಕಲಿಲ್ಲ ಎನ್ನುವ ಕೊರಗು ಇಲ್ಲಿದೆ. "ತಾತನ ಕಾಲದ ಹಳೆಯ ಮರವ / ಬುಡಮಟ್ಟ ಉರುಳಿಸಿ / ಘನವಾದ ಕಟ್ಟಡವ ಕಟ್ಟಿ / ಸರಿಕರೆದುರಿಗೆ / ಹೊಸ ಸಂಸಾರವ ಹೂಡುತ್ತೇನೆ" ಎನ್ನುವ ಮ.ನ. ಜವರಯ್ಯ ಅವರ ಕಾವ್ಯದ ಸಾಲುಗಳು ಕೇವಲ ಜಾತಿ ಶೋಷಣೆಯನ್ನಷ್ಟೇ ಅಲ್ಲ ವರ್ಗ ಶೋಷಣೆಯನ್ನು ವಿರೋಧಿಸುತ್ತವೆ. ಯಾವ ಸಾಮಾಜಿಕ ವ್ಯವಸ್ಥೆಯು ತಮ್ಮ ಬದುಕನ್ನು ಎಲ್ಲಾ ಆಯಾಮಗಳಲ್ಲಿ ಕಟ್ಟಿಕೊಳ್ಳಲು ಅಡೆತಡೆಯನ್ನುಂಟು ಮಾಡಿದೆಯೋ ಅದನ್ನೇ ಕಿತ್ತುಹಾಕಬೇಕೆಂಬ ನಿಲುವು ಇಲ್ಲಿನದು. ಪರಂಪರಾಗತವಾಗಿ ಬಂದಂತಹ ಜಾತಿ, ವರ್ಗ, ವರ್ಣ ವ್ಯವಸ್ಥೆಗಳು ಶೋಷಿತರ ಬದುಕನ್ನು ನುಂಗಿದವುಗಳೇ. ಒಂದೊಂದರದ್ದು ಒಂದೊಂದು ಬಗೆಯ ಸ್ವರೂಪ. ಶೋಷಿತರ ಸುತ್ತಣ ಬದುಕೆಲ್ಲವನ್ನೂ ಇವುಗಳು ಆವರಿಸಿಕೊಂಡು ಅವರು ಅದರಿಂದ ಆಚೆ ಬರುವುದಕ್ಕೆ ಅವಕಾಶವನ್ನೇ ನೀಡಲಿಲ್ಲ. ಇದನ್ನೇ ಮನಜ ಅತ್ಯಂತ ಕಠೋರವಾಗಿ ಟೀಕಿಸುತ್ತಾರೆ. ಹಾಗೆಯೇ "ಹಳೆ ಮಟಗಳು



ತೆರೆದುಕೊಂಡಿವೆ/ ಹೊಸ ಭಾಷೆಗೆ ಕಾತರಗೊಂಡಿವೆ" ಎನ್ನುವಂತಹ ಮಾತೂ ಸಹ ಅಸಹಾಯಕರ ಬದುಕನ್ನು ಆಕ್ರಮಿಸಿಕೊಂಡಿರುವುದೆಲ್ಲವನ್ನೂ ತೊಡೆದು ಹಾಕಿ ಹೊಸತನವನ್ನು ಮೈಗೂಡಿಸಿಕೊಳ್ಳಬೇಕೆಂಬುದರ ಆಶಯವನ್ನುಳ್ಳದ್ದೇ ಆಗಿದೆ.

ಉತ್ಪಾದನೆಯ ಸಲಕರಣೆಗಳು ಯಾವ ವರ್ಗದಡಿಯಲ್ಲಿ ಇರುತ್ತವೆಯೋ ಆ ವರ್ಗವೇ ಆಳುವ ವರ್ಗವಾಗಿ ಮಾರ್ಪಾಡಾಗುತ್ತದೆ ಎನ್ನುವುದು ಮಾರ್ಕ್ಸ್‌ವಾದದ ಸ್ಪಷ್ಟ ನಿಲುವು. ಅಂತೆಯೇ ಈ ಮೇಲಿನ ಕವಿತೆಯ ಸಾಲುಗಳನ್ನು ಗಮನಿಸಿದಾಗ ವಿಶೇಷವಾಗಿ ಮನಜ ಅವರ ಕವಿತೆಯ ಸಾಲುಗಳು ಬದಲಾದ ಕಾಲದ ವರ್ಗ ವ್ಯವಸ್ಥೆಯಲ್ಲಿನ ಮಾರ್ಪಾಡನ್ನು ಕುರಿತು ಮಾತನಾಡುತ್ತದೆ. ಪ್ರತಿಯೊಂದು ಕಾಲದಲ್ಲು ಉತ್ಪಾದನೆಯ ಸಲಕರಣೆಗಳನ್ನು ಬಳಸಿಕೊಳ್ಳದ ಅಥವಾ ಅವುಗಳ ಒಡೆತನವನ್ನು ಹೊಂದಿಲ್ಲದ ವರ್ಗವು ಶ್ರಮಿಕವರ್ಗವಾಗುತ್ತದೆ. ಹಿಂದೆ ಜೀತ ಪದ್ಧತಿ ಇತ್ತು. ನಂತರದಲ್ಲಿ ಅದು ಕಾರ್ಮಿಕ ಪದ್ಧತಿಯಾಗಿ ಮಾರ್ಪಟ್ಟಿತು. ಹೀಗೆ ಒಂದು ಸಮಾಜವು ಕೆಲ ವರ್ಗಗಳಿಂದ ಕೂಡಿದ್ದು ಅಲ್ಲಿ ಯಾರ ಕೈಯಲ್ಲಿ ಉತ್ಪಾದನ ಸಲಕರಣೆಗಳಿರುತ್ತವೆಯೋ ಅವರೇ ಮಾಲೀಕರಾಗಿ, ಇಲ್ಲದವರು ಕಾರ್ಮಿಕರಾಗಿ ಅಥವಾ ದುಡಿಮೆಗಾರರಾಗುತ್ತಾರೆ. ಇದನ್ನೇ ಮಾರ್ಕ್ಸ್‌ವಾದ 'ವರ್ಗ' ಎನ್ನುವ ಪರಿಕಲ್ಪನೆಯಲ್ಲಿ ಬಳಸಿದ. ಇದನ್ನು ಗ್ರಹಿಸಿದ ದಲಿತ-ಬಂಡಾಯದ ಬರಹಗಾರರು ತಮ್ಮದೇ ನೆಲೆಯಲ್ಲಿ ಗ್ರಹಿಸಿ ಅಭಿವ್ಯಕ್ತಿಸಿದರು.

ಬರಗೂರ ರಾಮಚಂದ್ರಪ್ಪನವರ 'ಬೆವರಿನ ಹಾಡು' ಕವಿತೆಯಲ್ಲಿನ "ಕೆಲಸ ಕೊಟ್ಟವರನ್ನು ಮುಂದೆ ತಂದವರು/ ಕೆಲಸ ಮಾಡುತ್ತಲೇ ಹಿಂದೆ ಉಳಿದವರು" ಎನ್ನುವ ಸಾಲುಗಳು ವರ್ಗ ವ್ಯವಸ್ಥೆಯು ಸೃಷ್ಟಿಸಿದ ಕಂದಕದಲ್ಲಿನ ಶ್ರಮಜೀವಿಗಳ ಮನದಿಂಗಿತವನ್ನು ಸ್ಪಷ್ಟಪಡಿಸುತ್ತದೆ. ಅವರೇ 'ಶ್ರಮಜೀವಿಗಳ ಹಾಡು' ಕವಿತೆಯಲ್ಲಿ ಹೇಳುವಂತೆ "ನಾವು ಕಟ್ಟಿದ ಗೆದ್ದಲ ಗೂಡು/ ನಿಮಗಾಯಿತು ಹುತ್ತು/ ನಾವು ಹೊತ್ತ ಮಣ್ಣಿನ ಕನಸು/ ನಿಮಗಾಯಿತು ನನಸು" ಎನ್ನುವಲ್ಲಿಯೂ ಯಾರ ಬೆವರಿನ ಶ್ರಮವನ್ನು ಯಾರು ಅನುಭವಿಸುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ಎತ್ತುತ್ತದೆ. ಇದೇ ಮಾರ್ಕ್ಸ್‌ವಾದದ ಮುಖ್ಯ ನೆಲೆಯೂ ಆಗಿದೆ. ಬಂಡವಾಳಶಾಹಿ ಸಮಾಜದಲ್ಲಿ ಯಾವಾಗಲೂ ಎರಡು ಹಿತಾಸಕ್ತಿಗಳಿರುತ್ತವೆ. ಮೊದಲನೆಯದು ಮಾಲಿಕ ವರ್ಗದ ಲಾಭಾಂಶವನ್ನು ಹೆಚ್ಚಿಸಿಕೊಳ್ಳುವುದು, ಎರಡನೆಯದು ಶ್ರಮಿಕ ವರ್ಗದ ಶ್ರಮದ ಮೌಲ್ಯವನ್ನು ಹೆಚ್ಚಿಸಿಕೊಳ್ಳುವುದು. ಈ ಎರಡು ಹಿತಾಸಕ್ತಿಗಳು ಮುಖಾಮುಖಿಯಾದಾಗಲೇ ಒಂದು ಬಗೆಯ ಸಂಘರ್ಷ ಹುಟ್ಟಿಕೊಳ್ಳುತ್ತದೆ. ಈ ಎರಡು ಹಿತಾಸಕ್ತಿಗಳನ್ನು ಗ್ರಹಿಸಿದ ಬರಗೂರರು ಪರಸ್ಪರ ವೈರುಧ್ಯದಲ್ಲಿರುವ ಈ ಎರಡು ಹಿತಾಸಕ್ತಿಗಳನ್ನು ಗುರುತಿಸುತ್ತಲೇ ಎರಡನೆಯ ಹಿತಾಸಕ್ತಿಯು ಹೇಗೆ ಬಲಹೀನಗೊಂಡಿದೆ ಎನ್ನುವುದನ್ನು ತಮ್ಮ ಬರಹಗಳಲ್ಲಿ ಸ್ಪಷ್ಟಪಡಿಸುತ್ತಾರೆ.

ರಂಜಾನ ದರ್ಗಾ ಅವರು 'ಹೊಕ್ಕುಳಲ್ಲಿ ಹೂವಿದೆ' ಕವನದಲ್ಲಿ ಹೇಳುವಂತೆ "ನಾವಿನ್ನೂ ದುಡಿಯುತ್ತಲೇ ಇದ್ದೇವೆ" ಎನ್ನುವ ಮಾತು ಶೋಷಿತ ವರ್ಗದ ದುಡಿಮೆಯ ನಿರಂತರತೆಯನ್ನು ಸಾರುತ್ತದೆ. ದುಡಿಸಿಕೊಳ್ಳುವರಿರುವ ವರೆಗೂ ದುಡಿಯುವವರು

ದುಡಿಯುತ್ತಲೇ ಇರಬೇಕು. ಈ ಸಂದರ್ಭದಲ್ಲಿ ದರ್ಗಾ ಅವರ ಕವಿತೆಗಳ ಕುರಿತಂತೆ ಡಿ.ಆರ್.ನಾಗರಾಜ ಹೇಳಿದ "ಕವಿ ಅಮೂರ್ತ ಮಾನವೀಯ ದೃಷ್ಟಿಕೋನದಿಂದ ಲೋಕವನ್ನು ನೋಡುವುದಿಲ್ಲ. ಕ್ರಾಂತಿಯ ಜವಾಬ್ದಾರಿಯನ್ನು ಹೊತ್ತಿರುವ ಶ್ರಮಜೀವಿ ವರ್ಗದ ದೃಷ್ಟಿಕೋನದ ಮೂಲಕ ಲೋಕವನ್ನು ವಿಶ್ಲೇಷಿಸುತ್ತಾರೆ" (ಡಿ.ಆರ್.ನಾಗರಾಜ, ಅಮೃತ ಮತ್ತು ಗರುಡ, ಪುಟ: ೧೬೮) ಮಾತು ದಲಿತ–ಬಂಡಾಯದ ಅನೇಕ ಲೇಖಕರಿಗೂ ವಿಸ್ತರಿಸಿ ಅನ್ವಯಿಸಬಹುದೆನಿಸುತ್ತದೆ. ಮನುಷ್ಯನ ಯಾವ ಧೋರಣೆ ತರತಮ ವ್ಯವಸ್ಥೆಯನ್ನು ಘುಟ್ಟುಹಾಕಿ ಸಮಾಜವನ್ನು ವಿಭಜಿಸಿದೆಯೋ ಅಂತಹ ವಿಭಜನೆಯ ವಿರುದ್ಧವೇ ದಲಿತ–ಬಂಡಾಯದವರು ಬಂಡೆದ್ದವರು. ಜೊತೆಗೆ ಮನುಷ್ಯ ಸಮಾಜದ ವರ್ಗ ಸಂಘರ್ಷದ ಅನೇಕ ಮಾದರಿಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಸಮಾಜವಾದಿ ವಾಸ್ತವಿಕತೆಯ ತಳಹದಿಯ ಮೇಲೆ ಕಾವ್ಯ ಕಟ್ಟಿದ ಗೋವಿಂದಯ್ಯನವರ ವರ್ಗ ವ್ಯವಸ್ಥೆಯ ವಿರುದ್ಧ ಕವಿತೆಗಳು ಇರುವು ಮತ್ತು ಅರಿವಿನ ಅನುಭವದಿಂದ ಸಾಮಾಜಿಕ ಜೀವನವನ್ನು ಶೋಧಿಸಿವೆ. "ಆ ಕಣ್ಣೀರ ಮಣ್ಣೊಳಗೆ ನಾನೀಗ/ ನೆನೆಯುತ್ತಿದ್ದೇನೆ ಮೇಳೆಯುತ್ತಿದ್ದೇನೆ/ ರಕ್ತ ಕಾರುವ ಸೂರ್ಯನ ಜೊತೆಜೊತೆಗೆ ಕೆಂಪಗೆ/ ನಾ ನಾಳೆ ಖಂಡಿತ ಚಿಗುರುತ್ತೇನೆ" ಎನ್ನುವ ಮೂಲಕ ತಳವರ್ಗದ ಚಿತ್ರಣವನ್ನು ಕಟ್ಟುತ್ತಲೇ ಭವಿತವ್ಯದ ಭರವಸೆಯನ್ನು ತುಂಬುತ್ತಾರೆ. ಇಂತಹ ಭರವಸೆಗೆ ಕಾರಣವಾದುದು ಜಾಗೃತಿ. ಅದಕ್ಕೆ ಮೂಲವಾದುದು ಮಾರ್ಕ್ಸ್ ಚಿಂತನೆಗಳು ಎನ್ನುವುದನ್ನು ಇಲ್ಲಿ ಮರೆಯುವಂತಿಲ್ಲ. ಇತರೆ ಪ್ರೇರಣೆಗಳಾಗಿದ್ದಾಗಲೂ ವಿಶೇಷವಾಗಿ ಮಾರ್ಕ್ಸ್‌ನ ಆಲೋಚನೆಗಳು ಪ್ರಭಾವಿಸಿರುವುದು ಗಮನಿಸತಕ್ಕದ್ದು. "ಪರಂಪರೆಯ ಪುರಾಣಗಳ ಕಚ್ಚರಕ/ ರಾಜರುಗಳ/ ದೇವಾನುದೇವತೆಗಳ/ ಕಂದು ಕಾಲಡಿಸಿಕ್ಕು/ ಕೆಂಬೆವರ ಸುರಸಿ ಕರೀ/ ಮುದ್ದೆಯಾದರು"(ಕಪ್ಪು ಜನರು) ಎನ್ನುವ ಇಂದೂಧರ ಹೊನ್ನಾಪುರ ವರ್ಗ ಶೋಷಣೆಯೆಂಬ ಬಲೆಯೊಳಗೆ ಬಿದ್ದು ಕಮರಿ ಹೋದ ಬದುಕುಗಳ ಕುರಿತು ತಮ್ಮ ಮರುಕವನ್ನು ವ್ಯಕ್ತಪಡಿಸುತ್ತಾರೆ. ಮೇಲ್ವರ್ಗದವು ಹುಟ್ಟುಹಾಕಿದ ನಂಬಿಕೆಗಳ ಬಲೆಯೊಳಗೆ ಸಿಕ್ಕಿಕೊಂಡ ತಳಸಮುದಾಯಗಳು ಅದರಿಂದ ಆಚೆ ಬರಲಾರದಾದವು. ತಳವರ್ಗಗಳ ಆರ್ಥಿಕ ಸ್ಥಿತಿಯು ಈಗಲೂ ಮೇಲ್ವರ್ಗಗಳ ನಿಯಂತ್ರಣದಲ್ಲಿದೆ. ಸಂಪತ್ತಿನ ಅಸಮಾನ ಹಂಚಿಕೆಯೇ ಇದಕ್ಕೆ ಮುಖ್ಯ ಕಾರಣ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಮಾರ್ಕ್ಸ್‌ನ ದೃಷ್ಟಿಯಲ್ಲಿ ಶೋಷಣೆ ಎನ್ನುವುದು ವರ್ಗ ಹಿತಾಸಕ್ತಿಗಳ ಸಂಘರ್ಷದಿಂದ ಸೃಷ್ಟಿಯಾದುದು ಎಂಬುದನ್ನು. ಬಲವಾದ ಹಿತಾಸಕ್ತಿಯ ಅಮಿತ ಆಸೆ ದುರ್ಬಲ ಹಿತಾಸಕ್ತಿಯನ್ನು ಅತ್ಯಂತ ನಯವಾಗಿ ಶೋಷಿಸುವುದೆಂದರ್ಥ.

ಸಾವಿರಾರು ವರ್ಷಗಳಿಂದಲೂ ಶೋಷಕ ವ್ಯವಸ್ಥೆಯ ಕಂದಕದೊಳಗೆ ಬಿದ್ದು ತಮ್ಮ ಬದುಕಿನ ಅನನ್ಯತೆಯನ್ನೇ ಕಳೆದುಕೊಂಡಿರುವ ವರ್ಗದ ಕುರಿತು ಮಾತನಾಡಿದ ಮತ್ತೊಬ್ಬ ಕವಿ ಅರವಿಂದ ಮಾಲಗತ್ತಿ. ಶೋಷಣೆಗೆ, ನೋವಿಗೆ, ಅನ್ಯಾಯಕ್ಕೆ, ಅಸಮಾನತೆಗೆ ಕಾರಣವಾಗಿರುವ ವರ್ಗ ಪರಿಕಲ್ಪನೆಯನ್ನು ಕಟುವಾಗಿ ಟೀಕಿಸುವ ಮನೋಭಾವ ಮಾಗಲತ್ತಿಯವರದು. "ತಲೆ ಹೊರೆ ಹೊತ್ತು ದಾಪುಗಾಲಿಕ್ಕುವ/ ನನ್ನವರ ಬೆವರು



ವಾಸನೆ/ ಅಡಗಿ ಹೋಗುತ್ತದೆ/ ರಾಜಭವನದ ದಾರಿಯುದ್ದಕ್ಕೂ/ ಗಮಗಮಿಸುವ ಮೊಲ್ಲೆ ಸಂಪಿಗೆಯ ಹಸಿರು ನಂದನದಲ್ಲಿ" ಆಳುವ ವರ್ಗ ಅಥವಾ ಮೇಲ್ವರ್ಗ ನಿರ್ಮಿತ ಈ ಜಗತ್ತಿನಲ್ಲಿ ಅದರ ಏಳ್ಗೆಗಾಗಿ ಶ್ರಮಿಸಿದವರು ತಮ್ಮ ಅಸ್ಮಿತೆಯನ್ನು ಹೇಗೆ ಕಳೆದುಕೊಂಡಿದ್ದಾರೆ ಎನ್ನುವುದಕ್ಕೆ ಈ ಸಾಲುಗಳು ಸಾರುವ ಸತ್ಯ ಸಾಕು. ಶೋಷಣೆಗೆ ಅಥವಾ ತುಳಿತಕ್ಕೆ ಒಳಗಾದ ಪ್ರತಿಯೊಂದು ವರ್ಗವೂ ಸಹಿತ ತಮಗರಿವಾಗದಂತೆಯೇ ತಮ್ಮ ಬದುಕನ್ನು ಕಳೆದುಕೊಂಡಿದೆ. ಯಾವ ವರ್ಗ ತನ್ನ ಬದುಕನ್ನು ಎಲ್ಲಿ ಕಳೆದುಕೊಂಡಿದೆ ಎಂದು ಹುಡುಕಿದರೆ ಅದು ಕವಿ ಹೇಳಿದಂತೆ ಸಿಗುವುದು ಹಸಿರು ನಂದನ ವನದ ಹಿಂದೆ ಎನ್ನುವುದು ಸ್ಪಷ್ಟ. ಶೋಷಿತ ವರ್ಗಗಳಿಗೆ ಪ್ರತ್ಯೇಕವಾದ ಆರ್ಥಿಕ ಪರಿಸರದ ಅಗತ್ಯವಿರುವುದು ಸತ್ಯ. ಆದರೆ ಬದುಕಿನ ಅಸ್ತಿತ್ವವನ್ನೇ ಕಳೆದುಕೊಂಡವರಿಗೆ ಆರ್ಥಿಕ ಸ್ವಾವಲಂಬನೆ ಎಲ್ಲಿಂದ ಸಿಗಬೇಕು? ಇದಕ್ಕಾಗಿಯೇ ಮಾರ್ಕ್ಸ್ ಆರ್ಥಿಕ ಸಮಾನತೆಯ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಂಡದ್ದು.

ಹಾಗೆಯೇ ಮುಳ್ಳೂರು ನಾಗರಾಜ, ಅಲ್ಲಮಪ್ರಭು ಬೆಟ್ಟದೂರು, ಚಂದ್ರಶೇಖರ ಪಾಟೀಲ. ಚನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಗವಿಸಿದ್ಧ ಎನ್.ಬಳ್ಳಾರಿ, ಮುನಿವೆಂಕಟಪ್ಪ, ಮೂಡ್ನಾಕೂಡು ಚಿನ್ನಸ್ವಾಮಿ, ಬಿ.ಟಿ. ಲಲಿತಾ ನಾಯಕ್, ಸತ್ಯಾನಂದ ಪಾತ್ರೋಟ, ಕೆ.ಬಿ. ಸಿದ್ಧಯ್ಯ... ಮುಂತಾದ ಅನೇಕ ಕವಿಗಳು ಕನ್ನಡ ನಾಡಿನ ವರ್ಗ ಪ್ರಜ್ಞೆಯನ್ನು ತಮ್ಮದೇ ಪಾತಳಿಯಲ್ಲಿ ಹಿಡಿದಿಟ್ಟಿದ್ದಾರೆ. ಅಲ್ಲಿ ನೊಂದವರ ನೋವನ್ನು ಹೇಳುತ್ತಲೇ ಅದರ ವಿರುದ್ಧ ತಮ್ಮ ಸಿಟ್ಟನ್ನು ಹೊರಹಾಕಿದ್ದಾರೆ. ಈ ಎಲ್ಲಾ ಕವಿಗಳು ಒಂದಿಲ್ಲೊಂದು ರೀತಿಯಲ್ಲಿ ಮಾರ್ಕ್ಸ್ ಚಿಂತನೆಗಳಿಂದ ಪ್ರಭಾವಿತರಾಗಿರುವುದು ಅವರ ಸಾಹಿತ್ಯದಿಂದ ಸ್ಪಷ್ಟವಾಗುತ್ತದೆ. ಅಂದರೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಮಾರ್ಕ್ಸ್‌ವಾದದ ಪ್ರಭಾವ ದಲಿತ–ಬಂಡಾಯ ಸಾಹಿತ್ಯದಲ್ಲಿ ಕಂಡುಬರುತ್ತದೆ. ಈ ಸಾಹಿತ್ಯ ಹೆಚ್ಚು ಸಮಾಜಮುಖಿಯಾದುದು ಮತ್ತು ಚಳವಳಿಯನ್ನು ತನ್ನ ಒಂದು ಭಾಗವನ್ನಾಗಿ ಮಾಡಿಕೊಂಡದ್ದೂ ಸಹಿತ ಮಾರ್ಕ್ಸ್‌ವಾದದ ಚಿಂತನೆ ಈ ಸಾಹಿತ್ಯದಲ್ಲಿ ಬೆರೆಯಲು ಕಾರಣವಾಗಿದೆ.

ಇನ್ನು ದಲಿತ ಬಂಡಾಯದ ಕಥನ ಸಾಹಿತ್ಯಕ್ಕೆ ಬಂದರೆ ಅಲ್ಲಿ ಶೋಷಿತರು ಒಂದು ರೀತಿಯ ದುಡಿಯುವ ಯಂತ್ರಗಳು ಎನ್ನುವುದರ ನಿರೂಪಣೆ ಇರುವುದು ಸ್ಪಷ್ಟ. ದೇವನೂರು ಮಹಾದೇವನ ಕುರಿಯಯ್ಯನಿಂದ ಮೊದಲುಗೊಂಡು ನಂತರ ಬಂದ ಅನೇಕ ಕಥೆಗಾರರು ದುಡಿದು ದುಡಿದು ಸವಕಲಾದ ಶೋಷಿತರ ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಜೊತೆಗೆ ಶೋಷಿತ ವರ್ಗದ ಭೀಕರ ಹಸಿವು ಮತ್ತು ಅದರಿಂದಾದ ಪರಿಣಾಮಗಳನ್ನೂ ಸಹ ಅನೇಕ ಕಥನಕಾರರು ತಮ್ಮ ಕಥನ ಸಾಹಿತ್ಯದಲ್ಲಿ ಅನಾವರಣಗೊಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನೆನೆಯಲೇಬೇಕಾದ ಕಥನಕಾರರು ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕರೀಗೌಡ ಬೀಚನಹಳ್ಳಿ, ಬರಗೂರು ರಾಮಚಂದ್ರಪ್ಪ, ಮ.ನ. ಜವರಯ್ಯ, ಶಾಂತರಸ, ಕುಂ. ವೀರಭದ್ರಪ್ಪ, ಚನ್ನಣ್ಣ ವಾಲೀಕಾರ, ಬೋಳುವಾರ ಮಹಮ್ಮದ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬಕರ್, ಭಾನು

ಮುಸ್ತಾಕ್, ಜಾಣಗೆರೆ ವೆಂಕಟರಾಮಯ್ಯ, ರಾಜಶೇಖರ ನೀರಮಾನ್ವಿ, ಕೇಶವ ಮಳಗಿ, ಆರ್.ಜಿ.ಹಳ್ಳಿ ನಾಗರಾಜ, ಕಾ.ತ. ಚಿಕ್ಕಣ್ಣ, ಬಿ.ಟಿ. ಲಲಿತಾ ನಾಯಕ, ಗೀತಾ ನಾಗಭೂಷಣ, ಮೊಗ್ಗಳ್ಳಿ ಗಣೇಶ, ಸುಬ್ಬು ಹೊಲೆಯಾರ್, ಬಸವರಾಜ ಕುಕ್ಕರಹಳ್ಳಿ, ಎಚ್.ಟಿ. ಪೋತೆ ಮುಂತಾದವರು. ಕಥನ ಸಾಹಿತ್ಯದಲ್ಲಿ ಕೆಳವರ್ಗ ಜನರ ಜೀವನದ ಅಧಿಕೃತ ದಾಖಲೆಗಳಿವೆ. ತಳವರ್ಗದವರ ಬದುಕನ್ನು ಚಿತ್ರಣವನ್ನು ಮತ್ತು ಸಾಂಪ್ರದಾಯಿಕ ವರ್ಗ ವ್ಯವಸ್ಥೆಯ ಬಗೆಗಿನ ಸಂಘರ್ಷಗಳನ್ನು ಇಲ್ಲಿನ ಕಥನ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಭಾರತೀಯ ಸಾಂಪ್ರದಾಯಿಕ ಸಮಾಜದ ತಾತ್ತ್ವಿಕತೆಯ ಮುಖ್ಯ ತೊಡಕೆಂದರೆ ಅದು ಮನುಷ್ಯನ ಪ್ರಜ್ಞೆಗೆ ಮತ್ತು ಸುತ್ತಣದ ಪರಿಸರದೊಂದಿಗಿನ ಸಂಬಂಧದಲ್ಲಿನ ಸೂಕ್ಷ್ಮತೆಯನ್ನು ಗುರುತಿಸದಾಗಿತ್ತು. ಇಲ್ಲಿ ಮನುಷ್ಯ ಪ್ರಜ್ಞೆಗಿಂತಲೂ ಶತಮಾನಗಳಿಂದ ಬಂದ ಧಾರ್ಮಿಕ ಸಿದ್ಧಾಂತವು ಮುಖ್ಯವಾಗಿತ್ತು. ಆ ಸಿದ್ಧಾಂತವು ದೈವೇಚ್ಛೆಯಿಂದ ಕೂಡಿದುದರಿಂದ ಎಲ್ಲರೂ ಅದಕ್ಕೆ ಬದ್ಧರಾಗಿರಬೇಕು. ಅದನ್ನು ಮೀರಿವುದು ನಮ್ಮ ಕೈಯಲ್ಲಿಲ್ಲ. 'ಹಣೆ ಬರಹಕ್ಕೆ ಹೊಣೆ ಯಾರು' ಎನ್ನುವಂತಹ ಹೇಳಿಕೆಗಳ ಹಿನ್ನೆಲೆಯಲ್ಲಿಯೇ ಸಮಾಜದ ಪಾತಳಿಯನ್ನು ನಿರ್ಮಿಸಿದ್ದವು. ಎಲ್ಲರೂ ಅದಕ್ಕೆ ಬದ್ಧರಾಗಿ ಬದುಕುತ್ತಿದ್ದರು. ಈ ಬಗೆಯ ಪರಿಸರದಲ್ಲಿನ ಮನುಷ್ಯ ತನ್ನನ್ನು ತಾನು ಪರಕೀಯನಾಗಿಸಿಕೊಂಡಿದ್ದ. ಅಂತಹ ಮನುಷ್ಯನಿಗೂ ಮತ್ತು ಇತರ ಪ್ರಪಂಚಕ್ಕೂ ಮಧ್ಯೆ ದಾಟಲಾರದ ತಡೆಯೊಂದಿತ್ತು. ಆ ತಡೆಯನ್ನೇ ಒಡೆಯಲು ಮಾರ್ಕ್ಸ್ ತನ್ನ ಆಲೋಚನೆಗಳನ್ನು ಸೈದ್ಧಾಂತೀಕರಿಸಿದ. ಅಂತಹ ವಿಧಾನವೇ ಕನ್ನಡ ದಲಿತ–ಬಂಡಾಯ ಸಾಹಿತ್ಯದಲ್ಲಿ ನಮಗೆ ಗೋಚರವಾಗುತ್ತದೆ. ಯಾವ ಸಮಾಜ ತನ್ನ ಭಾಗವಾಗಿದ್ದ ಕೆಲವರನ್ನು ಪರಕೀಯರನ್ನಾಗಿಸಿತ್ತೋ ಅಂತಹವರ ಪರವಾದ ಸಾಹಿತ್ಯವು ಈ ಪಂಥದವರಲ್ಲಿ ಕಾಣಿಸಿಕೊಂಡಿತು. ಸಾಮಾಜಿಕ ವಾಸ್ತವ ಬಾಹ್ಯದ ಯಾವುದೋ ಮೂಲದಿಂದ ಹುಟ್ಟಿದ್ದು ಎನ್ನುವ ಭ್ರಾಂತಿಯಿಂದ ಹೊರಬಂದ ಈ ಸಾಹಿತಿಗಳು, ಅದನ್ನು ಮನುಷ್ಯನ ಒಳಗೆ, ಆತ ನಿರ್ಮಿಸಿದ ಸಮಾಜದ ವ್ಯವಸ್ಥೆಯೊಳಗೆ ಹುಡುಕಲು ಪ್ರಾರಂಭಿಸಿದರು. ಅಂತಿಮವಾಗಿ ಪರಕೀಯತೆಯಲ್ಲಿ ಹುಟ್ಟಿದ ಪ್ರಜ್ಞೆಯೊಂದು ಮನುಷ್ಯನಲ್ಲೇ ಸ್ವಯಂಪೂರ್ಣಗೊಳ್ಳುತ್ತದೆ ಎನ್ನುವ ನಿಲುವಿಗೆ ಬಂದರು. ಅದನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ತೆರೆದಿಡುವ ಪ್ರಯತ್ನ ಮಾಡಿದರು.

ಕಲಾತ್ಮಕ ಅನುಭವ ಸಾಮಾಜಿಕ ಅನುಭವವೂ ಆಗಿರುತ್ತದೆ ಎನ್ನುವ ಮಾತಿದೆ. ಈ ಮಾತಿನಂತೆ ದಲಿತ–ಬಂಡಾಯದ ಕಥನಕಾರರು ತಮ್ಮ ಸಾಮಾಜಿಕ ಅನುಭವಗಳನ್ನೇ ಕಲಾತ್ಮಕವಾಗಿ ಕಥನಗಳ ರೂಪದಲ್ಲಿ ಕಟ್ಟಿಕೊಟ್ಟರು. ವಿಶೇಷವಾಗಿ ದೇವನೂರು ಮಹಾದೇವ, ಮನಜ, ಬರಗೂರು ರಾಮಚಂದ್ರಪ್ಪ, ಕುಂ. ವೀರಭದ್ರಪ್ಪನಂಥವರ ಕಥನಗಳು ಬಡತನ ಹಾಗೂ ಒಡೆತನದ ನೆಲೆಗಳಲ್ಲಿ ರೂಪುಗೊಂಡವು. ಅಲ್ಲಿ ಶೋಷಣೆ ಎನ್ನುವುದು ಮುಖ್ಯವಾಗಿ ಕಾಣಿಸಿಕೊಂಡಿದ್ದಾಗ್ಯೂ ಶೋಷಣೆಯೊಳಗಣ ಭಾಗವಾಗಿರುವ ವರ್ಗ ಶೋಷಣೆಯ ಹಲವು ಎಳೆಗಳು ಇವರ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಬಹುಮುಖ್ಯವಾಗಿ ಗ್ರಾಮೀಣ ಪರಿಸರದಲ್ಲಿನ ವರ್ಗ ಶೊಷಣೆಯ ಚಹರೆಗಳು ಇವರ ಸಾಹಿತ್ಯದಲ್ಲಿ ವ್ಯಕ್ತವಾದವು. ಸಾಹಿತ್ಯವೆನ್ನುವುದು ಎಲ್ಲವನ್ನೂ ಬದಲಿಸಲಾರದು. ಆದರೆ ಸಾಹಿತ್ಯ ಪ್ರಜ್ಞೆಯನ್ನು ರೂಪಿಸುತ್ತದೆ



ಎಂದು ನಂಬುತ್ತದೆ ಮಾರ್ಕ್ಸ್‌ವಾದ. ಸಾಹಿತ್ಯವೆನ್ನುವುದು ಸಾಮಾಜಿಕರನ್ನು ಜಾಗೃತಗೊಳಿಸುತ್ತದೆ. ಇಂತಹ ಪ್ರಜ್ಞೆಯನ್ನು ದಲಿತ–ಬಂಡಾಯ ಕಥನ ಸಾಹಿತ್ಯ ಜಾಗೃತಗೊಳಿಸಿತು. ವರ್ಗಾಧಾರಿತ ಸಮುದಾಯಗಳ ಸಂವೇದನೆಯನ್ನು ಈ ಕಥನಕಾರರು ಅತ್ಯಂತ ತೀಕ್ಷ್ಣವಾಗಿ ಸಾಹಿತ್ಯಕ್ಕಿಳಿಸಿದರು. ಹಾಗಾಗಿಯೇ ಈ ಸಾಹಿತ್ಯ ಹಿಂದಿನ ಸಾಹಿತ್ಯಕ್ಕಿಂತ ಭಿನ್ನ ನೆಲೆಯಲ್ಲಿ, ಭಿನ್ನ ಸ್ವರೂಪದಲ್ಲಿ, ಭಿನ್ನ ಆಶಯಗಳಲ್ಲಿ, ಭಿನ್ನ ಕ್ರಮದಲ್ಲಿ ಅಭಿವ್ಯಕ್ತಗೊಂಡಿತು. ಅದು ಬಳಸಿದ ಭಾಷೆಯಿಂದ ಹಿಡಿದು ಒಳಗೊಂಡ ವಸ್ತುವಿನ ವರೆಗೂ ಈ ಭಿನ್ನತೆಗಳು ಕಾಣಿಸಿಕೊಂಡವು. ಮಾರ್ಕ್ಸ್‌ವಾದವು ಸಾಮಾಜಿಕ ಬದಲಾವಣೆಯನ್ನು ತನ್ನ ಮುಖ್ಯ ನಿಲುವಾಗಿಸಿಕೊಂಡಿತ್ತೋ ಹಾಗೆಯೇ ದಲಿತ–ಬಂಡಾಯ ಸಾಹಿತ್ಯವೂ ತನ್ನ ಅದೇ ನಿಲುವನ್ನು ತಾಳಿಯೇ ಸೃಜಿಸಲ್ಪಟ್ಟಿತು.

ದಲಿತ ಬಂಡಾಯದ ತಾತ್ತ್ವಿಕತೆಯು ಸಹ ಈ ಹಿನ್ನೆಲೆಯಲ್ಲಿಯೇ ರೂಪುಗೊಂಡದ್ದು. ಬಹುಶಃ ಯಾವ ಒಂದು ಬೌದ್ಧಿಕ ವಲಯವು ಸಾಮಾಜಿಕ ಸಮಾನತೆಯ ಕುರಿತು, ಸಾಮಾಜಿಕ ಬದಲಾವಣೆಯ ಕುರಿತು ಆಲೋಚಿಸುತ್ತದೆಯೇ ಅಂತವುಗಳ ತಾತ್ತ್ವಿಕತೆ ಹೆಚ್ಚೂ ಕಮ್ಮಿ ಒಂದೇ ಬಗೆಯಲ್ಲಿಯೇ ಮೈದಾಳಿರುತ್ತದೆ. ಹೀಗಾಗಿ ಅವುಗಳ ಮಧ್ಯೆ ಒಂದು ಬಗೆಯ ಅನುಸಂಧಾನ ನಿರಂತರವಾಗಿ ನಡೆಯುತ್ತಿರುತ್ತದೆ. ಅದನ್ನೇ ಕೊಳ್ಳು–ಕೊಡುವಿಕೆ, ಪ್ರಭಾವ–ಪ್ರೇರಣೆ ಎಂದು ಗುರುತಿಸಲಾಗುತ್ತದೆ. ಈ ಅನುಸಂಧಾನವು ಸಮಾಜಶಾಸ್ತ್ರೀಯ ನೆಲೆಯಲ್ಲಿಯೇ ನಡೆಯುತ್ತದೆ. ಅಂತೆಯೇ ದಲಿತ–ಬಂಡಾಯ ಸಾಹಿತ್ಯ ಒಳಗೊಂಡ ಅರ್ಥ, ಅದು ಅನುಸರಿಸಿದ ಶೈಲಿ, ಬಳಸಿಕೊಂಡ ನಿರೂಪಣಾ ಕ್ರಮವು ಒಂದರ್ಥದಲ್ಲಿ ಸಮಾಜದ್ದೇ. ಅದಕ್ಕಾಗಿಯೇ ಜನಮುಖಿ ಸಾಹಿತ್ಯ ಸದಾ ತನ್ನ ವರ್ತಮಾನದ ಸಮಾಜವನ್ನು ತೆಕ್ಕೆಯಲ್ಲಿಟ್ಟುಕೊಂಡಿರುತ್ತದೆ. ಅದರೊಟ್ಟಿಗೆ ಆ ಸಮಾಜದ ಚರಿತ್ರೆಯನ್ನು ಬಳಸಿಕೊಂಡಿರುತ್ತದೆ. ಚರಿತ್ರೆಯು ಯಥಾವತ್ತಾಗಿ ಬಳಕೆಗೊಳ್ಳದೆ ಸಾಹಿತ್ಯದ ಕಲಾತ್ಮಕತೆಗೆ ಅನುಗುಣವಾಗಿ ಅನಾವರಣಗೊಂಡಿರುತ್ತದೆ. ಮಾರ್ಕ್ಸ್ ಹೇಳಿದಂತೆ ಮನುಷ್ಯನು ತನಗೆ ಬೇಕಾದಂತೆ ಸಾಮಾಜಿಕ ಉತ್ಪನ್ನವನ್ನು ಮಾಡಬಲ್ಲ. ಏಕೆಂದರೆ ಉತ್ಪಾದನೆ ಎನ್ನುವುದು ಪ್ರತಿಯೊಬ್ಬನ ಅವಶ್ಯಕತೆಯೂ ಆಗಿರುತ್ತದೆ. ಹೂಡಿಕೆದಾರನ ಉತ್ಪಾದನೆಯು ಬಂಡವಾಳಶಾಹಿಯ ಹಿನ್ನೆಲೆಯನ್ನು ಒಳಗೊಂಡಿದ್ದರೆ, ಬರಹಗಾರನ ಉತ್ಪಾದನೆಯು ಬೌದ್ಧಿಕ ಚಿಂತನೆಯಿಂದ ಉತ್ಪಾದಿಸಲ್ಪಟ್ಟಿರುತ್ತದೆ. ಇಲ್ಲಿ ಮುಖ್ಯವಾಗಿ ಗುರುತಿಸಬೇಕಾದುದು ಉತ್ಪಾದನೆಗೂ ವ್ಯಕ್ತಿಗೂ ನೇರವಾದ ಸಂಬಂಧವಿರುವಂತೆ, ಉತ್ಪಾದನೆಗೂ ಸಮಾಜಕ್ಕೂ ನೇರವಾದ ಸಂಬಂಧವಿರುವುದನ್ನು. ಈ ಹಿನ್ನೆಲೆಯಲ್ಲಿ ದಲಿತ–ಬಂಡಾಯ ಸಂದರ್ಭದ ಕಥನಗಳು ಹುಟ್ಟಿಕೊಂಡಿವೆ. ಭಿನ್ನ ಸಾಮಾಜಿಕ ಪರಿಸರಕ್ಕನುಗುಣವಾಗಿ, ವಿಭಿನ್ನವಾದ ಗ್ರಹಿಕೆಗೆ ಅನುಗುಣವಾಗಿ ಅವುಗಳ ಸ್ವರೂಪ ಬದಲಾಗಿರಬಹುದೇ ವಿನಃ, ಅವುಗಳ ಸಾಮಾಜಿಕ ಸಂಬಂಧ ಒಂದೇ ಬಗೆಯದ್ದು. ಹಾಗಾಗಿಯೇ ಸಾಹಿತ್ಯಿಕ ಚಟುವಟಿಕೆಗಳನ್ನು ಎಂದಿಗೂ ಸಮಾಜದಿಂದ ಬೇರ್ಪಡಿಸಲು ಆಗುವುದಿಲ್ಲ. ಅದಕ್ಕೂ ಮುಖ್ಯವಾಗಿ ಸಾಹಿತ್ಯ ಎನ್ನುವುದು ಸಮಾಜದ ಒಂದು ಪ್ರಕ್ರಿಯೆಯೂ ಆಗಿದೆ ಎನ್ನುವುದನ್ನು ಈ ಸಾಹಿತ್ಯ ತೋರಿಸಿ ಕೊಟ್ಟಿದೆ.

ಹೇಗೆ ಮಾರ್ಕ್ಸ್‌ವಾದಿ ಚಿಂತನೆಯು ಸಾಮಾಜಿಕ ಚಿಂತನೆಯ ಭಾಗವೋ ಹಾಗೆಯೇ ದಲಿತ–ಬಂಡಾಯ ಸಾಹಿತ್ಯವೂ ಸಹ ಸಾಮಾಜಿಕ ತಿಳುವಳಿಕೆಯ ಭಾಗವಾಗಿದೆ. ಅದು ಸಮಾಜದ ಅಲಕ್ಷಿತ ವಯಲಯವನ್ನು ನಿರೂಪಿಸುತ್ತಿದ್ದೇವೆ ಎನ್ನುವ ಪ್ರಜ್ಞಾಪೂರ್ವಕ ಅಂಶವಾಗಿಯೇ ಬಂದದ್ದು. ಮಾರ್ಕ್ಸ್‌ವಾದವನ್ನು ಅಂತರ್ಗತಿಸಿಕೊಂಡ ಈ ಲೇಖಕರ ಚಿಂತನೆಗಳು ಅಪ್ಪಟ ಸಮಾಜನಿಷ್ಠ ಹಾಗೂ ಸಮುದಾಯ ನಿಷ್ಠವಾಗಿಯೇ ಮೂಡಿಬಂದವು. ಇಂತಹ ಚಿಂತನೆಗಳನ್ನೇ ಅವರು ವಿಶ್ವಾತ್ಮಕವಾಗಿಸಲು ಪ್ರಯತ್ನಿಸಿದರು. ಭಾರತೀಯ ಸಮಾಜದಲ್ಲಿ ಆಳುವ ವರ್ಗವು ರೂಪಿಸಿದ್ದ ತಾತ್ತ್ವಿಕತೆಗಳಿಗೆ ಪರ್ಯಾಯವಾಗಿ ದಲಿತ–ಬಂಡಾಯದ ಲೇಖಕರು ಆಳಿಸಿಕೊಳ್ಳುವ ವರ್ಗದ ನೆಲೆಯಿಂದ ಹೊಸ ತಾತ್ತ್ವಿಕತೆಯನ್ನು ಸೃಷ್ಟಿಸಿದರು. ಇದಕ್ಕೆ ಕೇವಲ ಒಂದೋ ಎರಡೋ ಉದಾಹರಣೆಗಳನ್ನು ಕೊಟ್ಟರೆ ಪರಿಪೂರ್ಣವಾಗುವುದಿಲ್ಲ. ಇಡೀ ದಲಿತ–ಬಂಡಾಯದ ಎಲ್ಲಾ ಲೇಖಕರು ಈ ಕೆಲಸವನ್ನು ತಮ್ಮ ತಮ್ಮ ಸಾಧ್ಯಾಸಾಧ್ಯತೆಗಳ ಹಿನ್ನೆಲೆಯಲ್ಲಿ ನಿರ್ವಹಿಸಿದರು ಮತ್ತು ನಿರ್ವಚಿಸಿದರು. ಆ ತಾತ್ತ್ವಿಕತೆಯು ಬರೀ ಆಲೋಚನೆಗಳಿಗೆ ಸೀಮಿತವಾಗಿಲ್ಲ. ಅದರೊಟ್ಟಿಗೆ ಲೇಖಕರು ಬದುಕಿದ ಸಮಾಜ, ಕಾಲ ಮತ್ತು ಪರಿಸರಗಳನ್ನು ಪ್ರತಿನಿಧಿಸಿದೆ.

ದಲಿತ–ಬಂಡಾಯ ಸಾಹಿತಿಗಳು ಯಾವುದೇ ವಸ್ತುವನ್ನು ಆಯ್ದುಕೊಂಡರೂ ಅದನ್ನು ಸಮಕಾಲೀನ ನೆಲೆಯಲ್ಲಿಯೇ ನೋಡುತ್ತಾರೆ. ವ್ಯವಸ್ಥಿತವಾಗಿ ನಡೆದುಕೊಂಡು ಬಂದ ಶೋಷಿತ ಸಮಾಜದಲ್ಲಿದ್ದುಕೊಂಡೇ ಅದನ್ನು ಮೀರಿ ನಿಲ್ಲಲು ಪ್ರಯತ್ನಿಸುತ್ತಾರೆ. ಭೂಮಾಲೀಕರು ಕಾರ್ಮಿಕರನ್ನು ದುಡಿಸಿಕೊಂಡ ಬಗೆಯನ್ನು, ತಳವರ್ಗದವರ ತುಂಡು ತುಂಡು ಭೂಮಿಗಳನ್ನು ಕಬಳಿಸಿಕೊಂಡ ಬಗೆಯನ್ನು, ತುಂಡು ಭೂಮಿಗಳೇ ಖಂಡಗಳಾಗಿ ಭೂಮಾಲೀಕರ ಆಸ್ತಿ ಅಭಿವೃದ್ಧಿಗೊಂಡ ವಿಧವನ್ನು, ಮುಂದುವರೆದು ನಂತರದಲ್ಲಿ ಬಂಡವಾಳಶಾಹಿಗಳು ದುರ್ಬಲ ಸಮುದಾಯಗಳನ್ನು ತಮ್ಮ ಸಂಪತ್ತಿನ ವೃದ್ಧಿಗೆ ವಿನಿಯೋಗಿಸಿಕೊಂಡ ರೀತಿಯನ್ನು... ಈ ಎಲ್ಲವನ್ನೂ ದಲಿತ–ಬಂಡಾಯ ಸಾಹಿತಿಗಳು ಕೆಲವೊಮ್ಮೆ ನೇರವಾಗಿಯೂ, ಮತ್ತೆ ಕೆಲವೊಮ್ಮೆ ಅನೇರವಾಗಿಯೂ ತಮ್ಮ ಸಾಹಿತ್ಯ ಕೃತಿಗಳ ಚೌಕಟ್ಟಿನಲ್ಲಿ ಕಟ್ಟಿಕೊಟ್ಟಿದ್ದಾರೆ. ಎಲ್ಲಾ ಸಾಹಿತಿಗಳ ಕೃತಿಗಳಲ್ಲಿ ಇದು ಮುಖ್ಯ ನೆಲೆಯಲ್ಲಿ ಕಾಣಿಸುವುದಿಲ್ಲವಾದರೂ ಶೋಷಣೆಯ ಒಂದು ಭಾಗವಾಗಿ ಅನೇಕ ಕಡೆಗಳಲ್ಲಿ ಕಾಣಿಸಿಕೊಂಡದ್ದುಂಟು. ಸಾಂಸ್ಕೃತಿಕ ಶೋಷಣೆಗೆ ಅಂಬೇಡ್ಕರ್‌ವಾದ ಪ್ರಭಾವ ಬೀರಿದಂತೆಯೇ, ಆರ್ಥಿಕ ಶೋಷಣೆಗೆ ಮಾರ್ಕ್ಸ್‌ವಾದವೂ ಸಹಜವಾಗಿಯೇ ಈ ಸಾಹಿತಿಗಳ ಮೇಲೆ ಪ್ರಭಾವ ಬೀರಿದ್ದುಂಟು. ಆಯಾ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ವರ್ಗ ಶೋಷಣೆಗೆ ಭಿನ್ನ ಭಿನ್ನ ಚಹರೆಗಳನ್ನು ಗುರುತಿಸಿದ್ದಾರೆ. ಆರಂಭ ಕಾಲಘಟ್ಟದ ದಲಿತ–ಬಂಡಾಯ ಸಾಹಿತಿಗಳನ್ನು ಇಂತಹ ಶೋಷಣೆಯ ವಿಷಯಗಳನ್ನು ಅತ್ಯಂತ ನೇರವಾಗಿ ಪ್ರಸ್ತಾಪಿಸಿದರೆ, ನಂತರ ಕಾಲಘಟ್ಟದಲ್ಲಿ ಬಂದ ಸಾಹಿತಿಗಳು ತಮ್ಮ ಕಾಲದ ಶೋಷಣೆಯ ವಿಧಾನಕ್ಕನುಗುಣವಾಗಿ ಅದನ್ನು ಬದಲಾಯಿಸಿಕೊಂಡು, ಬದಲಾದ ಕಾಲದ ಶೋಷಣೆಯ ಭಿನ್ನ ಕೋನಗಳನ್ನು ಹಿಡಿದಿಟ್ಟಿದ್ದಾರೆ.

ಮಾರ್ಕ್ಸ್ ಸಿದ್ಧಾಂತದಲ್ಲಿ ಉತ್ಪಾದನೆ ಎನ್ನುವುದು ಪ್ರಮುಖ ಪರಿಕಲ್ಪನೆ. ಅದಕ್ಕಾಗಿಯೇ



ಮಾರ್ಕ್ಸ್ ಭೌತಿಕ ಉತ್ಪಾದನೆಗಳಂತೆಯೇ ಸಾಹಿತ್ಯ ಕೃತಿಗಳನ್ನೂ ಸಹ ಸಾಹಿತ್ಯ ಉತ್ಪಾದನೆ ಎಂದು ಕರೆಯುತ್ತಾನೆ. ಎಂಗಲ್ಸ್ ಚರಿತ್ರೆಯನ್ನು ಕುರಿತು ಮಾತನಾಡುವಾಗ ಉತ್ಪಾದನೆ ಮತ್ತು ಪುನರುತ್ಪಾದನೆಯು ಚರಿತ್ರೆಯ ತಿರುಳು ಎನ್ನುತ್ತಾನೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಸಾಮಾಜಿಕ ಉತ್ಪಾದನೆಗೆ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ ಸಾಹಿತ್ಯದ ಉತ್ಪಾದನೆಗೂ ಲಭಿಸುತ್ತದೆ. ಭೌತಿಕ ಉತ್ಪಾದನೆಯ ಹಿಂದೆ ಮನುಷ್ಯನ ಶ್ರಮದ ಜೊತೆಗೆ ಅವರ ಮನೋಸ್ಥಿತಿಯೂ ಇರುತ್ತದೆ. ಅದರಂತೆ ಸಾಹಿತ್ಯದ ಉತ್ಪಾದನೆಯಲ್ಲೂ ಸಾಹಿತಿಯ ಶ್ರಮ ಮತ್ತು ಮನೋಸ್ಥಿತಿಗಳು ಕೆಲಸ ಮಾಡುತ್ತವೆ. ಇದನ್ನು ಇಲ್ಲಿ ಪ್ರಸ್ತಾಪಿಸಿದುದರ ಉದ್ದೇಶವಿಷ್ಟೇ; ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅದರದೇ ಆದ ಪರಂಪರೆಯಿದೆ. ಆ ಪರಂಪರೆಯ ಅನೇಕ ಭಿನ್ನ ರೂಪ–ಸ್ವರೂಪಗಳೊಂದಿಗೆ ನಮ್ಮ ಮುಂದಿದೆ. ಆದರೆ ಕಳೆದ ಶತಮಾನದ ಎಪ್ಪತ್ತರ ದಶಕದ ನಂತರದ ಸಾಹಿತ್ಯ ಈ ಹಿಂದಿನ ಎಲ್ಲಾ ಸಾಹಿತ್ಯ ಸ್ವರೂಪಕ್ಕಿಂತ ಭಿನ್ನವಾಗಿ ಮೂಡಿಬಂತು. ಭಾಷೆಯ ಬಳಕೆಯಿಂದ ಮೊದಲುಗೊಂಡು ಭಾವದ ಅಭಿವ್ಯಕ್ತಿಯವರೆಗಿನ ಎಲ್ಲಾ ಹಂತಗಳಲ್ಲೂ ಅದು ತನ್ನತನವನ್ನು ಸೃಷ್ಟಿಸಿಕೊಂಡಿತು. ಅಂದರೆ ಪರಿವರ್ತಿತ ಕಾಲದ ಸಾಹಿತ್ಯದ ಚಹರೆಗಳು ಬದಲಾದವು. ಒಂದು ಕಾಲಕ್ಕೆ ಕಾಣಿಸಿಕೊಂಡ ಚಹರೆಗಳು ಮತ್ತೆ ಮತ್ತೆ ಪುನರಾವರ್ತನೆಗೊಳ್ಳಲಾರವು. ಒಂದು ವೇಳೆ ಪುನರಾವರ್ತನೆಗೊಂಡರೆ ಸಾಹಿತ್ಯದ ಚಹರೆಗಳು ಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಏಕೆಂದರೆ ವರ್ತಮಾನದ ಮನುಷ್ಯನ ಆದ್ಯತೆಗಳು ಬೇರೆಯಾಗಿವೆ. ಇಂದು ನಾವು ಯಾವುದನ್ನು ದಲಿತ–ಬಂಡಾಯೋತ್ತರ ಎಂದು ಕರೆಯುತ್ತೇವೆಯೋ ಅಂತಹ ಸಾಹಿತ್ಯದಲ್ಲಿ ಈ ಬಗೆಯ ಭಿನ್ನ ಚಹರೆಗಳನ್ನು ಕಾಣಬಹುದಾಗಿದೆ. ದಲಿತ–ಬಂಡಾಯದ ಬೇರುಗಳನ್ನಿಟ್ಟುಕೊಂಡೇ ಇಂದಿಗೂ ಬರೆಯುತ್ತಿರುವ ಅನೇಕ ಸಾಹಿತ್ಯವೇ ಇದಕ್ಕೆ ನಿದರ್ಶನ.

ಈ ಪರಿವರ್ತನೆ ಎನ್ನುವುದು ಚಲನಶೀಲ ಸಾಹಿತ್ಯಕ್ಕೆ ತೀರಾ ಅಗತ್ಯ. ಏಕೆಂದರೆ ಹಿಂದಿನ ಸಾಹಿತ್ಯ ಹೇಳದ್ದನ್ನು, ಅಥವಾ ಕಾಲದ ಒತ್ತಾಸೆಯಿಂದಾಗಿ ಹಿಂದಿನ ಸಾಹಿತ್ಯಕ್ಕೆ ಸಾಮಗ್ರಿಯಾಗದ್ದು ಇಂದಿನ ಸಾಹಿತ್ಯಕ್ಕೆ ದಕ್ಕುವ ಸಂದರ್ಭವಿರುತ್ತದೆ. ಹಾಗಾಗಿ ಹಿಂದಿಗಿಂತಲೂ ಇಂದು ಬಂಡವಾಳಶಾಹಿ ಸಾಮಾಜಿಕ ಬದುಕಿನಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ಸಂಬಂಧಗಳು ಹೆಚ್ಚು ಸಂಕೀರ್ಣಗೊಳ್ಳುತ್ತಿವೆ. ಈ ಸಂಕೀರ್ಣತೆ ಎನ್ನುವುದು ಎಲ್ಲಾ ಕಾಲಕ್ಕೂ ಇದ್ದಾಗಲೂ ಸ್ವಾತಂತ್ರ್ಯೋತ್ತರ ದೇಶದಲ್ಲಾದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು ಸಾಹಿತ್ಯ ಮತ್ತು ಸಮಾಜದ ನಡುವಿನ ಸಂಬಂಧವನ್ನು ಸಂಕೀರ್ಣಗೊಳಿಸಿದ್ದುಂಟು. ದಲಿತ–ಬಂಡಾಯದ ಬರಹಗಾರರು ಇಂತಹ ಸಂಕೀರ್ಣತೆಯನ್ನು ಮೀರಿ ನಿಂತು ಸಾಹಿತ್ಯ ಸೃಷ್ಟಿಸಿದರು. ಬಹುಶಃ ಈ ಸಾಹಿತ್ಯವು ಚಳವಳಿಯ ಒಟ್ಟೊಟ್ಟಿಗೆ ಸಾಗಿ ಬಂದದ್ದರಿಂದ ಇದು ಸಾಧ್ಯವಾಯಿತೆನಿಸುತ್ತದೆ. ಮಾರ್ಕ್ಸ್‌ವಾದವೂ ಸಹ ಇಂತಹ ಚಲನಶೀಲತೆಯನ್ನು ಒಪ್ಪಿಕೊಳ್ಳುತ್ತದೆ. ಏಕೆಂದರೆ ಬಂಡವಾಳಶಾಹಿ ಸಮಾಜವು ಎಂದಿಗೂ ಏಕರೀತಿಯಲ್ಲಿರುವುದಿಲ್ಲ. ಸಾಮಾಜಿಕರ ಅಭಿರುಚಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ಉತ್ಪಾದಕ ವಸ್ತುಗಳನ್ನು ಉತ್ಪಾದಿಸಬೇಕಾಗುತ್ತದೆ.

ಅದಕ್ಕೆ ತಕ್ಕ ರೀತಿಯಲ್ಲಿಯೇ ಬಂಡವಾಳವನ್ನು ಹೂಡಬೇಕಾಗುತ್ತದೆ. ಅದಕ್ಕನುಗುಣವಾಗಿಯೇ ದುಡಿಯುವವರನ್ನು ದುಡಿಸಿಕೊಳ್ಳಬೇಕಾಗುತ್ತದೆ. ಅಂತೆಯೇ ದಲಿತ-ಬಂಡಾಯ ಸಾಹಿತ್ಯ ಆರಂಭಗೊಂಡ ಕಾಲಘಟ್ಟದ ಸಾಮಾಜಿಕ ಪರಿಸ್ಥಿತಿಗಳೂ ಸಹ ಬದಲಾಗುತ್ತಾ ಬಂದಿವೆ. ವರ್ಗ ಶೋಷಣೆ ಎನ್ನುವುದು ಅಂದೂ ಇತ್ತು. ಇಂದೂ ಇದೆ. ಆದರೆ ವರ್ಗ ಶೋಷಣೆಯ ವಿಧಾನಗಳು ಬದಲಾಗಿವೆ. ಅದನ್ನೇ ದಲಿತ-ಬಂಡಾಯ ಸಾಹಿತಿಗಳು ತಮ್ಮ ಅನುಭವಗಳಿಗನುಗುಣವಾಗಿ ಭಿನ್ನವಾಗಿ ಕಟ್ಟಿಕೊಡಲು ಪ್ರಯತ್ನಿಸಿರುವುದು ಇಡೀ ದಲಿತ-ಬಂಡಾಯ ಸಾಹಿತ್ಯವನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಭೂಮಿ, ಬಡತನ, ಶೋಷಣೆ, ಹಸಿವು, ದೌರ್ಜನ್ಯ ಮುಂತಾದವುಗಳು ಆರಂಭದಿಂದ ಹಿಡಿದು ಇಂದಿಗೂ ಅದೇ ಮನೋಭಾವದಲ್ಲಿ ಬರೆಯುತ್ತಿರುವ ದಲಿತ-ಬಂಡಾಯದ ಬರಹಗಾರರಲ್ಲಿವೆ. ಆದರೆ ಇಂದು ಅವುಗಳು ಅನೇಕ ಹೊರಳುದಾರಿಗಳಲ್ಲಿ ಸಾಗುತ್ತಿವೆ. ಆರಂಭದ ತಲೆಮಾರಿನ ಈ ಸಾಹಿತಿಗಳು ಪುರೋಹಿಶಾಹಿ ವ್ಯವಸ್ಥೆ, ಜಮೀನ್ದಾರಿ ಪದ್ಧತಿಗಳಂತಹವುಗಳ ವಿರುದ್ಧ ಗುಡುಗಿದರು. ಕೆಲವರ ಸಾಹಿತ್ಯದಲ್ಲಿ ಆಕ್ರೋಶವಿತ್ತು. ಆವೇಶವೂ ಇತ್ತು. ಆದರೆ ನಂತರ ಸಾಹಿತಿಗಳಲ್ಲಿ ಅದರ ಆಕ್ರೋಶದ ಸ್ವರೂಪ ಬದಲಾಯಿತು. ಶೋಷಣೆಯ ವರಸೆಗಳು ಬದಲಾದಂತೆ ಅದನ್ನು ಗ್ರಹಿಸಿ ಅಭಿವ್ಯಕ್ತಿಸುವ ಕ್ರಮಗಳು ಬದಲಾಗಿವೆ. ಜಾಗತೀಕರಣ, ವ್ಯಾಪಾರೀಕರಣ, ಕೈಗಾರೀಕಿಕರಣ, ಆಧುನೀಕರಣ... ಮುಂತಾದವುಗಳು ತಳವರ್ಗದ ಬದುಕನ್ನು ದಿಕ್ಕೆಡಿಸುತ್ತಿವೆ. ಇದನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿರುವ ದಲಿತ-ಬಂಡಾಯ ಸಾಹಿತಿಗಳು ಅಷ್ಟೇ ಸೂಕ್ತವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದಾರೆ.

ಇನ್ನು ದಲಿಡ-ಬಂಡಾಯದ ಆತ್ಮಕಥೆಗಳನ್ನು ಗಮನಿಸಿದಾಗ ಅವರ ಬದುಕಿನ ಮೇಲಾದ ಮಾರ್ಕ್ಸ್‌ವಾದದ ಪ್ರಭಾವ ಮನದಟ್ಟಾಗುತ್ತದೆ. ಬರಹ ಹಾಗೂ ಬದುಕಿಗೆ ನೇರ ಸಂಬಂಧವನ್ನಿಟ್ಟುಕೊಂಡು ಬಂದ ದಲಿತ-ಬಂಡಾಯ ಸಾಹಿತ್ಯವು ಸಹಜವಾಗಿಯೇ ಬದುಕಿನ ಘಟನಾವಳಿಗಳಿಗೆ ಸೃಜನ ರೂಪವನ್ನು ತೊಡಿಸಿದೆ. ಜಾತಿ ಶೋಷಣೆಯ ಜೊತೆಗೆ ವರ್ಗ ಶೋಷಣೆಗೊಳಗಾಗಿ ಅವರುಗಳು ಅನುಭವಿಸಿದ ಅನೇಕ ಮುಜುಗರದ ಘಟನಾವಳಿಗಳೊಂದಿಗೆ, ಅದಕ್ಕೆ ಕಾರಣವಾದ ವ್ಯವಸ್ಥೆಯನ್ನೂ ಅನೇಕರು ತಮ್ಮ ಆತ್ಮಕಥೆಗಳಲ್ಲಿ ವಿವರಿಸಿದ್ದಾರೆ. ಬಹಳ ಮುಖ್ಯವಾಗಿ ದುಡಿಮೆಯ ಪ್ರತಿಫಲ ದಕ್ಕದಿರುವುದೇ ತಳ ವರ್ಗಗಳ ಹಿಂದುಳಿವಿಕೆಗೆ ಕಾರಣವಾಗಿರುವುದು ಅನೇಕರ ಆತ್ಮಕಥನಗಳು ನಿರೂಪಿಸಿವೆ. ಬಹಳ ಮುಖ್ಯವಾಗಿ ಈ ಆತ್ಮಕಥೆಗಳು ಬಡತನ ಮತ್ತು ಹಸಿವು ತಳವರ್ಗಗಳ ಜೀವನ ಕ್ರಮವೂ ಹೌದು ಹಾಗೂ ಅದೊಂದು ಅನುಭವವೂ ಹೌದು ಎನ್ನುವುದನ್ನು ಸ್ಪಷ್ಟಪಡಿಸಿವೆ.

ಇಡೀ ದಲಿತ-ಬಂಡಾಯ ಸಾಹಿತ್ಯವನ್ನು ಅವಲೋಕಿಸಿದರೆ ಹಳೆಯ ಪ್ರಶ್ನೆಗಳ ಹಿನ್ನೆಲೆಯಲ್ಲಿಯೇ ಸಮಾಜದ ನಿರೂಪಣೆಯಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ತಳವರ್ಗಗಳು ದುಡಿಯುವ ಯಂತ್ರಗಳು. ದೇವನೂರರ ಕುರಿಮಯ್ಯ, ಕುಂ.ವೀ.ಯವರ ಕತ್ತಲ, ಮೊಗಳ್ಳಿಯವರ ಚಿಕ್ಕಣ್ಣ... ಮುಂತಾದ ಪಾತ್ರಗಳು ಎಲ್ಲಾ ಬಗೆಯ ಶೋಷಣೆಗಳಿಗೆ ಒಳಗಾಗುತ್ತವೆ. ಹಾಗಾಗಿ ದಲಿತ-ಬಂಡಾಯ ಕಥನ ಸಾಹಿತ್ಯವು ತಳವರ್ಗಗಳ ಸಾಂಸ್ಕೃತಿಕ ಸಂಪನ್ನತೆಯನ್ನು ವಿವರಿಸುತ್ತಲೇ ಕಾಲಘಟ್ಟದಲ್ಲಿ ಅದು



ಸ್ಥಿತ್ಯಂತರಕ್ಕೊಳಗಾದ ಬಗೆಯನ್ನು ಆಗ ಅದು ಒಳಗೊಂಡ ಸಂಘರ್ಷವನ್ನು ಚಿತ್ರಿಸಿದೆ. ಈ ಕಥೆಗಳಲ್ಲಿ ಹೆಚ್ಚಾಗಿ ಸಾಲಕ್ಕೆ ಸಿಲುಕಿದ ವರ್ಗಗಳು ಅದರಿಂದ ಹೊರಬರಲಾಗದೇ ಮೇಲ್ವರ್ಗದವರ ಚಾಕರಿಯಲ್ಲಿಯೇ ತಮ್ಮ ಜೀವನವನ್ನು ಸವೆಸಿಕೊಳ್ಳುವ ಚಿತ್ರಣಗಳು ಹೆಚ್ಚಾಗಿ ಕಂಡುಬರುತ್ತವೆ. ದೇವನೂರು ಮಹಾದೇವರಿಂದ ಹಿಡಿದು ಕಳೆದ ದಶಕದಿಂದ ಹೆಚ್ಚು ಕ್ರಿಯಾಶೀಲರಾಗಿರುವ ಎಚ್.ಟಿ. ಪೋತೆಯವರ ಈವರೆಗಿನ ಕಥನ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸಿದಾಗ ಅಲ್ಲಿ ಶೋಷಣೆ, ಬಡತನ, ಹಸಿವು, ಸಂಘರ್ಷ... ಮುಂತಾದ ವಿಚಾರಗಳ ಜೊತೆಗೆ ವರ್ಗ ತರತಮದ ಬಗೆಗಿನ ಅನೇಕ ಆಯಾಮಗಳು ಅನಾವರಣಗೊಂಡಿವೆ. ಬಡತನವು ತಳವರ್ಗದವರನ್ನು ಪರಾವಲಂಬಿಗಳನ್ನಾಗಿ ಮಾಡಿದೆ. ಕಣ್ಣೆದುರಿಗೆ ಅನ್ಯಾಯವಾಗುತ್ತಿದ್ದರೂ ಅದನ್ನು ಪ್ರತಿರೋಧಿಸುವ ಶಕ್ತಿ ಇಲ್ಲದ ಅಧೀನ ಬದುಕು ಅವರದು. ತಳವರ್ಗದವರು ದುಡಿಯಬೇಕು, ಆದರೆ ದುಡಿಮೆಯ ಫಲವನ್ನು ಮಾತ್ರ ಅನುಭವಿಸಲಾರರು ಎನ್ನುವುದನ್ನು ಅನೇಕ ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ.

ಒಟ್ಟಾರೆ ಕನ್ನಡ ದಲಿತ-ಬಂಡಾಯ ಸಾಹಿತ್ಯವನ್ನು ಪರಿಶೀಲಿಸಿದರೆ ಅಲ್ಲಿ ಮಾರ್ಕ್ಸ್‌ವಾದದ ತಾತ್ತ್ವಿಕ ಚಿಂತನೆಗಳ ಚಹರೆಗಳು ಬಹುವಿಧದಲ್ಲಿ ಕಾಣಿಸುತ್ತವೆ. ವರ್ತಮಾನ ಜಗತ್ತಿನ ಅಭಿವೃದ್ಧಿಯ ಮಾನದಂಡ ಆರ್ಥಿಕ ಅಸ್ತಿತ್ವ ಅಂತೆಯೇ ಭಾರತೀಯ ಆರ್ಥಿಕತೆಯ ರಚನೆಯು ಬಂಡವಾಳಶಾಹಿ ತತ್ವವನ್ನು ಆಧರಿಸಿದುದು ಎನ್ನುವ ಅಂಶವನ್ನು ಈ ಸಾಹಿತ್ಯವು ಪುರಸ್ಕರಿಸಿದೆ. ಜೊತೆಗೆ ಆರ್ಥಿಕ ದಾಸ್ಯತ್ವದಿಂದ ಹೊರಬರಲು ಶೋಷಿತ ವರ್ಗಗಳಿಗೆ ಇರುವ ಮಾರ್ಗ ಸಮಾನತ್ವದ ಆರ್ಥಿಕ ನೀತಿ, ಭೂಮಾಲೀಕರು, ಬಂಡವಾಳಶಾಹಿಗಳು ನಿರ್ಮಿಸಿದ ಆರ್ಥಿಕ ನೀತಿಗಳಿಗೆ ಗಂಟುಮೂಟೆ ಕಟ್ಟಬೇಕು ಎನ್ನುವ ಮನೋಭಾವ, ಉಳ್ಳವರ ಹಿಡಿತದಿಂದ ಇಲ್ಲದವರು ಬಿಡಿಸಿಕೊಳ್ಳಲು ಅದಕ್ಕೊಂದಿಷ್ಟು ಶಕ್ತಿ ಬೇಕು.. ಎನ್ನುವ ಅಂಶಗಳು ಇಲ್ಲಿ ಕಾಣಸಿಗುತ್ತವೆ. ಈ ಲೇಖನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ಧೃತಗಳನ್ನು ನೀಡಿಲ್ಲ. ಒಟ್ಟಾರೆ ಸಾಹಿತ್ಯದ ಆಶಯದ ಹಿನ್ನೆಲೆಯಲ್ಲಿ ದಲಿತ-ಬಂಡಾಯದ ಮಾರ್ಕ್ಸ್‌ವಾದಿ ನಿಲುವುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಹಾಗಾಗಿ ಈ ಪ್ರಬಂಧವನ್ನು ನಿದರ್ಶನಗಳ ಭಾರದಿಂದ ಲೇಖನವನ್ನು ನಲುಗಿಸಿಲ್ಲ. ಮಾರ್ಕ್ಸ್‌ವಾದದ ತಾತ್ತ್ವಿಕ ಹಿನ್ನೆಲೆಯೊಂದಿಗೆ ಕನ್ನಡದ ದಲಿತ-ಬಂಡಾಯ ಸಾಹಿತ್ಯವನ್ನು ಗ್ರಹಿಸುವ ಕ್ರಮವನ್ನು ಅನುರಸರಿಸಲಾಗಿದೆ. ಹಾಗಂತ ಮಾರ್ಕ್ಸ್‌ವಾದದ ತಾತ್ತ್ವಿಕತೆಯನ್ನು ದಲಿತ-ಬಂಡಾಯ ಸಾಹಿತ್ಯಕ್ಕೆ ಆರೋಪಿಸಿಯೂ ಇಲ್ಲ. ಒಟ್ಟಾರೆ ಕನ್ನಡದ ದಲಿತ-ಬಂಡಾಯ ಸಾಹಿತ್ಯದಲ್ಲಿ ಕಾಣಿಸಿಕೊಂಡ ಮಾರ್ಕ್ಸ್‌ವಾದಿ ನೆಲೆಯ ಅಂಶಗಳನ್ನು ನನ್ನ ಗ್ರಹಿಕೆಯ ಮಿತಿಗೆ ನಿಲುಕಿಸಿದಷ್ಟನ್ನು ಹಿಡಿಯುವ ಸಣ್ಣ ಪ್ರಯತ್ನ ಮಾಡಿದ್ದೇನಷ್ಟೇ. ಇಡೀ ದಲಿತ-ಬಂಡಾಯ ಸಾಹಿತ್ಯವನ್ನು ನೋಡಿದರೆ ವರ್ಗಾಧಾರಿತ ಸಮಾಜದ ಬದಲಾವಣೆಗೆ ಜಾಗೃತಿಯ ಜೊತೆಗೆ ಬಂಡವಾಳಶಾಹಿಗಳ ಮನಸ್ತತ್ವದ ಪರಿವರ್ತನೆ ಅಗತ್ಯ ಎನ್ನುವುದು ಮನದಟ್ಟಾಗುತ್ತದೆ. ಮಾರ್ಕ್ಸ್ ಒಂದೆಡೆ ಹೇಳುತ್ತಾನೆ "ತತ್ತ್ವಜ್ಞಾನಿಗಳು ಜಗತ್ತನ್ನು ವ್ಯಾಖ್ಯಾನಿಸುತ್ತಾ ಬಂದಿದ್ದಾರೆ. ಈಗ ಇರುವ ಕೆಲಸವೆಂದರೆ ಜಗತ್ತನ್ನು ಬದಲಾಯಿಸುವುದು"

ಎಂದು. ಹಾಗೆಯೇ ಮಾರ್ಕ್ಸ್‌ನು ತತ್ವಜ್ಞಾನಿಗಳು ಜಗತ್ತನ್ನು ನಿರ್ವಚಿಸಿದ ಪರಿಚಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ. ಅಂತೆಯೇ ಸಾಹಿತ್ಯವೂ ಸಹ ಹೇಗೆ ಸಮಾಜವನ್ನು ನಿರ್ವಚಿಸಿದೆ ಎನ್ನುವುದನ್ನು ಗುರುತಿಸಿದ. ಇವುಗಳ ಸಹಾಯದಿಂದಲೇ ಅವನು ಚರಿತ್ರೆಯ ಚಕ್ರದ ಚಹರೆಗಳನ್ನು ಅರಿತುಕೊಂಡ. ಅದರಂತೆಯೇ ದಲಿತ-ಬಂಡಾಯ ಸಾಹಿತಿಗಳೂ ಸಹ ತಮ್ಮ ಪೂರ್ವದ ಸಾಹಿತ್ಯ ಸಮಾಜವನ್ನು ಗ್ರಹಿಸಿದ ರೀತಿಯನ್ನು ಗಮನಿಸುತ್ತಲೇ, ತಾವು ಬಯಸಿದ, ಮಾನವೀಯ ಅಂತಃಕರಣವುಳ್ಳ ಯಾವುದೇ ವ್ಯಕ್ತಿ ಬಯಸಬಹುದಾದ ಸಮಾಜವನ್ನು ಸಾಹಿತ್ಯದ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದರು.

ಕೊನೆಯದಾಗಿ ಆರಂಭದಲ್ಲಿ ಹೇಳಿದಂತೆ ಚರಿತ್ರೆ ಎನ್ನುವುದು ಪ್ರತಿಯೊಂದು ವಿಷಯಕ್ಕೂ ಮುಖ್ಯವಾದುದು. ಮಾರ್ಕ್ಸ್‌ವಾದವು ಹೇಳಿದಂತೆ ಚರಿತ್ರೆಯು ಮನುಷ್ಯನ ಸ್ವಭಾವವನ್ನು ನಿರ್ಧರಿಸುತ್ತದೆ. ಚರಿತ್ರೆಯು ಬದಲಾದಂತೆ ಮನುಷ್ಯನ ಗುಣ ಸ್ವಭಾವಗಳೂ ಸಹ ಬದಲಾಗುತ್ತವೆ. ಅದರಂತೆ ಮನುಷ್ಯನ ದುಡಿಮೆ ಮತ್ತು ಅದರ ಫಲಗಳು ಸಹ ಬದಲಾಗುತ್ತವೆ, ಬದಲಾಗಿವೆ. ಈ ಬದಲಾವಣೆಗೆ ಬಂಡವಾಳದಾರರ ಸಾಮಾಜಿಕ ಸಂಬಂಧಗಳೂ ಕಾರಣವಾಗಿರುತ್ತವೆ. ಆದರೆ ದುಡಿಮೆಗಾರರ ಅನನ್ಯತೆಯು ಕಳೆದು ಹೋಗುತ್ತಿರುತ್ತದೆ. ಕಳೆದು ಹೋದ ಅನನ್ಯತೆಯನ್ನು ಗುರುತಿಸುವ ಕೆಲಸವನ್ನು ಕನ್ನಡ ದಲಿತ-ಬಂಡಾಯ ಸಾಹಿತ್ಯ ಮಾಡಿದೆ. ವರ್ಗ ವ್ಯವಸ್ಥೆಯು ಸೃಷ್ಟಿಸಿದ ಸಂಕೋಲೆಯಲ್ಲಿ ಸಿಲುಕಿಕೊಂಡ ದುಡಿಯುವ ವರ್ಗಕ್ಕೆ ಜಾಗೃತಿಯ ಅಗತ್ಯತೆಯನ್ನು ಒತ್ತಿ ಹೇಳಿದೆ. ಏಕೆಂದರೆ ಈ ಸಮಾಜದಲ್ಲಿನ ಮೇಲ್ವರ್ಗದವರು ಮಾರ್ಕ್ಸ್ ಹೇಳಿದಂತೆ ಹೇಗಿರುತ್ತಾರೆಂದರೆ "Landlords, like all other men, love to reap where they never sowed." ಅಂತೆಯೇ ದುಡಿಯುವ ವರ್ಗವು ಸಹ ಪ್ರಜ್ಞಾವಂತರಾಗಬೇಕಿದೆ. ಆತನೇ ಹೇಳಿದಂತೆ "Necessity is blind until it becomes conscious. Freedom is the consciousness of necessity." ತಳವರ್ಗಗಳಿಗೆ ಪ್ರಜ್ಞೆ ಮೂಡಿಸುವ ಕೆಲಸ ದಲಿತ-ಬಂಡಾಯ ಸಾಹಿತ್ಯದುದ್ದಕ್ಕೂ ನಡೆದಿದೆ. ಚರಿತ್ರೆಯ ಮುಖೇನ ವರ್ತಮಾನನವನ್ನು ಅರ್ಥೈಸಿಕೊಂಡು ಭವಿಷತ್‌ನ್ನು ರೂಪಿಸಿಕೊಳ್ಳಬೇಕಿದೆ. ಚರಿತ್ರೆಯ ಅರಿಯುವಿಕೆಗೆ ದಲಿತ-ಬಂಡಾಯ ಸಾಹಿತ್ಯವು ಅನೇಕ ಮಾದರಿಗಳನ್ನು ತೆರೆದಿಟ್ಟಿದೆ. ಏಕೆಂದರೆ ಚರಿತ್ರೆಯೆಂದರೆ ಖಾಲಿಬಿಟ್ಟ ಸ್ಥಳವಲ್ಲ. ವಿಕಾಸಶೀಲಗುಣದಿಂದ ಕೂಡಿದುದು. ಆ ವಿಸಕನದಲ್ಲಿನ ತಳವರ್ಗಗಳ ಪಾತ್ರ ಏನು ಎಂಬುದನ್ನು ದಲಿತ-ಬಂಡಾಯ ಸಾಹಿತ್ಯ ನಿರೂಪಿಸಿದೆ. ಅದಕ್ಕೆ ಪೂರಕವಾಗಿ ಮಾರ್ಕ್ಸ್‌ವಾದದ ಅನೇಕ ಅಂಶಗಳನ್ನು ಬಳಸಿಕೊಂಡಿದೆ.

❑



ಡಾ. ರಾಮಚಂದ್ರ ಗಣಾಪೂರ ಅವರು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಸುಲೇಪೇಟ ಗ್ರಾಮದವರು. "ಗುಲಬರ್ಗಾ ಜಿಲ್ಲೆಯ ಆಧುನಿಕ ವಚನಕಾರರು" ಕುರಿತು ಎಂ.ಫಿಲ್ ಹಾಗೂ "ಪ್ರೊ. ಕೆ.ಎಸ್. ನಿಸಾರ್ ಅಹಮದ್‌ರವರ ಬದುಕು-ಬರಹ" ಎಂಬ ವಿಷಯಗಳ ಕುರಿತು ಮಹಾಪ್ರಬಂಧ ರಚಿಸಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕಳೆದ 17 ವರ್ಷಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಸೊಂಡೂರು, ರಾಯಚೂರು ಹಾಗೂ ಬೀದರ ಸ್ನಾತಕೋತ್ತರ ಕೇಂದ್ರಗಳಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ' (ಸಂಶೋಧನ ಕೃತಿ), 'ಗುಲಬರ್ಗಾ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ' (ಸಂಶೋಧನ ಕೃತಿ), 'ಪ್ರೊ. ಕೆ.ಎಸ್.ನಿಸಾರ್ ಅಹಮದ್' (ಜೀವನ ಚರಿತ್ರೆ), 'ತನುವೆಂಬ ಮನೆಯೊಳಗೆ' (ಕವನ ಸಂಕಲನ), 'ಸಾಹಿತ್ಯ ಸಮೀಕ್ಷೆ' (ವಿಮರ್ಶಾ ಕೃತಿ), ಸಂಪಾದಿತ ಕೃತಿಗಳು: 'ನಾಡೋಜ ಡಾ.ಕೆ.ಎಸ್.ನಿಸಾರ್ ಅಹಮದ್', 'ಸುವರ್ಣ ದಾಂಪತ್ಯ', 'ಕ್ವಾಟಿ ಜಾನಪದ', 'ಕುಸುಮಾಂಜಲಿ', 'ಶಿಷ್ಯನೆಂಬಾ ವನಕ್ಕೆ', 'ನಾಗಾರ್ಜುನ ಕಾಳಗ', 'ಅಂಬಿಗರ ಚೌಡಯ್ಯನವರ ವಚನಗಳು', 'ಹೋರಾಟಗಾರ ವಿಠ್ಠಲ್ ಹೇರೂರು', 'ಕಲ್ಯಾಣ ಕಿರಣಗಳು', 'ಅರಿವಿನ ಗುರು' ಎಂಬ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯದ ಹಾಲಹಳ್ಳಿ-ಬೀದರ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ 'ದಲಿತ-ಬಂಡಾಯ ಸಾಹಿತ್ಯ' ಸಂಪಾದಿತ ಸಂಪುಟವು ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು, ಶಿಕ್ಷಕರು, ಅಧ್ಯಾಪಕರು, ಸಂಶೋಧನಾರ್ಥಿಗಳು ಮತ್ತು ಕನ್ನಡದ ಜನ ಸಾಮಾನ್ಯರೂ ಕೂಡ ಓದಲೇಬೇಕಾದ ಕೃತಿಯಾಗಿದೆ. ಇಲ್ಲಿನ ೨೯ ಲೇಖನಗಳಲ್ಲಿ ದಲಿತ-ಬಂಡಾಯ ಕಾಲಘಟ್ಟದ ವಿವಿಧ ಲೇಖಕರ ಸಾಹಿತ್ಯ ಕೃತಿಗಳ, ಚಳುವಳಿಯ ಅವಲೋಕನವಿದೆ. ವಿವರಣೆ, ವಿಶ್ಲೇಷಣೆ, ಚರ್ಚೆ, ಚಿಂತನೆ ಮಾದರಿಯಲ್ಲಿ ನಾಡಿನ ಹಲವು ವಿದ್ವಾಂಸರು ಬರೆದಿರುವ ಲೇಖನಗಳಿವೆ. ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ, ಹೋರಾಟದ ವಿಚಾರಗಳನ್ನು ಐತಿಹಾಸಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಹೊಸ ಆಲೋಚನೆಗಳನ್ನು ಚಿಂತಕರು ದಾಖಲಿಸಿದ್ದಾರೆ. ಹಾಗಾಗಿ ಈ ಕೃತಿಯು ಹೊಸಗನ್ನಡ ಸಾಹಿತ್ಯದ ಸಂಶೋಧನಾರ್ಥಿಗಳಿಗೆ ಆಕರವಾಗಿದೆ. ಇಂತಹ ಅಮೂಲ್ಯ ಆಕರ ಕೃತಿಯನ್ನು ಸಂಪಾದಿಸಿರುವ ಡಾ. ರಾಮಚಂದ್ರ ಗಣಾಪೂರ ಅವರಿಗೆ ಮತ್ತು ಸಂಪುಟದ ಪ್ರಧಾನ ಸಂಪಾದಕರಿಗೆ ಹಾಗೂ ಯೋಜನಾ ಸಂಚಾಲಕರಿಗೆ ಕನ್ನಡ ಸಾರಸ್ವತ ಲೋಕದ ಪರವಾಗಿ ಅಭಿನಂದನೆಗಳು ಸಲ್ಲಿಸುವುದರೊಂದಿಗೆ, ಶ್ರೀಯುತರಿಂದ ಇನ್ನೂ ಇಂತಹ ಮಹತ್ತರ ಕೃತಿಗಳು ಮೂಡಿ ಬರಲಿ ಎಂದು ಶುಭ ಹಾರೈಸುತ್ತೇನೆ.

**-ಪ್ರೊ. ಎಚ್.ಟಿ. ಪೋತೆ**
ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ISBN 978-93-91429-50-8

**ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ**
ಸರಸ್ವತಿ ಗೋದಾಮು, ಕಲಬುರಗಿ - ೧



# ಕನ್ನಡ-ತೆಲುಗು ಸಾಂಸ್ಕೃತಿಕ ಬಾಂಧವ್ಯ

ಸಂಪಾದಕರು

**ಡಾ. ಎ.ಎನ್. ಸಿದ್ದೇಶ್ವರಿ**



೧೦. ಕನ್ನಡ–ತೆಲುಗು : ಕೀರ್ತನ ಸಾಹಿತ್ಯ / ೧೬೨
ಡಾ. ಮಲ್ಲೇಶಪ್ಪ ಸಿದ್ರಾಂಪೂರ
೧೧. ಕನ್ನಡ–ತೆಲುಗು : ಆಧುನಿಕ ಸಣ್ಣ ಕಥೆಗಳು/ ೧೮೧
ಡಾ. ಎಂ. ರಾಮನಾಥಂ ನಾಯುಡು
೧೨. ಕನ್ನಡ–ತೆಲುಗು : ಕಾವ್ಯ ಸ್ವರೂಪ / ೧೯೫
ಡಾ. ವೃಷಭೇಂದ್ರಾಚಾರ್ ಅರ್ಕಸಾಲಿ
೧೩. ಕನ್ನಡ–ತೆಲುಗು : ಮಹಿಳಾ ಕವನಗಳು / ೨೦೦
ಡಾ. ರಾಜೇಶ್ವರಿ ದಿವಾಕರ್ಲ
೧೪. ಕನ್ನಡ–ತೆಲುಗು : ದಲಿತ ಸಾಹಿತ್ಯ ವಿಮರ್ಶೆ / ೨೧೨
ಪ್ರೊ. ಅಣ್ಣಮ್ಮ
೧೫. ಕನ್ನಡ ಮತ್ತು ತೆಲುಗು ಸಾಹಿತ್ಯಗಳಲ್ಲಿ
ಪರಸ್ಪರ ಅನುವಾದಗಳು - ಒಂದು ಪಕ್ಷಿನೋಟ / ೨೨೬
ಮಾರ್ಕಂಡಪುರಂ ಶ್ರೀನಿವಾಸ
೧೬. ಕನ್ನಡ–ತೆಲುಗು : ಗಾದೆಗಳಲ್ಲಿ ಬಾಂಧವ್ಯ / ೨೪೩
ಡಾ. ವಿ. ನಾರಾಯಣಪ್ಪ
೧೭. ಕನ್ನಡ–ತೆಲುಗು : ಜಾನಪದ ಕಲಾ ಬಾಂಧವ್ಯ / ೨೭೨
ಡಾ. ಎ.ಎನ್. ಸಿದ್ದೇಶ್ವರಿ
೧೮. ಕನ್ನಡ-ತೆಲುಗು ಯಕ್ಷಗಾನ ಪರಂಪರೆ / ೨೮೫
ಪ್ರೊ. ಜಿ.ಎಸ್. ಮೋಹನ್
೧೯. ತೊಗಲುಗೊಂಬೆ ಕಲೆ :
ಗಡಿ ಸಾಮರಸ್ಯದ ಪ್ರತಿನಿಧೀಕರಣ / ೨೯೭
ಸ. ರಘುನಾಥ
೨೦. ಕನ್ನಡ–ತೆಲುಗು : ರಂಗಭೂಮಿ ಬಾಂಧವ್ಯ / ೩೦೩
ಡಾ. ಬಿ.ಎಸ್. ಶಿವಕುಮಾರ್
ಲೇಖಕರ ವಿಳಾಸಗಳು / ೩೩೧

೧೦

# ಕನ್ನಡ–ತೆಲುಗು : ಕೀರ್ತನ ಸಾಹಿತ್ಯ

ಡಾ. ಮಲ್ಲೇಶಪ್ಪ ಸಿದ್ರಾಂಪೂರ

ಮಮಾಪಿ ಚ ಕ್ಷಪಯತು ನೀಲಲೋಚನಃ।
ಪುನರ್ಭವಂ ಪರಿಗತಶಕ್ತಿರಾತ್ಮಭೂ॥

ಕಾಳಿದಾಸನ ಈ ಮಾತು ಅಭಿಜ್ಞಾನ ಶಾಕುಂತಲದ ಭರತವಾಕ್ಯದಲ್ಲಿ ಬರುವಂತಹದ್ದು. ಆತ ಈ ಮಾತುಗಳನ್ನು ಹೇಳಿರುವ ಸಂದರ್ಭ ಬೇರೆಯಾದರೂ ಅದು ಇಲ್ಲಿ ಸೂಕ್ತವೆನಿಸುತ್ತದೆ. ಈ ಮಾತಿನ ತಾತ್ಪರ್ಯ 'ಸ್ವಯಂಭುವಾದ, ಸರ್ವಶಕ್ತಿಯಾದ ಶಿವನು ನನಗೆ ಪುನರ್ಜನ್ಮವನ್ನು ಕೊಡದಿರಲಿ' ಎಂಬುದು. ಕೀರ್ತನಕಾರರ ದೃಷ್ಟಿಯೂ ಇಂತಹದ್ದೆ. ಅವರಿಗೆ ಪುನರ್ಜನ್ಮದ ನಂಬಿಕೆಗಿಂತ ಇರುವ ಜನ್ಮದಲ್ಲಿಯೇ ಮೋಕ್ಷವನ್ನು ಸಾಧಿಸಬೇಕೆನ್ನುವಂತಹದ್ದು ಮುಖ್ಯ. ಮನುಷ್ಯ ಇರುವ ಜನ್ಮದಲ್ಲಿಯೇ ಸಾರ್ಥಕ ಕೆಲಸಗಳಿಗೆ ತನ್ನನ್ನು ಬಳಸಿಕೊಂಡು ಜೀವನ ಸಾಕ್ಷಾತ್ಕಾರದ ಜೊತೆಗೆ ಆತ್ಮದ ಸಾಕ್ಷಾತ್ಕಾರವನ್ನು ಪಡೆಯಬೇಕು ಎನ್ನುವುದು ಕೀರ್ತನಕಾರರ ನಿಲುವು. ತಮ್ಮ ಲೌಕಿಕ ಬದುಕನ್ನು ಬದಿಗಿಟ್ಟು ಆಧ್ಯಾತ್ಮಿಕ ಬದುಕಿನತ್ತ ಮುಖ ಮಾಡಿದವರು ಕೀರ್ತನಕಾರರು. ಆದಾಗ್ಯೂ ಆ ಬದುಕಿಗೆ ಮೂಲವಾದ ಸಾಮಾಜಿಕ ಬದುಕನ್ನು ಅವರು ತಮ್ಮ ಚಿಂತನೆಗಳಿಂದ, ಆಲೋಚನೆಗಳಿಂದ ಹೊರಗಿಡಲಿಲ್ಲ. ಸಾಮಾಜಿಕ ಬದುಕನ್ನು ಒಳಗೊಂಡಂತೆಯೇ ತಮ್ಮ ಅಲೌಕಿಕ, ಪಾರಮಾರ್ಥಿಕ ಆಲೋಚನೆಗಳನ್ನು ಅರುಹಿದರು. ತಮ್ಮ ತಮ್ಮ ದೃಷ್ಟಿಕೋನಕ್ಕೆ, ತಮಗಾದ ಪ್ರಭಾವಗಳಿಗೆ ಅನುಗುಣವಾಗಿ ಭಕ್ತಿಯನ್ನು ಕುರಿತು, ಸಾಮಾಜಿಕ ಬದುಕನ್ನು ಕುರಿತು, ಆತ್ಮ ಹಾಗೂ ಪರಮಾತ್ಮನನ್ನು ಕುರಿತು, ಭವ–ಬಂಧನಗಳನ್ನು ಕುರಿತು, ತಮ್ಮ ಕಾಲಘಟ್ಟದ ಸಾಂಸ್ಕೃತಿಕ ಬದುಕಿನ ಸಂಘರ್ಷಗಳನ್ನು ಕುರಿತು ತಮ್ಮದೇ ಶೈಲಿಯಲ್ಲಿ, ತಮ್ಮದೇ ಭಾವದಲ್ಲಿ, ತಮ್ಮದೇ



ಭಾಷೆಯಲ್ಲಿ ಅನಾವರಣಗೊಳಿಸಿದರು. ಹೀಗೆ ಮಧ್ಯಕಾಲೀನ ಸಂದರ್ಭದಲ್ಲಿ ಭಕ್ತಿಯ ಜೊತೆಗೆ ಮುಕ್ತಿಯನ್ನು, ಬದುಕಿನ ಜೊತೆಗೆ ಲೋಕದ ಉದ್ಧಾರವನ್ನು ಬಯಸಿದವರು ಕೀರ್ತನಕಾರರು. ಈ ಕೀರ್ತನ ಪರಂಪರೆ ದಕ್ಷಿಣ ಭಾರತದ ಸಂದರ್ಭದಲ್ಲಿ ವಿಶಿಷ್ಟವಾಗಿ ಬೆಳೆದು ಬಂದಿದೆ. ಅದರಲ್ಲೂ ಕನ್ನಡ ಹಾಗೂ ತೆಲುಗು ನಾಡಿನಲ್ಲಿ ಇದು ಅನೇಕ ಸಾಮ್ಯತೆಗಳಿಂದ ಕೂಡಿದುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಈ ಎರಡೂ ಭಾಷೆಯ ಕೀರ್ತನ ಪರಂಪರೆಯನ್ನು ಹಕ್ಕಿನೋಟದ ಹಿನ್ನೆಲೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಹೆಚ್ಚಾಗಿ ಕೀರ್ತನೆಗಳನ್ನು ಉಲ್ಲೇಖ ಮಾಡಲಾಗಿಲ್ಲ. ಬದಲಿಗೆ ಒಟ್ಟಾರೆ ಕೀರ್ತನ ಸಾಹಿತ್ಯದ ಆಶಯದ ಹಿನ್ನೆಲೆಯಲ್ಲಿ ಅದು ಬೆಳೆದು ಬಂದ ಪರಂಪರೆಯನ್ನು ಕುರಿತು ಚರ್ಚಿಸಲಾಗಿದೆ.

ಪ್ರಾಚೀನ ಕಾಲದಿಂದಲೂ ಭಾಷೆಯಿಂದ ಹಿಡಿದು ಬದುಕಿನವರೆಗೂ ಅನೇಕ ಕೊಳ್ಳುಕೊಡುವಿಕೆಗಳು ಕನ್ನಡ ಮತ್ತು ತೆಲುಗು ಭಾಷೆಗಳ ನಡುವೆ ನಡೆದದ್ದುಂಟು. ದ್ರಾವಿಡ ಸಂಸ್ಕೃತಿ ಮೂಲದಿಂದ ಬಂದ ಈ ಎರಡು ಭಾಷೆಗಳು ಸಹೋದರ ಭಾಷೆಗಳು. ಹಾಗೆಯೇ ಈ ಎರಡು ಭೌಗೋಳಿಕ ಪ್ರದೇಶದ ಬಹುಪಾಲು ಪ್ರದೇಶಗಳು ರಾಜಾಡಳಿತದ ಸಂದರ್ಭದಲ್ಲಿ ಬಹುಕಾಲ ಒಂದೇ ರಾಜಮನೆತನದ ಆಡಳಿತಕ್ಕೆ ಒಳಗಾದದ್ದುಂಟು. ಜೊತೆಗೆ ದೀರ್ಘವಾದ ಗಡಿಯ ನಂಟನ್ನೂ ಈ ಎರಡು ಭೌಗೋಳಿಕ ಪ್ರದೇಶಗಳು ಹೊಂದಿವೆ. ಈ ಎಲ್ಲ ಕಾರಣಗಳಿಂದಾಗಿ ಈ ಎರಡು ಭಾಷೆಗಳ ನಡುವೆ ಸಾಂಸ್ಕೃತಿಕತೆ ಪ್ರಾಚೀನ ಕಾಲದಿಂದ ಹಿಡಿದು ವರ್ತಮಾನದವರೆಗೂ ಸಂಕರಗೊಳ್ಳುತ್ತಲೇ ಬಂದಿದೆ. ಹಾಗೆಯೇ ಈ ಎರಡೂ ಭಾಷೆಗಳು, ಭಾಷಿಕ ಪ್ರದೇಶಗಳು ಅನೇಕ ನೆಲೆಗಳಲ್ಲಿ ಸಾಮ್ಯತೆಗಳನ್ನೂ ಹೊಂದಿವೆ. ಇಂತಹ ವಿಶಿಷ್ಟ ಸಾಂಸ್ಕೃತಿಕ ಸಾಮ್ಯತೆ ಹಾಗೂ ವೈವಿಧ್ಯಮಯ ಬದುಕಿನ ಆಯಾಮಗಳನ್ನುಳ್ಳ ಎರಡು ಭಾಷೆಗಳಲ್ಲಿನ ಕೀರ್ತನ ಸಾಹಿತ್ಯವೂ ಸಹ ಅನೇಕ ಸಾಮ್ಯತೆಗಳೊಂದಿಗೆ, ಏಕಾಶಯದೊಂದಿಗೆ ಬೆಳೆದು ಬಂದಿದೆ.

ಭಾರತೀಯ ಭಕ್ತಿ ಸಾಹಿತ್ಯ ಪರಂಪರೆಯಲ್ಲಿ ದಕ್ಷಿಣ ಭಾರತದ ಪ್ರಮುಖ ಭಾಷೆಗಳಾದ ಕನ್ನಡ ಮತ್ತು ತೆಲುಗಿನ ಪಾತ್ರ ಬಹು ಮಹತ್ವದ್ದು. ದ್ವೈತ ಸಿದ್ಧಾಂತದ ಆಶಯಗಳನ್ನು ಜನಪರಗೊಳಿಸುವ ಭಕ್ತಿ ಆಂದೋಲನದ ಭಾಗವಾಗಿ ಬಂದದ್ದು ಈ ಕೀರ್ತನ ಸಾಹಿತ್ಯ ಪರಂಪರೆ. ಅದು ತನ್ನ ಆಶಯದ ಜೊತೆಜೊತೆಗೆ ಸಮಾಜದ ನೈತಿಕ ಜೀವನ ಸುಧಾರಣೆಯನ್ನೂ ಬಯಸಿತು. ಸರಳ, ಸುಂದರ ಶೈಲಿಯಲ್ಲಿ ರಚನೆಗೊಂಡ ಕೀರ್ತನೆಗಳು ಜನಪ್ರಿಯಗೊಂಡು ಜನರ ನಾಲಿಗೆಯ ಮೇಲೆ ನಲಿದಾಡಿದವು. ಭವಬಂಧನದ ಮುಕ್ತಿಗೆ ಭಕ್ತಿಯೇ ಮುಖ್ಯ ಸಾಧನ ಎಂದು ಸಾರಿದ ಕೀರ್ತನಕಾರರು, ಅಷ್ಟೇ ಪ್ರಮಾಣದಲ್ಲಿ ಸಾಮಾಜಿಕ ಸ್ವಾಸ್ಥ್ಯವೂ ಕೂಡ ಅಗತ್ಯ ಎಂದು ಸಾರಿದರು. ಹಾಗಾಗಿ ಈ ಕೀರ್ತನ ಸಾಹಿತ್ಯ ಭಕ್ತಿಯ ಜೊತೆಗೆ ಸಾಮಾಜಿಕ ಚಿಂತನೆಗಳನ್ನು

ತನ್ನಲ್ಲಿ ಗರ್ಭೀಕರಿಸಿಕೊಂಡಿತು. ಆದಾಗ್ಯೂ ಕೀರ್ತನ ಸಾಹಿತ್ಯದ ಮುಖ್ಯ ತತ್ತ್ವ ಭಕ್ತಿ. ಮೂಲ ಸತ್ಯ ಭಗವಂತ. ಕೀರ್ತನಕಾರರು ಭಕ್ತಿಯ ಮೂಲಕ ಭಗವಂತನನ್ನು ಹುಡುಕಲು ಪ್ರಯತ್ನಿಸಿದವರು. ಕೀರ್ತನಕಾರರ ವೈಶಿಷ್ಟ್ಯವೆಂದರೆ ಭಗವತ್ದರ್ಶನ ತಮಗಾದರೆ ಸಾಕಾಗುವುದಿಲ್ಲ ಅದು ಸಕಲ ಜನಸಮುದಾಯಕ್ಕೂ ಆಗಬೇಕೆಂದು ಬಯಸಿದ್ದು. ಇಂತಹ ಸತ್ಯದ ಅನ್ವೇಷಣೆಗೆ ತೊಡಗಿದಾಗ ಅವರು ಬದುಕನ್ನು ಕುರಿತು ಆಳವಾಗಿ ಚಿಂತಿಸಿದರು. ಆಗ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಆಚಾರ-ವಿಚಾರಗಳನ್ನು, ಅಂಧಾನುಕರಣೆಗಳನ್ನು, ಮೌಢ್ಯತೆಯನ್ನು ತಮ್ಮ ಧಾಟಿಯಲ್ಲಿ ನಿರ್ವಚಿಸಿದರು. ಸಲ್ಲದ ಆಚಾರಗಳನ್ನು ಖಂಡಿಸಿದರು. ಮುಕ್ತಿಯ ಸಾಧನೆಗೆ ನಿಷ್ಕಲ್ಮಶ ಭಕ್ತಿಯೇ ಮುಖ್ಯ ಎಂಬುದನ್ನು ಮತ್ತೆ ಮತ್ತೆ ಹೇಳಿದರು. ತಮ್ಮ ಅನುಭವಕ್ಕೆ ಸಂದ ಸಂಗತಿಗಳನ್ನು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಪದಕಟ್ಟಿ ಹಾಡಿದರು. ಒಂದೆಡೆ ನೆಲೆನಿಲ್ಲದೆ ಸಂಚಾರಿಗಳಾಗಿ ಸಾಮಾಜಿಕ ಬದುಕು ಹಸನಾಗಬೇಕೆಂದು ಹಂಬಲಿಸಿದರು. ಇಂತಹ ಭಕ್ತಿ ಸಾಹಿತ್ಯ ಕನ್ನಡದಲ್ಲಿ ದಾಸ ಸಾಹಿತ್ಯವೆಂದು, ಈ ಸಾಹಿತ್ಯ ರಚಿಸಿದವರನ್ನು ದಾಸರೆಂದು ಗುರುತಿಸಲ್ಪಟ್ಟರೆ, ತೆಲುಗಿನಲ್ಲಿ ವಾಗ್ಗೇಯ ಸಾಹಿತ್ಯವೆಂದು, ಆ ಸಾಹಿತಿಗಳನ್ನು ವಾಗ್ಗೇಯಕಾರರೆಂದು ಕರೆಯಲಾಗುತ್ತದೆ. ಈ ಎರಡೂ ಭಾಷೆಯಲ್ಲಿ ಬಂದ ಈ ಸಾಹಿತ್ಯ ಒಟ್ಟಾರೆಯಾಗಿ ಕೀರ್ತನ ಸಾಹಿತ್ಯ.

ಕನ್ನಡ ಕೀರ್ತನ ಸಾಹಿತ್ಯವು ಹತ್ತು ಹಲವು ಆಯಾಮಗಳಿಂದ ತನ್ನನ್ನು ಸಮೃದ್ಧಗೊಳಿಸಿಕೊಂಡಿದೆ. ಭಕ್ತಿಯೇ ಈ ಸಾಹಿತ್ಯದ ಮುಖ್ಯ ಸ್ಥಾಯಿಯಾಗಿದ್ದಾಗಲೂ, ಸಾಮಾಜಿಕ ಬದುಕು ಅದಕ್ಕೆ ಮೂಲ ಎನ್ನುವುದನ್ನು ಈ ಸಾಹಿತ್ಯ ಮರೆತಿಲ್ಲ. ಹಾಗಾಗಿ ದೈನಂದಿನ ಬದುಕಿನ ಆಗುಹೋಗುಗಳ ಜೊತೆಯಲ್ಲಿಯೇ ಹರಿಯನ್ನು ಕಾಣುವ, ಸೇರುವ ಹಂಬಲವನ್ನು ಕೀರ್ತನಕಾರರು ತಮ್ಮ ಕೀರ್ತನೆಗಳ ಮೂಲಕ ಹೊರ ಹಾಕಿದ್ದಾರೆ. ಇಂತಹ ಕೀರ್ತನ ಸಾಹಿತ್ಯವು 'ವ್ಯಾಸಕೂಟ' ಮತ್ತು 'ದಾಸಕೂಟ' ಎನ್ನುವ ಮುಖ್ಯಧಾರೆಗಳಲ್ಲಿ ಸಾಗಿ ಬಂದಿದೆ. ಧಾರೆಗಳು ಎರಡಾದರೂ ಸೇರುವ ಗಮ್ಯ ಮಾತ್ರ ಒಂದೇ. ಇದರಂತೆಯೇ ತೆಲುಗು ಕೀರ್ತನ ಸಾಹಿತ್ಯವೂ ಸಹ ಎರಡು ಪ್ರಮುಖ ಯುಗಗಳನ್ನು ಕಂಡಿದೆ. ಅವೆರಡನ್ನು ನಡೆಸಿದವರು ಅನ್ನಮಯ್ಯ ಮತ್ತು ತ್ಯಾಗಯ್ಯ. ಇವರಿಬ್ಬರ ಕಾಲ ಬೇರೆಯಾದರೂ ಲಕ್ಷ್ಯ ಮಾತ್ರ ಒಂದೇ. ಸಂಗೀತ ಸಾಹಿತ್ಯದ ಮೂಲಕ ರಸಾನಂದವನ್ನು ನೀಡುತ್ತಲೇ ಲೋಕದ ಹಿತ ಬಯಸಿದ್ದು ಇವರ ಕೀರ್ತನೆಗಳ ಮುಖ್ಯ ಆಶಯ. ಈ ಇಬ್ಬರು ಲೋಕವನ್ನು ಚೆನ್ನಾಗಿ ಬಲ್ಲವರು. ತಮ್ಮ ಅನುಭವದ ಮೂಲಕ ಸಮಾಜದಲ್ಲಿ ಜರುಗಿದ ಪ್ರತಿಯೊಂದು ಅಂಶಕ್ಕೂ ಅಕ್ಷರಾಕೃತಿಯನ್ನು ನೀಡಿದ್ದಾರೆ. ಜನರಲ್ಲಿನ ವಿಷಯಲೋಲುಪತೆ, ಡಾಂಭಿಕತೆ, ಉಳ್ಳವರ ದರ್ಪದ ಬದುಕು, ದುರಾಚಾರಗಳು, ಅಸಮಾನತೆ, ಕಪಟತೆಗಳನ್ನು ತಮ್ಮ ಕೀರ್ತನೆಗಳಲ್ಲಿ



ಖಂಡಿಸಿದ್ದಾರೆ. ಪ್ರತಿಯೊಬ್ಬರು ಸಂಸಾರಿಗಳಾಗಿದ್ದುಕೊಂಡೇ ಸದಾಚಾರಗಳನ್ನು ಪಾಲಿಸುತ್ತಾ, ಸತ್ಪ್ರವರ್ತನೆಯಿಂದ ನಿಯಮನಿಷ್ಠೆಯಿಂದ ಬದುಕುತ್ತ ಭಗವದ್ಭಕ್ತಿಯನ್ನು ಅನುಸರಿಸಬೇಕೆಂದು ಬೋಧಿಸಿದ್ದಾರೆ.

ಕನ್ನಡ ಕೀರ್ತನ ಸಾಹಿತ್ಯ ನರಹರಿತೀರ್ಥರಿಂದ ಮೊದಲುಗೊಂಡು ವ್ಯಾಸರಾಯ, ಪುರಂದರದಾಸ ಮತ್ತು ಕನಕದಾಸರಿಂದ ಉನ್ನತಿಯನ್ನು ಮುಟ್ಟಿತು. ನಂತರದಲ್ಲಿ ವಾದಿರಾಜ, ವಿಜಯದಾಸ, ಜಗನ್ನಾಥದಾಸ, ಪ್ರಸನ್ನವೆಂಕಟದಾಸ ಮುಂತಾದವರಿಂದ ಕೀರ್ತನ ವಾಙ್ಮಯದ ಪರಂಪರೆಯನ್ನು ಮುಂದುವರೆಸಿತು. ತೆಲುಗಿನಲ್ಲಿ ಕೀರ್ತನ ಪರಂಪರೆಯು ಕೃಷ್ಣಮಾಚಾರ್ಯರಿಂದ ಆರಂಭಗೊಂಡಿತು. ನಂತರದಲ್ಲಿ ಅನ್ನಮಾಚಾರ್ಯರಿಂದ ಔನ್ನತ್ಯವನ್ನು ಮುಟ್ಟಿತು. ಇದರ ಮುಂದುವರಿಕೆಯು ಅನ್ನಮಾಚಾರ್ಯ ಮಕ್ಕಳು, ಮೊಮ್ಮಕ್ಕಳು, ಕಂಚೆರ್ಲ ಗೋಪನ್ನ(ಭದ್ರಚಾಲ ರಾಮದಾಸ), ಕ್ಷೇತ್ರಯ್ಯ, ತ್ಯಾಗರಾಜ, ನಾರಾಯಣ ತೀರ್ಥ, ಸಾರಂಗಪಾಣಿ, ಧರ್ಮಪುರಿ ಸುಬ್ಬಯ್ಯರ್, ರಾಕಮಚರ್ಲ ವೆಂಕಟದಾಸು, ಸುಬ್ಬರಾಂ ದೀಕ್ಷಿತ್... ಮುಂತಾದವರ ಮೂಲಕ ಬೆಳೆದು ಬಂದಿತು.

ಕನ್ನಡದಲ್ಲಿ ಕೀರ್ತನ ಸಾಹಿತ್ಯ ಹುಟ್ಟಿಕೊಳ್ಳುವುದಕ್ಕೆ ಮುಂಚೆಯೇ ರಾಗಯುಕ್ತವಾಗಿ ಹಾಡತಕ್ಕಂತಹ ಸಾಹಿತ್ಯ ಆವಿರ್ಭವಿಸಿತ್ತು. ಅದು ವಚನಗಳ ರೂಪದಲ್ಲಿ ಜನಮಾನಸವನ್ನು ಗೆದ್ದಿತ್ತು. ಹಾಗೆಯೇ ರಾಗಯುಕ್ತವಾಗಿ ಹಾಡತಕ್ಕಂತಹ ಹಾಡುಗಳು ಸಹ ಇದ್ದವು. ಕವಿರಾಜಮಾರ್ಗದಲ್ಲಿ ಉಲ್ಲೇಖಿಸಿದ 'ಬೆದಂಡೆ'ಯು ಹಾಡುಗಬ್ಬವಾಗಿತ್ತು. ಇದರಿಂದ ಹಾಡುವ ಪ್ರಕ್ರಿಯೆ ಕನ್ನಡದಲ್ಲಿ ಪ್ರಾಚೀನದಿಂದಲೂ ಇತ್ತೆಂಬುದಾಗಿ ತಿಳಿದುಕೊಳ್ಳಬಹುದು. ನಂತರ ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಆಧ್ಯಾತ್ಮಿಕಾನುಭವದ ಅಭಿವ್ಯಕ್ತಿಗಾಗಿ ಹಾಡು ಬಳಕೆಯಾಯಿತು. ಹಾಗಾಗಿ ಮುಂದೆ ಹರಿದಾಸರಿಗೆ ಈ ವಚನಗಳು ಸ್ಫೂರ್ತಿಯಾದವು. ನಂತರ ವೈಷ್ಣವ ಧರ್ಮಾನುಯಾಯಿಯಾಗಿದ್ದ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನ ಕಾಲದಲ್ಲಿ ವ್ಯಾಸರಾಯರು ರಾಜಗುರುಗಳಾಗಿದ್ದರಿಂದ ಭಾಗವತ ಸಂಪ್ರದಾಯದ ಕೀರ್ತನೆಗಳಿಗೆ ಮತ್ತಷ್ಟು ಸ್ಫೂರ್ತಿ ದೊರೆಯಿತು.

ತೆಲುಗಿನಲ್ಲಿಯೂ ಕೃಷ್ಣಮಾಚಾರ್ಯರಿಗಿಂತ ಪೂರ್ವದಲ್ಲಿ ಪದ ಸಾಹಿತ್ಯ ಸಮೃದ್ಧವಾಗಿತ್ತೆನ್ನುವುದಕ್ಕೆ ಗ್ರಂಥಸ್ಥವಾದ ಆಧಾರಗಳಿವೆ. ಆದರೆ ಕೀರ್ತನೆಗಳನ್ನು ವಿಸ್ತೃತವಾಗಿ ರಚನೆ ಮಾಡಿ, ಕೀರ್ತನೆಗಳಿಗೆ ಸ್ಥಿರತೆಯನ್ನು, ಪುಷ್ಟಿಯನ್ನು ತಂದುಕೊಟ್ಟ ಕೀರ್ತನಕಾರ ಅನ್ನಮಾಚಾರ್ಯ. ಆದರೂ ತೆಲುಗಿನಲ್ಲಿಯೂ ಸಹ ಪದ ಪರಂಪರೆ ಪ್ರಾಚೀನ ಕಾಲದಿಂದಲೂ ಇತ್ತೆನ್ನುವ ಅಂಶ ತಿಳಿದುಬರುತ್ತದೆ. ತೆಲುಗಿನ ಆದಿಕವಿ ನನ್ನಯ್ಯನಿಗಿಂತ ಪೂರ್ವದಲ್ಲಿ ಹಾಡುಗಳಲ್ಲಿ ಬಳಕೆಯಾಗುವ ದ್ವಿಪದಿ, ತರುವೋಜ, ಮಧ್ಯಾಕ್ಕರ, ರಗಳೆ ಮುಂತಾದ ಛಂದಸ್ಸುಗಳು ಬಳಕೆಯಲ್ಲಿದ್ದಂತೆ ಶಾಸನಾಧಾರಗಳಿಂದ ತಿಳಿದು ಬರುತ್ತದೆ. ೧೨ನೆಯ ಶತಮಾನಕ್ಕೆ ಸೇರಿದ ನನ್ನೆಚೋಡನು ಉಯ್ಯಾಲೆಯ ಹಾಡು,

ಗೌಡು ಗೀತೆಗಳನ್ನು ಉಲ್ಲೇಖಿಸಿದರೆ, ೧೩ನೆಯ ಶತಮಾನಕ್ಕೆ ಸೇರಿದ ಪಾಲ್ಕುರಿಕೆ ಸೋಮನಾಥನು ಪರ್ವತಪದ, ಆನಂದಪದ, ಶಂಕರಪದ, ನಿವಾಳಿಪದ, ಬೆಳ್ದಿಂಗಳ ಪದಗಳನ್ನು ಹೆಸರಿಸಿದ್ದಾರೆ.

ಈ ಮೇಲಿನ ಅಂಶಗಳಿಂದ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಹಾಡುವ ಪದ್ಧತಿಯು ಪ್ರಾಚೀನ ಕಾಲದಿಂದಲೂ ಇದ್ದುದಾಗಿ ಸ್ಪಷ್ಟವಾಗುತ್ತದೆ. ದಾಸ ವಾಙ್ಮಯ ಹುಟ್ಟಿಕೊಂಡ ನಂತರ ಕೀರ್ತನೆಗಳನ್ನು ಸಂಗೀತಬದ್ಧವಾಗಿ ರಚಿಸುವ ಕಾರ್ಯ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ. ಇದೇ ಸಂದರ್ಭದಲ್ಲಿ ಪುರಂದರದಾಸರಿಂದ ಹುಟ್ಟಿಕೊಂಡ ಕರ್ನಾಟಕ ಸಂಗೀತವು ಈ ಎರಡೂ ಭಾಷೆಯ ಕೀರ್ತನಕಾರರಿಗೆ ಸ್ಫೂರ್ತಿಯಾಯಿತೆನ್ನುವುದರಲ್ಲಿ ಅನುಮಾನವಿಲ್ಲ. ಹಾಗೆಯೇ ಕೀರ್ತನಕಾರರು ಒಂದೆಡೆ ನೆಲೆನಿಲ್ಲದೆ ಅನೇಕ ಪ್ರದೇಶಗಳನ್ನು ಸಂದರ್ಶಿಸುವ ಸಲ್ಲಕ್ಷಣವುಳ್ಳವರಾಗಿದ್ದರು. ಹೆಚ್ಚು ಕಡಿಮೆ ಒಂದೇ ಸಾಂಸ್ಕೃತಿಕ ಪರಿಸರದಲ್ಲಿ ವಾಸವಾಗಿದ್ದ ಕನ್ನಡ ಹಾಗೂ ತೆಲುಗು ಕೀರ್ತನಕಾರರು ಸಂಪರ್ಕವನ್ನು ಬೆಳೆಸಿಕೊಂಡಿರಬಹುದೆನಿಸುತ್ತದೆ. ಉದಾ: ಕನ್ನಡದ ಪುರಂದರದಾಸರು ಹಾಗೂ ತೆಲುಗಿನ ಅನ್ನಮಾಚಾರ್ಯರು ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ತಿರುಮಲದಲ್ಲಿ ಭೇಟಿಯಾದಂತೆಯೂ, ಅವರಿಬ್ಬರೂ ಸೇರಿ ಕೀರ್ತನೆಯನ್ನು ಹಾಡಿದಂತೆಯೂ ತಿಳಿದುಬರುತ್ತದೆ.

ಅನ್ನಮಾಚಾರ್ಯನ ಕೀರ್ತಿ ಪ್ರತಿಷ್ಠೆಗಳನ್ನು ಕೇಳಿದ ಪುರಂದರದಾಸರು ಆತನನ್ನು ದರ್ಶಿಸಲು ಸ್ವತಃ ತಿರುಮಲಕ್ಕೆ ಬಂದರು. ಆತನನ್ನು 'ಪುಂಭಾವ(ಪುರುಷರೂಪಿ–ಚರಮ ದೇಹಿ) ವೆಂಕಟೇಶ್ವರ'ನೆಂಬುದಾಗಿ ಕೀರ್ತಿಸಿದರು. ಅದಕ್ಕೆ ಪ್ರತಿಯಾಗಿ ಅನ್ನಮಯ್ಯನೂ ಪುರಂದರದಾಸರನ್ನು ವಿಠಲಸ್ವಾಮಿಯೆಂದು ಕರೆದನು. ಅವರಿಬ್ಬರು ತಮ್ಮ ಭೇಟಿಯ ಗುರುತಾಗಿ ಒಂದು ಕೀರ್ತನೆಯನ್ನು ರಚಿಸಿದರು. ಕೀರ್ತನೆಯ ಕೊನೆಯಲ್ಲಿ ತಮ್ಮ ತಮ್ಮ ಇಷ್ಟದೇವತೆಗಳನ್ನು ನೆನೆದಿದ್ದಾರೆ. ಆ ಕೀರ್ತನೆ ಹೀಗಿದೆ.

ಪಲ್ಲವಿ: ನಾರಾಯಣತೇ ನಮೋ ನಮೋ

೧ನೆಯ ಚರಣ: ಭವನಾರದ ಸನ್ನು ತ ನಮೋ ನಮೋ
ಮುರಹರ ನಗಧರ ಮುಕುಂದ ಮಾಧವ
ಗರುಡ ಗಮನ ಪಂಕಜ ನಾಭ
ಪರಮಪುರುಷ ಭವಭಂಜನ ತೇ ನಮೋ (ಕೇಶವ)
ನರಮೃಗ ಶರೀರ ನಮೋ ನಮೋ

೨ನೆಯ ಚರಣ : ಜಲಧಿ ಶಯನ ರವಿಚಂದ್ರ ವಿಲೋಚನ
ಜಲರುಹ ಭವನುತ ಚರಣ ಯುಗ
ಬಲಿಬಂಧನ ಗೋವರ್ಧನ ವಲ್ಲಭ
ನಳಿನೋದರ ತೇ ನಮೋ ನಮೋ



೩ನೆಯ ಚರಣ : ಆದಿದೇವ ಸಕಲಾಗಮ ಪೂಜಿತ
ಯಾದವಕುಲ ಮೋಹನ ರೂಪಾ
ವೇದೋದ್ಧಾರ ತಿರುವೆಂಕಟ ನಾಯಕ
ನಾದ ಪ್ರಿಯ ತೇ ನಮೋ ನಮೋ
(ವೇದೋದ್ಧಾರಕ ವೆಂಕಟ ನಾಯಕ
ಪುರಂದರ ವಿಠಲಾ ನಮೋ ನಮೋ)

ಇಲ್ಲಿ ಅನ್ನಮಾಚಾರ್ಯನು ತಿರುವೆಂಕಟನಾಯಕನನ್ನು ಇಷ್ಟದೈವವನ್ನಾಗಿ ಪ್ರಸ್ತಾಪಿಸುತ್ತಾನೆ. ಪುರಂದರದಾಸರು ತಮ್ಮ ಇಷ್ಟದೈವವಾದ ಪುಂಡರೀಕ ವಿಠಲನನ್ನು ಸ್ಮರಿಸುತ್ತಾರೆ. ಅವರವರ ಇಷ್ಟ ದೈವದ ಅಂಕಿತಗಳು ಇಲ್ಲಿವೆ.

ವೆಂಕಟೇಶ್ವರ ಆಲಯದ ದರ್ಶನದ ಸಂದರ್ಭದಲ್ಲಿಯೂ ಪುರಂದರದಾಸರು ಕೆಲವು ಕೀರ್ತನೆಗಳನ್ನು ಬರೆದಂತಿದೆ. ಅದರಲ್ಲಿ ವೆಂಕಟೇಶ್ವರನ ರೂಪುರೇಖಾ ವಿಲಾಸಗಳನ್ನು, ಆಭರಣಗಳನ್ನು ವರ್ಣಿಸುತ್ತಾ ಸ್ವಾಮಿಯನ್ನು ಸ್ತುತಿಸಿದ್ದಾರೆ. ತಾವು ಬರೆದ ಒಂದು ಕೃತಿಯಲ್ಲಿ 'ಕಂಡೆ, ಕಂಡೆ ಸ್ವಾಮಿಯ ಬೇಡಿಕೊಂಡೆ' ಎನ್ನುತ್ತಾ, "ಕೋಟಿ ಸೂರ್ಯಪ್ರಭಕ್ಕೆ ಸಮಾನನು, ಕಿರೀಟಧಾರಿಯೂ, ವಿಸ್ಮಯಗೊಳಿಸುವ ಮಂದಸ್ಮಿತ ವದನನು, ಲಲಾಟತಿಲಕಧಾರಿಯೂ, ಅಸಮಾನವಾದ ಶಂಖಚಕ್ರಗದಾದಿಗಳನ್ನು ತನ್ನ ಚತುರ್ಭುಜಗಳಲ್ಲಿಯೂ, ಪಾದಗಳಲ್ಲಿಯೂ ಧರಿಸಿದವನೂ, ಸಮಯಕ್ಕೆ ಸರಿಯಾಗಿ ಹರಕೆಗಳನ್ನು ತೀರಿಸದಿದ್ದಲ್ಲಿ ಬಡ್ಡಿಸಮೇತ ವಸೂಲು ಮಾಡುವವನೂ, ಉಪ್ಪಿನ ಆಹಾರವನ್ನು ಸ್ವೀಕರಿಸುವವನು, ತೀರ್ಥವನ್ನು ಮಾರಿಕೊಳ್ಳುವವನೂ(ಸೇರಿಗೆ ಇಪ್ಪತ್ತು ಪೈಸೆಯಂತೆ), ಶೇಷತಲ್ಪಗತನೂ, ಜಗತ್ಪತನಾದ ವೆಂಕಟರಮಣನ ಪಾದಗಳನ್ನು ದರ್ಶಿಸಿದೆ. ವಕ್ಷಸ್ಥಲದ ಮೇಲೆ ನಿವಾಸವಿದ್ದ ಶ್ರೀದೇವಿ(ಲಕ್ಷ್ಮಿ)ಯನ್ನು ರಮಣೀಯವಾದ ಕೌಸ್ತುಭವನ್ನು ಕಂಡೆ. ಅಷ್ಟೇ ಅಲ್ಲ ಗರುಡ, ಕಿನ್ನರ, ನಾರದ, ಗಂಧರ್ವರನ್ನು ಕಂಡೆ. ಭಕ್ತರಿಗೆ ವರವನ್ನೀಯುವ ವರದ ಹಸ್ತವನ್ನು ಕಂಡೆ. ಶೇಷಾಚಲ ನಿವಾಸಿ, ವರಗಳನ್ನು ದಯಪಾಲಿಸುವ ಸ್ವಾಮಿ, ಸಾಗರ ಶಯನನಾದ ಸ್ವಾಮಿಯನ್ನು ಕಂಡೆ". ಈ ಕೃತಿಯು ಮುಖಾರಿ ರಾಗದಲ್ಲಿ ಮಟ್ಟಿ ಅಥವಾ ಮಧ್ಯ ತಾಳದಲ್ಲಿದೆ. ಇದು "ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಡೆ, ಕಂಡೆ ತಿರುಪತಿ ವೆಂಕಟೇಶನಾ....." ಎಂಬ ಪದಗಳಿಂದ ಆರಂಭವಾಗುತ್ತದೆ. ಕಾಪಿರಾಗ ಆದಿತಾಳದಲ್ಲಿ "ಧಣಿಯ ನೋಡಿದನೋ ವೆಂಕಟರಮಣ ಧಣಿಯ ನೋಡಿದೆ. ಶಿಖಾಮಣಿ ತಿರುಮಲನ" ಎಂಬ ಮತ್ತೊಂದು ಪದ್ಯದಲ್ಲಿ ತಾನು ಸಿರಿವಂತ ದೇವನಾದ ವೆಂಕಟಾಚಲಪತಿಯನ್ನು ಕಂಡುದಾಗಿ ಹೇಳುತ್ತಾ "ತಿರುಮಲೆಗೆ ಮುಕುಟಾಯಮಾನನು, ಪಾದಗಳಿಗೆ ಅಂದುಗೆಗಳನ್ನುಳ್ಳವನೂ, ಪಿತಾಂಬರಧಾರಿಯೂ, ಹೊಳೆಯುವ ವೈಢೂರ್ಯದ ವಡ್ಯಾಣವನ್ನುಳ್ಳವನೂ, ಜೋತಾಡುವ ಮಕರ ಕುಂಡಲಗಳುಳ್ಳವನೂ, ಕೌಸ್ತುಭ, ವೈಜಯಂತಿ, ಭುಜಕೀರ್ತಿಗಳನ್ನು

ಧರಿಸಿದವನೂ, ಹಣೆಯ ಮೇಲೆ ಸೊಗಸಾದ ತಿಲಕವನ್ನು ತೀಡಿಕೊಂಡವನೂ, ಶಂಖಚಕ್ರಧಾರಿಯೂ, ಮುಂಗೈಗೆ ರನ್ನಕಂಕಣವನ್ನು ತೊಟ್ಟವನೂ, ಶಂಖ ನಿನಾದಗೈಯ್ಯುವವನೂ, ಈ ಭೂಲೋಕವೇ ವೈಕುಂಠವೆಂದು ತನ್ನ ಹಸ್ತದಿಂದ ಸೂಚಿಸುವವನೂ, ಬಡ್ಡಿಕಾಸಿನವನೂ, ಕಸ್ತೂರಿ ಚಂದನ ಲೇಪಿತ ಗಾತ್ರನೂ, ಅತ್ತಿತ್ತ ತಿರುಗುವ ಬೇಟೆಗಾರನೂ, ಸೃಷ್ಟಿಕಾರಕನೂ ಆದ ಸ್ವಾಮಿ"ಯನ್ನು ದರ್ಶಿಸಿದಂತೆ ಮತ್ತೆ ಮತ್ತೆ ಹಾಡಿ ಕೀರ್ತಿಸುತ್ತಾರೆ.

ಮೂರನೆಯ ಕೀರ್ತನೆಯಲ್ಲಿ ಪುರಂದರದಾಸರು ಈ ರೀತಿಯಾಗಿ ಸಂಬೋಧಿಸುತ್ತಾರೆ. "ನಂಬಿದೆ ನಿನ್ನ ಪಾದವಾ, ವೆಂಕಟರಮಣಾ, ನಂಬಿದೆ ನಿನ್ನ ಪಾದವಾ", "ನಂಬಿದೆ ನಿನ್ನ ಪದಾಂಭುಜಯುಗಳವ........ ಚೆಂದಾಗಿ ಸಲುಹು ಮಂದರಧರನೆ" ಎಂದು ತಮ್ಮ ಕೃತಿಯಲ್ಲಿ ಕೀರ್ತಿಸಿದ್ದಾರೆ. ಸಾವೇರಿ ರಾಗದಲ್ಲಿ ಹಾಡಿದ ಒಂದು ಹಾಡಿನಲ್ಲಿ ವೆಂಕಟರಮಣನನ್ನು ಒಬ್ಬ ಭಕ್ತನ ಮನೆಗೆ ಬರುವಂತೆ ಪ್ರಾರ್ಥಿಸುತ್ತಾರೆ. "ಬಾರಯ್ಯಾ ವೆಂಕಟರಮಣ, ಭಕ್ತರ ಮನೆಗೆ" ಎಂದು ಸ್ವಾಮಿಯ ದಶಾವತಾರಗಳನ್ನು ಹೆಸರಿಸುತ್ತಾ ಆದಿಕಚ್ಛಪ, ಮುದದಿ-ಸೂಕರ, ಸದಯ-ನರಸಿಂಹ ಮೊದಲಾದವುಗಳೊಂದಿಗೆ ಬುದ್ಧ, ಕಲ್ಕಿ ಅವತಾರಗಳವರೆಗೂ ಕರೆಯುತ್ತಾರೆ. ಅವನ ಮನೆಗೆ ಹೋಗುವಂತೆ ಪ್ರಾರ್ಥಿಸುತ್ತಾರೆ. ಬಿಲಹರಿ ರಾಗ ಆದಿತಾಳದಲ್ಲಿ ಬರೆಯಲಾದ ಮತ್ತೊಂದು ಕೃತಿಯಲ್ಲಿ ವೆಂಕಟೇಶ್ವರನನ್ನು ಮತ್ತೊಮ್ಮೆ ಸಂಬೋಧಿಸುತ್ತಾ ದಶಾವತಾರಿಯನ್ನಾಗಿ ವರ್ಣಿಸುತ್ತಾ ತಮ್ಮ ಲೋಪಗಳನ್ನು ತಿದ್ದುವಂತೆಯೂ, ತಪ್ಪುಗಳನ್ನು ಮನ್ನಿಸುವಂತೆಯೂ ಬೇಡಿಕೊಳ್ಳುತ್ತಾರೆ. ಇವುಗಳೊಂದಿಗೆ ಒಂದು ಜೋಗುಳ ಹಾಡನ್ನೂ ಸಹ ಪುರಂದರದಾಸರು ಬರೆದಿದ್ದಾರೆ.

ಹಾಗೆಯೇ ವಿಜಯನಗರದ ಅರಸ ಕೃಷ್ಣದೇವರಾಯನ ಬಳಿ ಅನೇಕ ಪ್ರಶಂಸೆಗಳನ್ನು ಪಡೆದ ಪುರಂದರದಾಸರ ಗುರುವಾದ ವ್ಯಾಸರಾಯರು ವೆಂಕಟೇಶ್ವರನ ಮೇಲೆ ತೋಡಿ ರಾಗ ರೂಪಕ ತಾಳದಲ್ಲಿ "ನಿನ್ನ ನೋಡಿ ಧನ್ಯನಾದೆನು ಶ್ರೀ ಶ್ರೀನಿವಾಸ"- ಎನ್ನುತ್ತಾ ಒಂದು ಕೀರ್ತನೆಯನ್ನು ರಚಿಸಿದ್ದಾರೆ. ಉಳಿದಂತೆ ಕನ್ನಡದ ಅನೇಕ ದಾಸರೂ ಸಹ ವೆಂಕಟೇಶ್ವರನ ಮೇಲೆ ಕೀರ್ತನೆಗಳನ್ನು ಬರೆದಿದ್ದಾರೆ. ಹಾಡಿದ್ದಾರೆ. ಅದರಲ್ಲಿ "ಶ್ರೀವೆಂಕಟೇಶ್ವರ ಪಾಲಿಸೋ ನಿನ್ನ ಶ್ರೀಪಾದ ಸೇವಾರ್ಥ ನಡಿಸೋ"(ವಿಠ್ಠಲ ಅಂಕಿತವನ್ನುಳ್ಳದ್ದು), "ತೂಸಣಕಭೂಷಣ, ಯದುಭೂಷಣ, ಶೇಷಗಿರಿವಾಸ, ಶ್ರೀವರವೆಂಕಟೇಶ" (ವಹಲ ಅಂಕಿತವುಳ್ಳದ್ದು), "ವೆಂಕಟೇಶ ಭವ ಸಂಕಟ ಪರಿಹರಿಸೋ, ನಿನ್ನವರ ಮನ್ನಿಸೋ"(ಶ್ರೀಪತಿವಿಠ್ಠಲನ ಅಂಕಿತ)" ಎನ್ನುವವು ಪ್ರಮುಖವಾದವು.

ಕನ್ನಡದ ಹರಿದಾಸರು ಹೆಚ್ಚಿನ ಮನ್ನಣೆಯನ್ನು ಪಡೆದದ್ದು ಕೃಷ್ಣದೇವರಾಯನ ಕಾಲದಲ್ಲಿ. ಕೃಷ್ಣದೇವರಾಯನ ಆಸ್ಥಾನದಲ್ಲಿ ತೆಲುಗು ಕವಿಗಳಿದ್ದರು. ಅವರ



ಮೂಲಕವಾಗಿಯಾದರೂ ಕನ್ನಡ ಕೀರ್ತನೆಗಳ ಪ್ರಭಾವ ತೆಲುಗಿನ ಮೇಲೆ, ತೆಲುಗು ಕೀರ್ತನಕಾರರ ಮೇಲೆ ಆಗಿರಲು ಸಾಧ್ಯವಿದೆ. ಆದುದರಿಂದ ಕನ್ನಡ ಮತ್ತು ತೆಲುಗಿನಲ್ಲಿ ಬೆಳೆದು ಬಂದ ಕೀರ್ತನ ಸಾಹಿತ್ಯವನ್ನು, ಅವುಗಳ ಕೊಡು-ಕೊಳ್ಳುವಿಕೆಯನ್ನು, ಪರಸ್ಪರ ಪ್ರಭಾವಳಿಯನ್ನು ಗುರುತಿಸಬಹುದಾಗಿದೆ. ಮೊದಲಿಗೆ ಕನ್ನಡ ಕೀರ್ತನ ಪರಂಪರೆಯನ್ನು ನೋಡಿ, ನಂತರದಲ್ಲಿ ತೆಲುಗು ಕೀರ್ತನ ಪರಂಪರೆಯನ್ನು ಪ್ರಾತಿನಿಧಿಕ ಕೀರ್ತನಕಾರರ ಹಿನ್ನೆಲೆಯಲ್ಲಿ ನೋಡುವ.

ಈಗಾಗಲೇ ಹೇಳದಂತೆ ಕನ್ನಡ ಕೀರ್ತನ ಪರಂಪರೆ ಆರಂಭವಾಗುವುದು ನರಹರಿತೀರ್ಥರಿಂದ. ಇವರು ೧೩ನೆಯ ಶತಮಾನದ ಕೊನೆಗೆ ಅಥವಾ ೧೪ನೆಯ ಶತಮಾನದ ಆರಂಭದಲ್ಲಿ ಜೀವಿಸಿದ್ದಿರಬಹುದು. ಇವರು ರಚಿಸಿದ ಕೀರ್ತನೆಗಳಲ್ಲಿ 'ಎಂತು ಮರುಳಾದೆ' ಮತ್ತು 'ಹರಿಯೇ ಇದು ಸರಿಯೆ' ಎನ್ನುವ ಎರಡು ಕೀರ್ತನೆಗಳು ಮಾತ್ರ ಉಳಿದಿವೆ. ಇವರು 'ರಘುಕುಲತಿಲಕ' ಎನ್ನುವ ಅಂಕಿತದಿಂದ ಕೀರ್ತನೆಗಳನ್ನು ಬರೆದಂತೆ ತಿಳಿದು ಬರುತ್ತದೆ. ಕನ್ನಡ ಕೀರ್ತನೆಗಳಿಗೆ ಒಂದು ಪರಂಪರೆಯನ್ನು ಸೃಷ್ಟಿ ಮಾಡಿದವರು ಶ್ರೀಪಾದರಾಯರು. ಇವರು ರಚಿಸಿದ 'ಭ್ರಮರಗೀತೆ', 'ವೇಣುಗೀತೆ', 'ಗೋಪಿಗೀತೆ'ಗಳು ಗೇಯತೆಯಿಂದ ಸೊಗಸಾಗಿವೆ. ಇವರು ಕೀರ್ತನೆ, ಸುಳಾದಿ, ಉಗಾಭೋಗ ಮತ್ತು ವೃತ್ತನಾಮ ಎಂಬ ರಚನೆಗಳನ್ನು ಮಾಡಿದ್ದಾರೆ. ದಾಸ ಸಾಹಿತ್ಯ ವಿಶಿಷ್ಟತೆಗೆ ಕಾರಣವಾದ ಹರಿಭಕ್ತಿ, ನೀತಿಬೋಧೆ, ತಾತ್ತ್ವಿಕ ಚಿಂತನೆ, ಸಾಮಾಜಿಕ ಪ್ರಜ್ಞೆ ಇವರ ರಚನೆಗಳಲ್ಲಿದೆ.

ಶ್ರೀಪಾದರಾಯರ ಶಿಷ್ಯರಾಗಿ ಪಂಡಿತೋತ್ತಮನಾಗಿ ಪ್ರಸಿದ್ಧಿ ಪಡೆದ ಕೀರ್ತನಕಾರ ವ್ಯಾಸರಾಯ. ಕನ್ನಡ ದಾಸ ಪರಂಪರೆಯಲ್ಲಿ ವ್ಯಾಸಕೂಟ-ದಾಸಕೂಟಗಳಿಗೆ ಆಧಾರಸ್ತಂಭವಾಗಿ ಕನ್ನಡ ಹರಿದಾಸ ಸಾಹಿತ್ಯಕ್ಕೆ ಸ್ಥಿರವಾದ ನೆಲೆಯನ್ನೊದಗಿಸಿದನು. ವಿಜಯನಗರದ ಅರಸರಿಂದ ವಿಶೇಷ ಮನ್ನಣೆ ಪಡೆದನು. "ಶ್ರೇಷ್ಠ ತರಗತಿಯ ಪಂಡಿತನೂ ಯತಿಯೂ ಆಗಿ ತತ್ಕಾಲೀನ ಜನಜೀವನದ ಮೇಲೆ ಪ್ರಭಾವವನ್ನು ಬೀರಿ ಶಿಷ್ಯರ ಮೂಲಕ ದಾಸಕೂಟ ವಾಙ್ಮಯಕ್ಕೆ ಎತ್ತರದ ಪೀಠವನ್ನು ಕಲ್ಪಿಸಿಕೊಟ್ಟು ಕನ್ನಡ ಜನತೆಗೆ ಮಹೋಪಕಾರ ಮಾಡಿದ ಮಹಾವ್ಯಕ್ತಿಯೆಂದು ವ್ಯಾಸರಾಯನನ್ನು ನೆನೆಯಬೇಕು" ಎನ್ನುವ ರಂ.ಶ್ರೀ.ಮುಗುಳಿಯವರ ಮಾತು ಒಪ್ಪತಕ್ಕದ್ದು. ಕನ್ನಡ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದೇ ಕರೆಯಿಸಿಕೊಂಡಿರುವ ಪುರಂದರದಾಸ ಮತ್ತು ಕನಕದಾಸರು ಈತನ ಶಿಷ್ಯರೆಂಬುದು ಇನ್ನೊಂದು ಮಹತ್ತ್ವದ ವಿಚಾರ. ಈ ಎರಡು ಮಹಾನ್ ಚೇತನಗಳನ್ನು ಬೆಳೆಸಿದ, ಮಾರ್ಗದರ್ಶನ ನೀಡಿದ ಕೀರ್ತಿ ವ್ಯಾಸರಾಯನದು.

ಶ್ರೀಮಂತ ಕುಟುಂಬದಲ್ಲಿ ಜನಿಸಿ ಯಾವುದೋ ಒಂದು ಘಳಿಗೆಯಲ್ಲಿ ವೈರಾಗ್ಯ ಉಂಟಾಗಿ ಎಲ್ಲವನ್ನೂ ತ್ಯಾಗಮಾಡಿ 'ದಾಸಶ್ರೇಷ್ಠ' ಎನಿಸಿಕೊಂಡವನು ಪುರಂದರದಾಸ.

ವ್ಯಾಸರಾಯನಿಂದ ಮಂತ್ರೋಪದೇಶವನ್ನು ಪಡೆದಾಗಿನಿಂದ ಇವನ ಜೀವನ ಹರಿಸಮರ್ಪಿತವಾಯಿತು. ಹರಿನಾಮಸ್ಮರಣೆಯನ್ನು ಮಾಡುತ್ತಾ ದೇಶವನ್ನೆಲ್ಲಾ ಸುತ್ತಿದನು. ಅನ್ಯಮತೀಯರೊಂದಿಗೆ ನಿಕಟ ಸಂಬಂಧವನ್ನು ಬೆಳೆಸಿಕೊಂಡು ಸೂಕ್ಷ್ಮವಾಗಿ ಲೋಕಜೀವನ ನಿರೀಕ್ಷಣೆಯನ್ನು ಮಾಡಿದನು. ಈತನ ಕೀರ್ತನೆಗಳು ಹಲವಾರು ಸಹಜ ಸಾಮಾಜಿಕ ಸನ್ನಿವೇಶಗಳ ಸ್ಫೂರ್ತಿಯಿದ್ದರೂ ಕೂಡ ಅವು ಭಕ್ತಿಯ ಸ್ಥಾಯಿಭಾವ ವನ್ನು ಹೊಂದಿವೆ. 'ನಾರಾಯಣ ನಿಮ್ಮ ನಾಮದ ಸ್ಮರಣೆಯ ಸಾರಾಮೃತವೆನ್ನ ಕೀರ್ತನೆಗಳಲ್ಲಿ ಬರಲಿ', 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ'... ಮುಂತಾದ ಕೀರ್ತನೆಗಳಲ್ಲಿ ಹರಿನಾಮ ಸ್ಮರಣೆಯ ಮಹತ್ತ್ವವನ್ನು ಹೇಳಿದ್ದಾನೆ. 'ನಾ ನಿನ್ನೊಳನ್ಯ ಬೇಡುವುದಿಲ್ಲ ಎನ್ನ ಹೃದಯಕಮಲದೊಳು ನಿಂದಿರು ಹರಿಯೇ', 'ಕಣ್ಣಾರೆ ಕಂಡೆನಚ್ಯುತನ', ' ಕಂಡು ಕಂಡು ಎನ್ನ ಕೈ ಬಿಡುವರೆ'– ಮೊದಲಾದ ಕೀರ್ತನೆಗಳಲ್ಲಿ ಭಕ್ತನ ಆರ್ತತೆ, ಕೋರಿಕೆ, ಕಳವಳಗಳನ್ನು ಕಾಣಬಹುದು. ಮನುಷ್ಯ ಸ್ವಭಾವದ ವಿವಿಧ ಮಜಲುಗಳನ್ನು ಪರಿಚಯಿಸುತ್ತಲೇ ಅವುಗಳನ್ನು ವಿಡಂಬಿಸುವ ಕಲೆ ಪುರಂದರದಾಸನಿಗೆ ಕರತಗವಾಗಿದೆ. 'ನಗೆಯು ಬರುತಿದೆ', 'ಡೊಂಕು ಬಾಲದ ನಾಯಕರೆ', 'ತನುವ ನೀರೊಳಗದ್ದಿ ಫಲವೇನು' ಮುಂತಾದ ಕೀರ್ತನೆಗಳಲ್ಲಿ ಡಾಂಬಿಕತೆಗಳ ಕಟುವಿಮರ್ಶೆಯಿದೆ. ಪುರಂದರದಾಸನು ಕೀರ್ತನೆ ಗಳೊಂದಿಗೆ ಸುಳಾದಿ, ಉಗಾಭೋಗಗಳನ್ನೂ ರಚಿಸಿದ್ದಾನೆ. ಹಾಗೆಯೇ ಈತ ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಈತನನ್ನು 'ಕರ್ನಾಟಕ ಸಂಗೀತ ಪಿತಾಮಹ' ನೆಂತಲೂ ಕರೆಯುತ್ತಾರೆ. ಒಟ್ಟಿನಲ್ಲಿ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿ, ಭಕ್ತಿ ಕೀರ್ತನೆಗಳನ್ನು ರಚಿಸಿ ಜನಸಾಮಾನ್ಯರಿಗೂ ಕನ್ನಡ ಸಾಹಿತ್ಯಕ್ಕೂ ಬೆಸುಗೆಯನ್ನುಂಟು ಮಾಡಿದ್ದಾನೆನ್ನಬಹುದು.

ಪುರಂದರದಾಸನ ಸಮಕಾಲೀನನೂ, ಸಮತೂಕದವನೂ ಆದ ಮತ್ತೊಬ್ಬ ಶ್ರೇಷ್ಠ ಕೀರ್ತನಕಾರ ಕನಕದಾಸ. ಬಾಡಾ ಎಂಬ ಗ್ರಾಮದಲ್ಲಿ ಹುಟ್ಟಿ ದಂಡನಾಯಕನಾಗಿದ್ದ ಈತನು ಕೆಲಕಾಲದ ನಂತರ ಸಂಸಾರದಲ್ಲಿ ವೈರಾಗ್ಯ ಉಂಟಾಗಿ ಭಕ್ತನಾದನು. ಕಾಗಿನೆಲೆಯಲ್ಲಿ ಆದಿಕೇಶವನ ಗುಡಿಯನ್ನು ಕಟ್ಟಿಸಿ ಅವನನ್ನೇ ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡನು. ವ್ಯಾಸರಾಯನ ಬಳಿ ಶಿಷ್ಯತ್ವವನ್ನು ಪಡೆದು ನಂತರ ಸಂಚಾರಿಯಾಗಿ ಕೀರ್ತನೆಗಳನ್ನು ಹಾಡುತ್ತಾ ಸಾಗಿದನು. ಸಮಾಜದಲ್ಲಿ ಅನೀತಿ, ಡಾಂಭಿಕತೆಯನ್ನು ವಿಡಂಬಿಸುತ್ತಾ, ಮನುಷ್ಯ ಜನ್ಮದ ಉದ್ಧಾರ, ಸಮಾಜದಲ್ಲಿನ ಕುಂದುಕೊರತೆಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೀರ್ತನೆಗಳನ್ನು ರಚಿಸಿದನು. 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂದು ಪ್ರಶ್ನಿಸುವ ಮೂಲಕ ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ಟೀಕಿಸುತ್ತಾನೆ. ಹಾಗೆಯೇ 'ತನು ನಿನ್ನದು ಜೀವನ ನಿನ್ನದು', 'ತಲ್ಲಣಿಸದಿರು ಕಂಡ್ಯ ತಾಳು ಮನವೆ', 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ' ಮುಂತಾದ ಭಕ್ತಿ ನಿರ್ಭರತೆಯನ್ನು ತಿಳಿಸುವ ಕೀರ್ತನೆಗಳನ್ನೂ ಕನಕದಾಸ ರಚಿಸಿದ್ದಾನೆ.

ಕೀರ್ತನೆಗಳನ್ನಷ್ಟೇ ಅಲ್ಲದೆ ಭಾಮಿನಿ ಷಟ್ಪದಿಯಲ್ಲಿ 'ಹರಿಭಕ್ತಿಸಾರ', 'ರಾಮಧಾನ್ಯ ಚರಿತ್ರೆ', 'ನಳಚರಿತ್ರೆ' ಹಾಗೂ ಸಾಂಗತ್ಯದಲ್ಲಿ 'ಮೋಹನ ತರಂಗಿಣಿ' ಎನ್ನುವ ಸಾಹಿತ್ಯ ಕೃತಿಗಳನ್ನೂ ಈತ ರಚಿಸಿದ್ದಾನೆ. "ಅವನ ಕಾವ್ಯಗ್ರಂಥ ಮತ್ತು ಕೀರ್ತನೆಗಳಲ್ಲಿ ನವೋನಪ್ರತಿಭೆ ಸಹಜ ಲಾಸ್ಯದಿಂದ ಕುಣಿದಿದ್ದಾಳೆ. ಅವನ ವಾಣಿಯಲ್ಲಿ ಸಹಜಸೊಮ್ಮು, ದೇಸಿಯ ಸವಿತಿರುಳು ಮೈಗೊಂಡಿವೆ. ಅವನು ಮಹಾಭಕ್ತನಂತೆ ಮಹಾಕವಿಯ ಸತ್ವವುಳ್ಳವನು. ಅವನ ಜೀವನವೇ ಮಹಾಕೃತಿಯಾಗಿತ್ತು; ಅವನ ಕೃತಿಗಳಲ್ಲಿಯೂ ಮಹೋನ್ನತಿ ಬೆಳಗಿದೆ" ಎನ್ನುವ ಮೂಲಕ ರಂ.ಶ್ರೀ. ಮುಗುಳಿಯವರು ಕನಕದಾಸನ ಸಾಹಿತ್ಯದ ಸೊಬಗನ್ನು ವರ್ಣಿಸಿದ್ದಾರೆ.

ಪುರಂದರ ಹಾಗೂ ಕನಕದಾಸರ ನಂತರ ಈ ಪರಂಪರೆಯನ್ನು ಮುಂದು ವರೆಸಿದವನು ಜಗನ್ನಾಥದಾಸ. ಸಂಸ್ಕೃತ ಪಾಂಡಿತ್ಯವನ್ನು ಹೊಂದಿದ್ದ ಈತನು ವಿಶಾಲ ಮನೋಭಾವದ ಭಕ್ತ. ಇವನ ಕೀರ್ತನೆಗಳಲ್ಲಿ ಹರಿಗುರು ಸ್ತುತಿ ಹಾಗೂ ಆಧ್ಯಾತ್ಮಿಕ ಅನುಭವಕ್ಕೆ ಹೆಚ್ಚಿನ ಸ್ಥಾನವಿದೆ. 'ಎಂಥಾದೋ ಶ್ರೀವೈಕುಂಠವೆಂಥಾದೊ', 'ದಾಸೋಹಂ ತವ ದಾಸೋಹನಂ', 'ರಂಗ ನಿನ್ನ ಕೊಂಡಾಡುವ ಮಗಳಾತ್ಮರ', 'ಪಿಡಿಯೆನ್ನ ಕೈಯ್ಯ', 'ಸಿರಿರಮಣ ತವ ಚರಣ', 'ಕಂಡೆ ಕಂಡೆ ಕೃಷ್ಣನ ಕಂಡೆ'– ಮುಂತಾದ ಕೀರ್ತನೆಗಳಲ್ಲಿ ಹರಿಯನ್ನು ಕೊಂಡಾಡುತ್ತಲೇ ಗುರುವನ್ನು ಸ್ಮರಿಸುವ ಜಗನ್ನಾಥದಾಸನು ಉತ್ತಮ ಕೀರ್ತನೆಗಳನ್ನು ರಚಿಸಿದ್ದಾನೆ. ಅಷ್ಟೇ ಅಲ್ಲದೆ 'ಹರಿಕಥಾಮೃತಸಾರ' ಎನ್ನುವ ಕೃತಿಯನ್ನೂ ಬರೆದಿದ್ದಾನೆ.

ಈ ಮೇಲೆ ಉಲ್ಲೇಖಿಸಿದವರಷ್ಟೇ ಅಲ್ಲದೆ ಇನ್ನು ಅನೇಕರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ವಾದಿರಾಜ, ವಿಜಯದಾಸ, ಪ್ರಸನ್ನವೆಂಕಟದಾಸ, ಮಹಿಪತಿದಾಸ, ರಾಘವೇಂದ್ರ ತೀರ್ಥ– ಮುಂತಾದವರು ಕನ್ನಡ ಕೀರ್ತನ ಸಾಹಿತ್ಯಕ್ಕೆ ವಿಶೇಷವಾದ ಕೊಡುಗೆಯನ್ನು ನೀಡಿದ್ದಾರೆ.

ಈಗಾಗಲೇ ನೋಡಿದಂತೆ ತೆಲುಗು ಕೀರ್ತನಕಾರರ ಪರಂಪರೆಯಲ್ಲಿ ಮೊದಲಿಗೆ ಕೇಳಿಬರುವ ಹೆಸರು ಕೃಷ್ಣಮಾಚಾರ್ಯನದು. ಈತ ಇಂದಿನ ತೆಲಂಗಾಣ ರಾಜ್ಯದ ಮೆಹಬೂಬನಗರ ಜಿಲ್ಲೆಯ ಪ್ರಾಂತಕ್ಕೆ ಸೇರಿದವನೆಂದು ನಿರೂಪಿಸಲಾಗಿದೆ. ವೈಷ್ಣವ ಮತ ಸಿದ್ಧಾಂತ ಪ್ರತಿಪಾದನೆಗೆ ಸಂಬಂಧಿಸಿದ, ಪುರಾಣಕ್ಕೆ ಸಂಬಂಧಿಸಿದ, ವೇದಾಂತ ಪರವಾದ ಹಾಗೂ ನೀತಿ ಬೋಧಕವಾದ ಕೀರ್ತನೆಗಳನ್ನು ಈತ ರಚಿಸಿದಂತೆ ತಿಳಿದು ಬರುತ್ತದೆ. ವಿಷ್ಣುಭಕ್ತಿಯ ಪಾರಮ್ಯತೆ ಈತನ ಕೀರ್ತನೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈತನ ನಂತರ ಬರುವ ಮತ್ತೊರ್ವ ಕೀರ್ತನಕಾರ ಯಾಗಂಟಿ. ಈತನು

ಶೈವಕೀರ್ತನೆಗಳನ್ನು ರಚಿಸಿದಂತೆ ತಿಳಿದುಬರುತ್ತದೆ. ಈತನ ಹೆಚ್ಚಿನ ಕೀರ್ತನೆಗಳು ಯಾಗಂಟಿ ಲಕ್ಷ್ಮಯ್ಯ ಎನ್ನುವ ಹೆಸರಿನಲ್ಲಿ ಪ್ರಚಾರದಲ್ಲಿವೆ. ಈತನು ಕೃಷ್ಣಮಾಚಾರ್ಯ ಮತ್ತು ಅನ್ನಮಯ್ಯರ ಮಧ್ಯ ಕಾಲದಲ್ಲಿ ಜೀವಿಸಿದಂತೆ ತಿಳಿದುಬರುತ್ತದೆ. ಈತನ ಮೇಲೆ ಅನುಭಾವಿ ವೇಮನನ ಪ್ರಭಾವವಿದೆ.

ಈತನ ನಂತರ ಕಾಣಿಸಿಕೊಳ್ಳುವ ತೆಲುಗಿನ ಪ್ರಮುಖ ವಚನಕಾರ ಅನ್ನಮಯ್ಯ. ತೆಲುಗು ಕೀರ್ತನಕಾರರ ಸಾಲಿನಲ್ಲಿ ಅನ್ನಮಯ್ಯ ಅಥವಾ ಅನ್ನಮಾಚಾರ್ಯನದು ಬಹುದೊಡ್ಡ ಹೆಸರು. ಈತನ ಕಾಲ ಕ್ರಿ.ಶ. ೧೪೦೮–೧೫೦೩. ಈತನು ಸುಮಾರು ೩೨,೦೦೦ ಕೀರ್ತನೆಗಳನ್ನು ಬರೆದನೆಂದು ಹೇಳಲಾಗುತ್ತದೆ. ಆದರೆ ಇಲ್ಲಿವರೆಗೆ ಸುಮಾರು ೧೪,೦೦೦ ಕೀರ್ತನೆಗಳು ದೊರೆತಿವೆ. ತಾಳ್ಳಪಾಕ ಎಂಬ ಗ್ರಾಮದಲ್ಲಿ ಜನಿಸಿದ ಅನ್ನಮಯ್ಯನು ನಂತರ ವೈಷ್ಣವ ಧರ್ಮ ಸ್ವೀಕಾರದಿಂದ ಅನ್ನಮಾಚಾರ್ಯನಾದರೆಂದು ಹೇಳಲಾಗುತ್ತದೆ. ತನ್ನ ಜೀವನವನ್ನೆಲ್ಲಾ ತಿರುಪತಿಯ ಶ್ರೀವೆಂಕಟೇಶ್ವರನಿಗೆ ಮೀಸಲಿರಿಸಿದ ಮಹಾಭಕ್ತ. ಈತನ ಮೇಲೆ ಕನ್ನಡ ಶ್ರೀಪಾದರಾಯ ಮತ್ತು ನಿಜಗುಣರ ಪ್ರಭಾವವಿದೆ. ಈತನಿಗೆ ತೆಲುಗಿನ ಜೊತೆ ಕನ್ನಡ, ತಮಿಳು, ಸಂಸ್ಕೃತ ಭಾಷೆಗಳ ಪರಿಚಯವಿರುವುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕೀರ್ತನಕಾರರಲ್ಲಿ ಕಾಣಿಸುವ ಮೌಲಿಕ ಲಕ್ಷಣಗಳು ಈತನಲ್ಲಿವೆ. ಈತ ಮೋಕ್ಷಕ್ಕಿಂತ ಭಗವಧಾರಾಧನೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದನು. ಭಗವದ್ಗುಣಾಸಂಧಾನಮೇ ಈತನ ಕೀರ್ತನೆಗಳಿಗೆ ವಸ್ತು. ಅನ್ನಮಾಚಾರ್ಯನು ಆಡಿದ ಮಾತೆಲ್ಲ ಅಮೃತ ಕಾವ್ಯವಾಗಿ ಹಾಡಿದ ಹಾಡೆಲ್ಲ ಪರಮಗಾನ ವಾಯಿತು. ತನ್ನ ೧೬ನೆಯ ವಯಸ್ಸಿನಲ್ಲಿ ಕೀರ್ತನೆಗಳನ್ನು ಬರೆಯಲು ಆರಂಭಿಸಿದ ಅನ್ನಮಾಚಾರ್ಯನು ೭೦ ವರ್ಷಗಳ ಕಾಲ ಕೀರ್ತನೆಗಳನ್ನು ರಚಿಸಿದಂತೆ ತಿಳಿದು ಬರುತ್ತದೆ. ನರಹರಿಯ ಕೀರ್ತನೆಯೇ ಆತನಿಗೆ ಪರಮಧ್ಯಾನ.

ವೆಂಕಟೇಶ್ವರನನ್ನು ಸ್ತುತಿಸುತ್ತಾ ಕೀರ್ತನೆಗಳನ್ನು ಬರೆದವರಲ್ಲಿ ಅಗ್ರಗಣ್ಯನು ತಾಳ್ಳಪಾಕ ಅನ್ನಮಾಚಾರ್ಯನು. ಅನ್ನಮಾಚಾರ್ಯನ ಮೊಮ್ಮಗನಾದ ಚಿನ್ನತಿರುಮಲ ಅಯ್ಯಂಗಾರನು ತನ್ನ ಪದ್ಯಕಾವ್ಯವಾದ 'ಅನ್ನಮಾಚಾರ್ಯ ಚರಿತ್ರಮು'ನಲ್ಲಿ ತನ್ನ ತಾತನಾದ ಅನ್ನಮಾಚಾರ್ಯನು ವೆಂಕಟೇಶ್ವರನ ಮೇಲೆ ಮೂವತ್ತೆರಡು ಸಾವಿರ ಕೀರ್ತನೆಗಳನ್ನು ಬರೆದ ವಿಷಯವನ್ನು ಪ್ರಸ್ತಾಪಿಸುತ್ತಾನೆ. ವೆಂಕಟೇಶ್ವರ ದೇವಾಲಯದ ಒಂದು ಕೋಣೆಯಲ್ಲಿ ರಕ್ಷಿಸಿಡಲಾದ ತಾಮ್ರಫಲಕಗಳಲ್ಲಿ ಕೀರ್ತನೆಗಳನ್ನು ಕೊರೆಯಲಾಗಿದ್ದು ಅವುಗಳ ಸಂಖ್ಯೆ ಸುಮಾರು ಹದಿನೆಂಟು ಸಾವಿರ. ಮೂರು ಸಾವಿರ ತಾಮ್ರಫಲಗಳ ಇಕ್ಕೆಡೆಗಳಲ್ಲಿಯೂ ಮೂರು ಮೂರು ಕೀರ್ತನೆಗಳನ್ನು ಕೊರೆಯಲಾಗಿದೆ. ಈ ಹದಿನೆಂಟು ಸಾವಿರ ಸಂಕೀರ್ತನೆಗಳಲ್ಲಿ ಹತ್ತು ಸಾವಿರ ಅನ್ನಮಾಚಾರ್ಯನವು, ಐದು ಸಾವಿರ ಆತನ ಮಗನಾದ ಪೆದತಿರುಮಲಾಚಾರ್ಯನವು, ಉಳಿದ ಮೂರು ಸಾವಿರ ಆತನ ಮೊಮ್ಮಗನಾದ ಚಿನತಿರುಮಲಾಚಾರ್ಯನವು.



ಉಳಿದ ಕೀರ್ತನೆಗಳು ಯಾರವೆಂಬುದು ತಿಳಿದು ಬರುವುದಿಲ್ಲ. ಕೆಲವು ವರ್ಷಗಳ ಕೆಳಗೆ ಮದ್ರಾಸ್ ಎಪಿಗ್ರಾಫಿಕಲ್ ಡಿಪಾರ್ಟ್‌ಮೆಂಟ್ ನವರು ಅಹೋಬಲ ಸ್ವಾಮಿಯ ದೇವಾಲಯದಲ್ಲಿಯೂ ಶ್ರೀರಂಗಂದಲ್ಲಿಯ ಶ್ರೀರಂಗನಾಥ ಸ್ವಾಮಿಯ ದೇವಾಲಯ ದಲ್ಲಿಯೂ ಕೆಲವು ತಾಮ್ರಫಲಕಗಳನ್ನು ಪತ್ತೆ ಹಚ್ಚಿದ್ದಾರೆ. ಅಹೋಬಲದಲ್ಲಿರುವ ಕೆಲವು ತಾಮ್ರಫಲಕಗಳನ್ನು ಮಾತ್ರ ತಿರುಪತಿ ದೇವಸ್ಥಾನದವರು ಸಂಗ್ರಹಿಸಿದ್ದಾರೆ.

ಅನ್ನಮಾಚಾರ್ಯನು ತೆಲುಗು ನಂದವರ ಅಥವಾ ನಂದವರೀಕ ಬ್ರಾಹ್ಮಣ. ಆದರೆ ವೆಂಕಟೇಶ್ವರನ ಸೇವೆಗೆ ತನ್ನ ಜೀವಿತವನ್ನು ಅಂಕಿತ ಮಾಡಿ ವೈಷ್ಣವ ದೀಕ್ಷೆಯನ್ನು ಪಡೆದು ಆಳ್ವಾರರು ಪಾಸುರಗಳಲ್ಲಿ ಹೇಳಿದ ವೈಷ್ಣವ ಸಿದ್ಧಾಂತಗಳನ್ನು ಅರಗಿಸಿಕೊಂಡನು. ಅವುಗಳಿಗೆ ಅನುಗುಣವಾಗಿ ಕೀರ್ತನೆಗಳನ್ನು ರಚಿಸಿದನು. ಆತನ ಮೊಮ್ಮಗನಾದ ಚಿನತಿರುಮಲ ಅನ್ನಮಯ್ಯಂಗಾರನು ತೆಲುಗಿನಲ್ಲಿ ದ್ವಿಪದ ಛಂದಸ್ಸಿನಲ್ಲಿ ರಾಮಾಯಣವನ್ನು, ಸಂಸ್ಕೃತದಲ್ಲಿ 'ವೆಂಕಟಾದ್ರಿ ಮಹಾತ್ಮ್ಯಂ' ಮತ್ತು 'ಶೃಂಗಾರ ಮಂಜರಿ' ಅಲ್ಲದೆ ಹನ್ನೆರಡು ಶತಕಗಳು, ಶೃಂಗಾರ ಕೀರ್ತನೆಗಳು, ಆಧ್ಯಾತ್ಮ ಸಂಕೀರ್ತನೆಗಳು ಮತ್ತು 'ಸಂಕೀರ್ತನ ಲಕ್ಷಣಂ' ಮೊದಲಾದವನ್ನು ಬರೆದುದಾಗಿ ಹೇಳಿದ್ದಾನೆ. ಆದರೆ ಮೇಲೆ ಉಲ್ಲೇಖಿಸಲಾದ ಯಾವ ಗ್ರಂಥಗಳೂ ಉಪಲಬ್ಧವಿಲ್ಲ. ಅನ್ನಮಯ್ಯನು ತಾನು ಬರೆದ ಕೀರ್ತನೆಗಳನ್ನು ವೆಂಕಟೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ನಿಂತು ಸ್ವತಃ ತಾನು ಹಾಡುತ್ತಿದ್ದುದಾಗಿ ತಿಳಿದುಬರುತ್ತದೆ. ಅನ್ನಮಯ್ಯನು ತನ್ನ ಜೀವಿತದ ಕೊನೆಯ ದಿನಗಳಲ್ಲಿ ದಿನಕ್ಕೊಂದರಂತೆ ಕೀರ್ತನೆಯನ್ನು ರಚಿಸಿ ಸ್ವಾಮಿಯ ಸನ್ನಿಧಿಯಲ್ಲಿ ಹಾಡಬೇಕೆಂಬುದಾಗಿ ತನ್ನ ಮಗನಾದ ಪೆದತಿರುಮಲಯ್ಯಂಗಾರನನ್ನು ಆದೇಶಿಸಿದನಂತೆ. ಪೆದತಿರುಮಲನ ಮಗನಾದ, ಅನ್ನಮಾಚಾರ್ಯನ ಮೊಮ್ಮಗನಾದ ಚಿನತಿರುಮಲಾಚಾರ್ಯನು ತನ್ನ 'ಅನ್ನಮಾಚಾರ್ಯ ಚರಿತ್ರಮು'ದಲ್ಲಿ ಅನ್ನಮಯ್ಯನು ಮೊದಲಿನಿಂದಲೂ ತನ್ನ ಸ್ವಗ್ರಾಮವಾದ ತಾಳ್ಳಪಾಕದಲ್ಲಿ ಸ್ಥಿರನಿವಾಸವನ್ನೇರ್ಪಡಿಸಿ ಕೊಂಡಂತೆಯೂ, ಪ್ರತಿವರ್ಷವೂ ತಪ್ಪದೆ ಬ್ರಹ್ಮೋತ್ಸವದಲ್ಲಿ ಅಜನ್ಮಾಂತರದವರೆಗೂ ಕಡ್ಡಾಯವಾಗಿ ಪಾಲ್ಗೊಳ್ಳುತ್ತಿದ್ದಂತೆಯೂ ಪ್ರಸ್ತಾಪಿಸುತ್ತಾನೆ. ಉತ್ಸವದ ನಂತರ ಅವನು ತನ್ನ ಗ್ರಾಮಕ್ಕೆ ಮರಳಿ ಮತ್ತೆ ಕೀರ್ತನೆಗಳನ್ನು ಬರೆಯುವುದರಲ್ಲಿ ನಿಮಗ್ನನಾಗುತ್ತಿದ್ದನು. ಬಹುಶಃ ತನ್ನ ಮಗನಾದ ಪೆದತಿರುಮಾಲಾಚಾರ್ಯನು ಗುಡಿಯಲ್ಲಿ ಕೀರ್ತನಾಚಾರ್ಯ ನಾಗಿ ಕರ್ತವ್ಯಗಳನ್ನು ಸ್ವೀಕರಿಸಿದ ಮೇಲೆ ತನ್ನ ಸ್ವಗ್ರಾಮಕ್ಕೆ ಈತನು ಮರಳಿ ಹೋಗಿರಬೇಕು.

ಪೆದತಿರುಮಲಯ್ಯ, ತಿರುಮಲಯ್ಯಂಗಾರ, ತಿರುಮಲಯ್ಯ, ತಿರುಮಲಾಚಾರ್ಯ, ತಿರುಮಲದೇಶಿಕ ಎಂಬ ಹೆಸರುಗಳಿಂದ ಕರೆಯಲ್ಪಡುವ ಅನ್ನಮಾಚಾರ್ಯನ ಮಗ ಪೆದತಿರುಮಲಾಚಾರ್ಯನು ತಂದೆಯಂತೆಯೇ ಶ್ರೇಷ್ಠ ವಿದ್ವಾಂಸ, ತತ್ತ್ವವೇತ್ತನು.

ಗಾಯಕನೂ ಸಹ. ಈತನು ವೆಂಕಟೇಶ್ವರನ ಆಲಯದಲ್ಲಿ ಎರಡನೆಯ ಕೀರ್ತನಾಚಾರ್ಯನಾಗಿದ್ದನು. ಮರಣಶಯ್ಯೆಯಿಂದ ದಿನಕ್ಕೊಂದು ಸಂಕೀರ್ತನೆಯನ್ನಾದರೂ ರಚಿಸುವಂತೆ ತನ್ನ ತಂದೆ ಆದೇಶಿಸಿದ ಮೇರೆಗೆ ವೆಂಕಟೇಶ್ವರ ಸ್ವಾಮಿಯನ್ನುದ್ದೇಶಿಸಿ 'ಶೃಂಗಾರ ಸಂಕೀರ್ತನಲು' 'ಆಧ್ಯಾತ್ಮಿಕ ಸಂಕೀರ್ತನಲು' ಅಲ್ಲದೆ 'ಹರಿವಂಶ ಕಾವ್ಯ'ವನ್ನೂ ಸಹ ಬರೆದಿದ್ದಾನೆ. 'ಚಕ್ರವಾಳ ಮಂಜರಿ', 'ವೈರಾಗ್ಯ ವಚನ–ಮಲ್ಲಿಕಾ ಗೀತಲು', 'ಶೃಂಗಾರ ದಂಡಕಮು', 'ಶೃಂಗಾರ ವೃತ್ತ ಪದ್ಯಾಲ ಶತಕಮು', 'ಉದಾಹರಣಮುಲು', 'ನೀತಿಸೀಸ ಶತಕಮು', 'ಸುದರ್ಶನ ರಗಳೆ'ಗಳನ್ನೂ ಬರೆದಿದ್ದಾನೆ. ಭಗವದ್ಗೀತೆಯನ್ನು ಗದ್ಯದಲ್ಲಿ ತೆಲುಗಿಗೆ ಭಾಷಾಂತರಿಸಿದ್ದಾನೆ. ಆತನ ಸೋದರಳಿಯನಾದ ರೇವನೂರಿ ವೆಂಕಟಕವಿಯು ತನ್ನ 'ಶಕುಂತಲಾ ಪರಿಣಯಂ'ದಲ್ಲಿ ಪೆದತಿರುಮಲಾಚಾರ್ಯನ ವಿಶೇಷ ಭಕ್ತಿ ಕೀರ್ತನೆಗಳ ಸೇವೆಗೆ ಮೆಚ್ಚಿದ ವೆಂಕಟೇಶ್ವರನು ಆತನ ಕುಟುಂಬದಲ್ಲಿಯ ಮೂರು ತಲೆಮಾರಿನವರೆಗೂ (ತಿರುಮಲಯ್ಯನಿಂದ ಮೊದಲುಗೊಂಡು) ದರ್ಶನ ನೀಡುತ್ತೇನೆಂದು, ಏಳು ತಲೆಮಾರಿನವರೆಗೆ ಮೋಕ್ಷವನ್ನು ಪ್ರಸಾದಿಸುತ್ತೇನೆಂದು ವರವನ್ನಿತ್ತನೆಂದು ಹೇಳುತ್ತಾನೆ.

ಪೆದತಿರುಮಲಾಚಾರ್ಯನ ಜೇಷ್ಠ ಪುತ್ರನು ಚಿನ್ನತಿರುಮಲಾಚಾರ್ಯನು. ತನ್ನ ತಾತ ತಂದೆಯರ ಮಾರ್ಗವನ್ನೇ ಅನುಸರಿಸಿ ದೇವಾಲಯದಲ್ಲಿ ಕೀರ್ತನಾಚಾರ್ಯನ ಪದವಿಯನ್ನು ಸ್ವೀಕರಿಸಿದನು. ವೆಂಕಟೇಶ್ವರನೆಡೆಗಿನ ಭಕ್ತಿ ಪ್ರಪತ್ತಿಗಳಿಂದಾಗಿ ಶೃಂಗಾರ ಸಂಕೀರ್ತನೆಗಳನ್ನು, ಆಧ್ಯಾತ್ಮಿಕ ಸಂಕೀರ್ತನೆಗಳನ್ನು ರಚಿಸಿದನು. ಅಷ್ಟಭಾಷಾ ದಂಡಕವನ್ನೂ ಬರೆದಿದ್ದಾನೆ. ತನ್ನ ತಾತನಾದ ಅನ್ನಮಾಚಾರ್ಯನು ಬರೆದ 'ಸಂಕೀರ್ತನ ಲಕ್ಷಣಂ'ನ್ನು ತೆಲುಗಿಗೆ ಅನುವಾದಿಸಿದ್ದಾನೆ. ತನ್ನ ಅಷ್ಟಭಾಷಾ ಪ್ರಾವಿಣ್ಯಕ್ಕೆ (ಸಂಸ್ಕೃತ, ಶೌರಸೇನಿ, ಮಾಗಧಿ ಮೊದಲಾದ ಭಾಷೆಗಳು) ಗುರುತಾಗಿ ಆತನು 'ಚಾರುತರ ಅಷ್ಟಭಾಷಾ ಚಕ್ರವರ್ತಿ' ಎಂಬ ಬಿರುದನ್ನು ಪಡೆದಂತೆ ಆತನ ಮೂರನೆಯ ತಮ್ಮನಾದ ಚಿನ್ನತಿರುವೇಂಗಡನಾಥನು (ಚಿನ್ನನ್ನ ಎಂಬ ಹೆಸರಿನಿಂದ ಪ್ರಸಿದ್ಧನು) ಬರೆದ 'ಅಷ್ಟಮಹಿಷಿ ಕಲ್ಯಾಣಂ' ಎಂಬ ಗ್ರಂಥದಿಂದ ತಿಳಿದು ಬರುತ್ತದೆ.

ಅನ್ನಮಾಚಾರ್ಯನ ಎರಡನೆಯ ಹೆಂಡತಿಯಾದ ಅಕ್ಕಲಾಂಬಳ ಮಗನಾಗಿ ಹುಟ್ಟಿದ ಇವನೂ ಸಹ ತಂದೆಯಂತೆ ಶ್ರೀವೆಂಕಟೇಶ್ವರನ ಸೇವೆಯಲ್ಲಿಯೇ ಮುಂದುವರೆದನು. ಈತನು ಶೃಂಗಾರ, ಆಧ್ಯಾತ್ಮಿಕ ಕೀರ್ತನೆಗಳನ್ನು ರಚಿಸುವುದಷ್ಟೇ ಅಲ್ಲದೆ 'ವೈರಾಗ್ಯ ವಚನ ಗೀತಾಲು', 'ಶೃಂಗಾರ ದಂಡಕ', 'ಚಕ್ರವಾಳ ಮಂಜರಿ', 'ಶೃಂಗಾರ ವೃತ್ತ ಶತಕಂ' ವೆಂಕಟೇಶ್ವರಪದಾಹರಣಂ', 'ಸಂಕೀರ್ತನಲಕ್ಷಣವ್ಯಾಖ್ಯ', 'ನೀತಿಸೀಸ ಶತಕಂ'– ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆ. ಇದೇ ವಂಶದ ಕುಡಿಯಾಗಿ ಬಂದ ತಾಳ್ಳಪಾಕ ಚಿನತಿರುಮಲಾಚಾರ್ಯನು ತೆಲುಗು ಕೀರ್ತನ ಪರಂಪರೆಯನ್ನು ಮುಂದುವರೆಸಿದನು. ಅಷ್ಟಭಾಷಾ ವಿಶಾದರನಾದ ಈತನು



ವೆಂಕಟೇಶ್ವರನನ್ನುದ್ದೇಶಿಸಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾನೆ. ತಾತ, ತಂದೆಯರಂತೆ ಶೃಂಗಾರ, ಆಧ್ಯಾತ್ಮಿಕ ಸಂಕೀರ್ತನೆಗಳನ್ನು ಬರೆದಿದ್ದಾನೆ. ಈತನ ನಂತರ ತೆಲುಗು ಕೀರ್ತನಕಾರರ ಪರಂಪರೆಯಲ್ಲಿ ಕೇಳಿ ಬರುವ ಇದೇ ವಂಶದ ಮತ್ತೊಂದು ತಾಳ್ಳಪಾಕ ತಿರುವೇಂಗಳನಾಥ. ಈತನು ಸಹ ಅನೇಕ ಕೀರ್ತನೆಗಳನ್ನು ರಚಿಸುವುದರ ಮೂಲಕ ತೆಲುಗು ಕೀರ್ತನ ಪರಂಪರೆಯನ್ನು ಮುಂದುವರೆಸಿದನು.

ಕಂಚೆರ್ಲ ಗೋಪನ್ನ ನಂತರ ಕಾಲದಲ್ಲಿ ಕಾಣಿಸಿಕೊಳ್ಳುವ ಪ್ರಮುಖ ಕೀರ್ತನಕಾರ. ಶ್ರೀರಾಮ ನವಮಿಯ ದಿನದಂದು ಈತನ ಕೀರ್ತನೆಗಳು ಆಂಧ್ರದಾದ್ಯಂತ ಪ್ರತಿಧ್ವನಿಸುತ್ತವೆ. ಈತನು ಸಂಗೀತ ಕ್ಷೇತ್ರಕ್ಕೂ ಅಮೂಲ್ಯವಾದ ಕಾಣಿಕೆಯನ್ನು ನೀಡಿದ್ದಾನೆ. ಆನಂದಭೈರವಿಯನ್ನು ಮೊದಲು ಬಳಸಿದ್ದು ಈತನೇ ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದೇ ಕಾಲಾವಧಿಯಲ್ಲಿದ್ದು ಕರ್ನಾಟಕ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದ ಮತ್ತೊಬ್ಬ ತೆಲುಗು ಕೀರ್ತನಕಾರ ಕ್ಷೇತ್ರಯ್ಯ. ಮೊವ್ವ ವರದಯ್ಯ ಎಂಬುದು ಇವರ ಮೂಲ ಹೆಸರು. ಈತನು ಸಾವಿರಾರು ಕೀರ್ತನೆಗಳನ್ನು ರಚಿಸಿದಂತೆ ಹೇಳಲಾಗುತ್ತದೆಯಾದರೂ ದೊರೆತದ್ದು ಮಾತ್ರ ನೂರರ ಸಂಖ್ಯೆಯಲ್ಲಿ. ಕರ್ನಾಟಕ ಸಂಗೀತವನ್ನು ಅತ್ಯುನ್ನತ ಸ್ಥಾಯಿಗೆ ತೆಗೆದುಕೊಂಡು ಹೋದ ಮತ್ತೊಬ್ಬ ಕೀರ್ತನಕಾರ ತ್ಯಾಗರಾಜ. ತ್ಯಾಗರಾಜ, ಶ್ಯಾಮಶಾಸ್ತ್ರಿ ಮತ್ತು ಮುತ್ತುಸ್ವಾಮಿ ದೀಕ್ಷಿತರನ್ನು ಸಂಗೀತ ತ್ರಿಮೂರ್ತಿಗಳೆಂದು ಕರೆಯಲಾಗುತ್ತದೆ. ಶ್ರೀರಾಮನ ಭಕ್ತರಾದ ಇವರು ಭಕ್ತಿ ಕೀರ್ತನೆಗಳ ಜೊತೆಗೆ ಸಾಮಾಜಿಕ ಕಳಕಳಿ, ನೀತಿ, ಉಪದೇಶದಂತಹ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವರಷ್ಟೇ ಅಲ್ಲದೆ ಸಿದ್ಧೇಂದ್ರಯೋಗಿ, ಸಾರಂಗಪಾಣಿ, ಮುನಿಪಲ್ಲೆ ಸುಬ್ರಹ್ಮಣ್ಯ ಕವಿ – ಹೀಗೆ ಇನ್ನು ಅನೇಕರು ತೆಲುಗು ಕೀರ್ತನ ಪರಂಪರೆಯನ್ನು ಬೆಳೆಸಿದ್ದಾರೆ, ಬೆಳಗಿಸಿದ್ದಾರೆ.

ಈ ಎರಡು ಭಾಷಿಕರ ಕೀರ್ತನೆಗಳನ್ನು ಗಮನಿಸಿದಾಗ ಅನೇಕ ಸಾಮ್ಯತೆಗಳು ನಮಗೆ ಕಂಡುಬರುತ್ತವೆ. ಸರಳ, ಸುಂದರ ಮತ್ತು ಸಂಗೀತ ಮಾಧುರ್ಯದ ಮೂಲಕ ಭಕ್ತಿ ಸಾಹಿತ್ಯಕ್ಕೆ ಇವರುಗಳು ಹೊಸ ರೂಪವನ್ನು ಕೊಟ್ಟರು. ಬದುಕನ್ನು ವಾಸ್ತವವಾಗಿ ಅನುಭವಿಸುತ್ತಲೇ, ಅದರಲ್ಲಿನ ಸಾರವನ್ನು ಅರಿತುಕೊಂಡು, ಸಮಸ್ಯೆಗಳನ್ನು ಕಂಡುಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳಬಯಸಿದರು. ತಾವು ಅನುಭವಿಸಿದ ಕಂಡುಕೊಂಡ ಸತ್ಯಸಂಗತಿಗಳನ್ನು ತಾವು ಮಾತ್ರ ಅನುಭವಿಸಿ ಸ್ವಾರ್ಥಿಗಳೆಸಿಕೊಳ್ಳಲಿಲ್ಲ. ಅದನ್ನು ಇತರರಿಗೂ ತಿಳಿಸಬೇಕೆನ್ನುವ ಹಂಬಲದೊಂದಿಗೆ ಸಂಚಾರಿಗಳಾಗಿ ತಿರುಗಿ, ಹಾಡಿನ ರೂಪದಲ್ಲಿ ಹಾಡಿ ಹೇಳಿದರು. ಈ ಎರಡು ಭಾಷೆಯ ಕೀರ್ತನಕಾರರನ್ನು ಕುರಿತು ಆರ್ವಿಯಸ್ ಸುಂದರಂ ಹೀಗೆನ್ನುತ್ತಾರೆ; "ಕನ್ನಡ ಹರಿದಾಸ ಸಾಹಿತ್ಯ ಒಂದು ಪಂಥವಾಗಿ ಬೆಳೆದು ಬಂದಂತಹವು. ಮಾಧ್ವ ಮತದ ಹಿನ್ನೆಲೆಯಲ್ಲಿ, ದೀಕ್ಷಾಬದ್ಧರಾದ ಕೀರ್ತನಕಾರರ ರಚನೆಗಳಾಗಿ, ಗುರುಗಳ ಅನುಗ್ರಹದಿಂದ ಬಂದ ಅಂಕಿತನಾಮಗಳಿಂದ

ಕೂಡಿ ಹರಿದಾಸ ಸಾಹಿತ್ಯ ಬೆಳೆದು ಬಂದಿದೆ. ತೆಲುಗು ಕೀರ್ತನಕಾರರು ಹೆಚ್ಚು ಸ್ವತಂತ್ರರು. ಅವರಿಗೆ ಧರ್ಮ ನಿರ್ಬಂಧವಿಲ್ಲ. ದೀಕ್ಷೆಯ ಹಿನ್ನೆಲೆಯಿಲ್ಲ. ಇತರ ಪರಿಮಿತಿಗಳಿಲ್ಲ. ಈ ಕಾರಣದಿಂದ ಶೃಂಗಾರ ಕೀರ್ತನೆಗಳಿಗೆ ಕನ್ನಡದಲ್ಲಿ ಆಸ್ಪದವಿಲ್ಲ. ಭಕ್ತಿಯೂ ಶೃಂಗಾರ ರಸಭರಿತವಾಗಿರಬಹುದೆಂಬ ರಸಿಕತೆ ತೆಲುಗು ಕೀರ್ತನಕಾರರದು."

ಮುಖ್ಯವಾಗಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ತೆಲುಗಿನ ಕೀರ್ತನಕಾರ ತ್ಯಾಗಯ್ಯನ ತಾಯಿ ಆತನಿಗೆ ಅನ್ನಮಾಚಾರ್ಯರ ಕೀರ್ತನೆಗಳೊಂದಿಗೆ ಪುರಂದರದಾಸರ ಕೀರ್ತನೆಗಳನ್ನು ಹೇಳಿಕೊಡುತ್ತಿದ್ದಳಂತೆ. ಇದು ಕನ್ನಡ ಕೀರ್ತನೆಗಳು ತೆಲುಗು ನಾಡಿನಲ್ಲಿ ಪ್ರಚಲಿತದಲ್ಲಿ ಇದ್ದವೆಂಬುದಕ್ಕೆ ಸಾಕ್ಷಿ. ಬಹುಶಃ ಅನ್ನಮಯ್ಯ ಮತ್ತು ಪುರಂದರದಾಸರ ಭೇಟಿಯಿಂದ ಅವರ ಕೀರ್ತನೆಗಳು ತೆಲುಗು ನಾಡಿನಲ್ಲಿ ಹೆಚ್ಚು ಜನಪ್ರಿಯತೆ ಪಡೆದಿರಬಹುದು. ಇಂದಿಗೂ ಕರ್ನಾಟಕ ಮತ್ತು ತೆಲುಗು ರಾಜ್ಯಗಳ ಗಡಿಭಾಗದಲ್ಲಿ ಎರಡೂ ಭಾಷೆಯ ಕೀರ್ತನೆಗಳು ಜನರ ನಾಲಿಗೆಯ ಮೇಲೆ ನಲಿಯುತ್ತಿವೆ.

* * *

ಕನ್ನಡ ಹಾಗೂ ತೆಲುಗು ಕೀರ್ತನಕಾರರಲ್ಲಿ ತಾತ್ತ್ವಿಕ ದೃಷ್ಟಿಯಿಂದಲೂ ಅನೇಕ ಹೋಲಿಕೆಗಳಿವೆ. ಎರಡೂ ಭಾಷೆಯ ಕೀರ್ತನಕಾರರು ಅನುಸರಿಸಿದ ಭಕ್ತಿಯ ಮಾರ್ಗಗಳಲ್ಲಿ ಭಿನ್ನತೆ ಇರುವುದು ನಿಜ. ಆದರೆ ಆ ಭಕ್ತಿಯ ಅಭಿವ್ಯಕ್ತಿಗೆ, ಅದರ ತಾತ್ತ್ವಿಕತೆಗೆ ಪ್ರೇರೇಪಣೆಯಾದದ್ದು ಮಾತ್ರ ಒಂದೇ ನೆಲೆ. ಅವರಿಗೆ ಹರಿಯೇ ಸರ್ವೋತ್ತಮ. ಆ ಮೂಲಕವೇ ಜೀವನದ ಶ್ರೇಷ್ಠ ಸತ್ಯವನ್ನು ಕಾಣಲು ಪ್ರಯತ್ನಿಸಿದವರು. ಇನ್ನೊಂದು ವೈಶಿಷ್ಟ್ಯವೆಂದರೆ ದೈವೀ ಶಕ್ತಿಯೊಂದಿಗೆ ಮಾನವೀಯ ಸಂಬಂಧವನ್ನು ಬೆಸೆದಿರುವುದು. "ದಾಸನ ಮಾಡಿಕೋ ಎನ್ನ ಸ್ವಾಮಿ, ಸಾಸಿರ ನಾಮದ ವೆಂಕಟರಮಣ" ಎಂದು ತಾವು ಹರಿಗೆ ದಾಸರಾದದ್ದು, ದಾಸ್ಯ ಭಾವನೆಯ ಜೊತೆಗೆ ಹರಿಯೆಡೆಗಿನ ವಾತ್ಸಲ್ಯಭಾವವನ್ನು ಒಳಗೊಂಡಿದೆ. "ಮಾನವ ಜನ್ಮ ಶ್ರೇಷ್ಠ ಇದನ್ನು ವ್ಯರ್ಥ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ" ಎಂದು ತಿಳುವಳಿಕೆ ಮೂಡಿಸಿದ್ದು ಎರಡು ಭಾಷೆಯ ಕೀರ್ತನಕಾರರ ಕೀರ್ತನೆಗಳಲ್ಲಿದೆ.

ಎರಡೂ ಭಾಷೆಯ ಕೀರ್ತನೆಗಳನ್ನು ಅವಲೋಕಿಸಿದಾಗ ಬಹುಪಾಲು ಕೀರ್ತನ ಕಾರರು ಧ್ಯಾನ ಪೂಜೆಗಳೊಂದಿಗೆ ಆತ್ಮೋದ್ಧಾರ ಮತ್ತು ಮೋಕ್ಷ ಸಾಧನೆಯೆಂದು ಭಾವಿಸಿರುವುದು ನಿಚ್ಚಳವಾಗಿದೆ. ಅವರು ತಮ್ಮ ಕೀರ್ತನೆಗಳ ಮೂಲಕ ಧರ್ಮದ ತಾತ್ತ್ವಿಕ ತಿರುಳನ್ನು ಸಹಜ ಸುಂದರ ಹಾಗೂ ಸರಳವಾಗಿ ಸಾಮಾನ್ಯರಿಗೂ ತಿಳಿಯು ವಂತೆ ಹಾಡಿ ಹೇಳಿದ್ದಾರೆ. ಮುಕ್ತಿಗೆ ವ್ಯಕ್ತಿಯ ಜಾತಿ, ವರ್ಗ, ಲಿಂಗಗಳು ಮುಖ್ಯವಲ್ಲ ಎಂಬುದನ್ನು ಸಾರಿದರು. ಭಕ್ತನ ಪಾರಮ್ಯವನ್ನು ಸಾರುವ ಕೀರ್ತನೆಗಳು ಹಲವು ಬಾರಿ ಬದುಕಿನ ಅಸ್ತಿತ್ತ್ವದ ನೆಲೆಯನ್ನೇ ಆದರ್ಶಮಯವನ್ನಾಗಿ ಮಾಡಿಕೊಂಡಿವೆ.



ಮುಖ್ಯವಾಗಿ ಶ್ರವಣ, ಕೀರ್ತನ, ಸ್ಮರಣೆ, ಪಾದಸೇವೆ, ಅರ್ಚನೆ, ವಂದನೆ, ದಾಸ್ಯ, ಸಖ್ಯ, ಆತ್ಮನಿವೇದನೆ ಎನ್ನುವ ನವವಿಧ ಭಕ್ತಿಗಳು ತೆಲುಗು ಕೀರ್ತನಕಾರರಲ್ಲಿ ಕಂಡು ಬರುತ್ತವೆ. ತೆಲುಗು ಕೀರ್ತನಕಾರರಿಂದ ಮುಂಚೆ ತೆಲುಗು ನಾಡಿನಲ್ಲಿ ಪ್ರಚಾರದಲ್ಲಿದ್ದ ಭಕ್ತಿಯ ಪ್ರಭಾವವು ಇವರ ಮೇಲಾಗಿರುವುದು ಸ್ಪಷ್ಟವಾಗಿದೆ. ಅದರಲ್ಲೂ ಮುಖ್ಯವಾಗಿ ಬಮ್ಮೆರ ಪೋತನನ ಭಕ್ತಿ ತತ್ತ್ವದ ಪ್ರಭಾವ ವಿಶೇಷವಾದುದು. ಭಕ್ತಿಗೆ ಮತ್ತೊಂದು ಹೆಸರಾದ ಪೋತನನು ಸಂಸ್ಕೃತ ಭಾಗವತವನ್ನು ಆಂಧ್ರೀಕರಿಸಿದವನು. ಆ ಕಾವ್ಯದಲ್ಲಿ ಭಕ್ತಿಯು ಪ್ರವಾಹದೋಪಾದಿಯಲ್ಲಿ ಹರಿದಿದೆ. ತೆಲುಗಿನ ಪ್ರತಿ ಮನ ಹಾಗೂ ಮನೆಯಲ್ಲಿ ಪೋತನನು ಸ್ಥಾನವನ್ನು ಪಡೆದಿದ್ದಾನೆ. ಅಂತಹ ಭಕ್ತಿ ಕವಿಯ ಪ್ರಭಾವ ನಂತರ ಬಂದ ಅನ್ನಮಯ್ಯ, ರಾಮದಾಸು, ಕ್ಷೇತ್ರಯ್ಯ, ತ್ಯಾಗರಾಜು ಮೊದಲಾದ ಕೀರ್ತನಕಾರರ ಮೇಲಾಗಿರುವುದು ಸ್ಪಷ್ಟ. ಕನ್ನಡ ಕೀರ್ತನಕಾರರಲ್ಲೂ ಈ ಬಗೆಯ ಭಕ್ತಿಯ ವಿಧಗಳನ್ನು ಕಾಣಬಹುದಾದರೂ ತೆಲುಗು ಕೀರ್ತನಕಾರರಲ್ಲಿನ ಭಕ್ತಿಯ ತೀವ್ರತೆಯಷ್ಟು ಕನ್ನಡದಲ್ಲಿ ತೀವ್ರವಾಗಿಲ್ಲ. ಕನ್ನಡ ಕೀರ್ತನಕಾರರು ಒಂದೆಡೆ ನೆಲೆನಿಂತವರಲ್ಲ. ಅಥವಾ ಒಂದೇ ದೇವಸ್ಥಾನಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳಲಿಲ್ಲ. ಒಂದೇ ದೇವರನ್ನು ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡಾಗಲೂ ಅವರು ಸಂಚಾರಿಗಳಾಗಿ ಭಕ್ತಿಯ ಭಾವವನ್ನು ಅಭಿವ್ಯಕ್ತಿಸಿದರು. ಆದರೆ ತೆಲುಗು ಕೀರ್ತನಕಾರರರಲ್ಲಿ ಅನ್ನಮಯ್ಯ ತಿರುಪತಿ ವೆಂಕಟೇಶ್ವರನಿಗೆ, ರಾಮದಾಸು ಭದ್ರಾಚಲ ರಾಮಯ್ಯ ಹೀಗೆ ಮುಂತಾಗಿ ಒಂದೇ ದೇವರಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಹಾಗಂತ ಇವರು ಇತರ ದೇವತೆಗಳ ಸ್ತುತಿಯನ್ನು ಮಾಡಿಲ್ಲವೆಂದಾಗಲಿ, ಒಂದಿಷ್ಟು ಪ್ರಮಾಣದಲ್ಲಿ ಸಂಚಾರವನ್ನು ಮಾಡಿಲ್ಲವೆಂದಾಗಲಿ ಅಲ್ಲ. ತಮ್ಮ ಬದುಕಿನ ಬಹುಪಾಲು ಸಮಯವನ್ನು ತಾವು ಆರಾಧಿಸಿದ ದೈವಕ್ಕೇ ಮೀಸಲಿರಿಸಿದರು. ತತ್ಪರಿಣಾಮವಾಗಿ ಭಕ್ತಿಯ ವೈವಿಧ್ಯತೆ ಕನ್ನಡ-ತೆಲುಗು ಕೀರ್ತನೆಗಳಲ್ಲಿ ಭಿನ್ನವಾಗಿ ಕಾಣಿಸಿಕೊಂಡದ್ದುಂಟು.

ಕನ್ನಡದಲ್ಲಿ ದಾಸಕೂಟ ಮತ್ತು ವ್ಯಾಸಕೂಟ ಪರಂಪರೆಯಂತೆ ತೆಲುಗಿನಲ್ಲಿ ಭಿನ್ನ ತಾತ್ತ್ವಿಕ ನೇಪಥ್ಯದ ಪರಂಪರೆಯಿಲ್ಲದಿದ್ದರೂ, ಅನ್ನಮಯ್ಯ ಮತ್ತು ಕ್ಷೇತ್ರಯ್ಯರ ಕಾಲಘಟ್ಟವನ್ನು ಅನುಸರಿಸಿ ಅವರು ತೆಲುಗು ಕೀರ್ತನ ಸಾಹಿತ್ಯವನ್ನು ಎರಡು ಪ್ರತ್ಯೇಕ ಕಾಲಘಟ್ಟದಲ್ಲಿ ತಮ್ಮ ಹೆಗಲ ಮೇಲೆ ಹಾಕಿಕೊಂಡು ನಡೆಸಿದವರು. ಕಾಲಕ್ಕನುಗುಣವಾಗಿ ಕಾಲಮಾನದ ಒತ್ತಾಸೆಗನುಗುಣವಾಗಿ ಕೆಲ ಭಿನ್ನತೆಗಳಿರುವುದು ಸತ್ಯ. ಸಂಗೀತ ಮತ್ತು ಸಾಹಿತ್ಯದ ಮೂಲಕ ರಸಾನಂದವನ್ನುಂಟುಮಾಡುತ್ತಾ ಜಗತ್ತಿಗೆ ಹಿತವನ್ನು ಬಯಸುವ ಹಂಬಲ ಅವರ ಕೀರ್ತನೆಗಳಲ್ಲಿದೆ. ಇಬ್ಬರೂ ಶ್ರೇಷ್ಠ ಕೀರ್ತನೆಗಳನ್ನು ರಚಿಸಿದವರೆ. ವಸ್ತುವಿನ ಬಗ್ಗೆ, ಕೀರ್ತನೆಗಳ ಶಿಲ್ಪದ ಬಗ್ಗೆ ಅವಲೋಕಿ ಸಿದರೆ ಅನ್ನಮಯ್ಯನಲ್ಲಿ ವಸ್ತುವಿನ ವಿಸ್ತೃತತೆ ಅಗಾಧವಾದುದು. ಕ್ಷೇತ್ರಯ್ಯನಲ್ಲಿ ಭಾವಸೌಂದರ್ಯ, ಪದಮಾಧುರ್ಯ ಉನ್ನತ ಸ್ಥಾಯಿಯಲ್ಲಿದ್ದರೆ, ಅನ್ನಮಯ್ಯನಲ್ಲಿ

ಭಾವುಕತೆ, ಪದಪ್ರಯೋಗ ರೀತಿ, ಕೀರ್ತನೆಗಳ ಶಿಲ್ಪ ವಿಭಿನ್ನವಾದುದು. ಇಬ್ಬರೂ ಒಂದೇ ವಸ್ತುವಿನ ಕುರಿತು ಕೀರ್ತನೆ ರಚಿಸಿದ್ದಾಗಲೂ ಕೆಲ ಆಯಾಮಗಳಲ್ಲಿ ಭಿನ್ನತೆ ಸ್ಪಷ್ಟವಾಗಿ ಕಾಣಿಸುತ್ತದೆ.

ತೆಲುಗು-ಕನ್ನಡ ಕೀರ್ತನಕಾರರ ಇನ್ನೊಂದು ವೈಶಿಷ್ಟ್ಯವೆಂದರೆ ಸಮಾಜದಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೂ ಅಕ್ಷರಾಕೃತಿಯನ್ನು ನೀಡುವ ಕೆಲಸ ಮಾಡಿದುದು. ಜನರಲ್ಲಿನ ವಿಷಯ ಲೋಲುಪತೆ, ಡಾಂಭಿಕಾಚಾರಗಳು, ದುರಾಚಾರ ಗಳು, ಅಸಮಾನತೆ, ಕಪಟತನಗಳನ್ನು ಖಂಡಿಸಿದ್ದಾರೆ. ಪ್ರತಿಯೊಬ್ಬರೂ ಸಂಸಾರ ದಲ್ಲಿದ್ದುಕೊಂಡೇ ಸದಾಚಾರಗಳನ್ನು ಪಾಲಿಸುತ್ತಾ, ಸತ್ತ್ವವರ್ತನೆಯೊಂದಿಗೆ, ನಿಯಮ-ನಿಷ್ಠೆಯೊಂದಿಗೆ ಭಗವದ್ಭಕ್ತಿಯನ್ನು ಹೊಂದಬೇಕು ಎಂದು ಸಾರಿದ್ದಾರೆ.

> ಚಕ್ಕನಿ ರಾಜಮಾರ್ಗಮುಲುಂಡುಗ
> ಸಂದುಲ ದೂರನೇಲ? ಓ ಮನಸಾ
> ಚಕ್ಕನಿ ಪಾಲು ಮೀಗಡ ಯುಂಡಗ
> ಚೇಯನಿ ಗಂಗಾ ಸಾಗರ ಮೇಲ

ಎನ್ನುತ್ತಾ ಅನ್ನಮಯ್ಯ ಜ್ಞಾನಬೋಧನೆಯ ಮೂಲಕ ಸನ್ಮಾರ್ಗವನ್ನು ತೋರಿಸಿ ಕೊಟ್ಟಿದ್ದಾನೆ. ಕಣ್ಣಮುಂದಿನ ಬೆಳಕನ್ನು ನೋಡದೆ ಬೆನ್ನ ಹಿಂದಿನ ಬೆಳಕಿಗಾಗಿ ಪರಿತಪಿಸುವ ಮನುಷ್ಯನ ಸ್ವಭಾವವನ್ನು ಅವರು ಅತ್ಯಂತ ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಹಾಗೆಯೇ ಕ್ಷೇತ್ರಯ್ಯ –

> ಊರಕಯೇ ಗಲ್ಗುನ ರಾಮುನಿ ಭಕ್ತಿ
> ಸಾರೇಕುನು ಸಂಸಾರಮನಿ ಜೊಚ್ಚಿ
> ಸಾರಮನಿ ಎಂಚುವಾರಿ ಮನಸುನ

ಎನ್ನುತ್ತಾ ತನ್ನದೇ ಶೈಲಿಯಲ್ಲಿ ಭಕ್ತಿಯನ್ನು ಹೊರಹಾಕಿದ್ದಾನೆ. ಎರಡೂ ಭಾಷೆಯ ಕೀರ್ತನಕಾರರು ಶ್ರೀಹರಿಯೇ ಸರ್ವೋತ್ತಮನೆಂದು, ಪರಮ ಪುರುಷಾರ್ಥವೆಂದು, ಜ್ಞಾನದ ಚರಮಸೀಮೆಯೆಂದು ಹಾಡಿ ಹೊಗಳಿದ್ದಾರೆ. ಭಕ್ತಿಯ ಜೊತೆಗೆ ಕರ್ಮವನ್ನು ಸಮನ್ವಯಗೊಳಿಸುತ್ತಾ ತಮ್ಮ ತಾತ್ತ್ವಿಕತೆಯನ್ನು ರೂಪಿಸಿಕೊಂಡವರು ಕೀರ್ತನಕಾರರು. 'ಜೀವಿಸಬೇಕು ಇದ್ದು ಜಯಿಸಬೇಕು' ಎನ್ನುವ ತಾತ್ತ್ವಿಕ ಸೂತ್ರ ಇವರುಗಳ ಕೀರ್ತನೆಗಳಲ್ಲಿದೆ. ಹಾಗೆಯೇ ಮನುಷ್ಯನು ತನ್ನ ಕರ್ಮಫಲವನ್ನು ತಾನೇ ಅನುಭವಿಸ ಬೇಕು ಎಂಬ ಸಂದೇಶವೂ ಇದೆ. ಜೊತೆಗೆ ಜ್ಞಾನದ ಬಗೆಗಿನ ಹೊಸ ಚಿಂತನೆಯ ಮಾದರಿಯೂ ಕೀರ್ತನೆಗಳಲ್ಲಿದೆ. ಅದರಲ್ಲೂ ಕನಕದಾಸರ 'ಅಡಿಗೆಯನ್ನು ಮಾಡ ಬೇಕಣ್ಣ, ನಾನೀಗ ಜ್ಞಾನದಡಿಗೆಯನ್ನು ಮಾಡಬೇಕಣ್ಣ' ಎನ್ನುವಲ್ಲಿ ಅಡುಗೆ ಮತ್ತು



ಹಸಿವಿನ ಅರ್ಥದ ಪರಾಕಾಷ್ಠತೆಯಿದೆ. ಮನುಷ್ಯ ತನ್ನನ್ನು ತನ್ನಿಂದಲೇ ಸಂಪಾದಿಸಿ ಕೊಳ್ಳಬೇಕೆಂಬ ಸಂಕೇತವೂ ಇದಾಗಿದೆ. ಅವರದೇ ಇನ್ನೊಂದು ಕೀರ್ತನೆ "ಹೃದಯ ಹೊಲವನು ಮಾಡಿ, ತನುವ ನೇಗಿಲ ಮಾಡಿ ನಾಲಗೆಯ ಕೂಡಿಗೆ ಮಾಡಿ ಬಿತ್ತಿರಯ್ಯ' ಎನ್ನುವುದೂ ಸಹ ಅಂತರಂಗ ಮತ್ತು ಬಹಿರಂಗದ ಅನುಸಂಧಾನವನ್ನು ಸೂಚಿಸುತ್ತದೆ.

ಕೀರ್ತನಕಾರರ ಮತ್ತೊಂದು ವೈಶಿಷ್ಟ್ಯವೆಂದರೆ ತಮ್ಮನ್ನು ತಾವು ಶುದ್ಧಿಗೊಳಿಸಿ ಕೊಳ್ಳುವ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಯಾರೂ ಅನ್ಯರನ್ನು ನಂಬಬೇಡಿ ಎಂಬ ನಿಲುವು ಅವರಲ್ಲಿದೆ. ತನ್ನತನ ಎನ್ನುವುದು ಬದುಕಿನಲ್ಲಿ ಬಹುಮುಖ್ಯವಾದುದು. ಆ ಹಿನ್ನೆಲೆಯಲ್ಲಿಯೇ ಕನಕದಾಸರು ಹೇಳಿದಂತೆ –

> ಅರಿಗಾರಿಲ್ಲ ಆಪತ್ಕಾಲದೊಳಗೆ
> ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೆ
> ಹಸಿದು ಬಳಲುವಾಗ ಹಗೆ ಕೈಗೆ ಸಿಲುಕಿದಾಗ
> ದೆಸೆಗೆಟ್ಟು ಅಧಿಕ ವ್ಯಾಧಿಯಲಿ ಇರುವಾಗ
> ಅಸಮಾನನಾದಾಗ ಅತಿ ಭೀತಿಗೊಂಡಾಗ
> ಬಿಸಜನಾಭನ ನಾಮ ನೆನೆ ಕಂಡ್ಯ ಮನವೆ

ಎಂಬ ಸಾಲುಗಳು ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಇರುವ ದಾರಿಯ ಕುರಿತು ವಿವರಿಸುತ್ತವೆ. ಯಾರೋ ಹೇಳಿದರೆಂದು ಕೇಳುವುದಾಗಲಿ, ಮತ್ತಾರದೋ ಸಿದ್ಧಾಂತಕ್ಕೆ ಬದಲಾಗುವುದಾಗಲಿ ಮಾಡುವುದಕ್ಕಿಂತ ನಿನ್ನದೇ ಆದ ಸಿದ್ಧಾಂತವನ್ನು ರೂಪಿಸಿಕೋ ಎನ್ನುವುದು ಅವರ ಸ್ಪಷ್ಟ ಸಂದೇಶ. ಸಾಮಾಜಿಕ ವಿಕಾರಗಳಾದ ಶೋಷಣೆ, ಕ್ರೌರ್ಯ, ಹಿಂಸೆ, ಅನ್ಯಾಯ, ಅನೀತಿ, ಅಧರ್ಮಗಳಂತಹ ಮಾಲಿನ್ಯಗಳಿಂದ ಮನಸ್ಸನ್ನು ಮುಕ್ತಗೊಳಿಸಿಕೊಳ್ಳಬೇಕು. ಅಂದಾಗ ಮಾತ್ರ ಮನಸ್ಸು ಪಾವಿತ್ರತೆಯನ್ನು ಪಡೆದುಕೊಳ್ಳಲು ಸಾಧ್ಯ.

ಒಟ್ಟಾರೆಯಾಗಿ ಕನ್ನಡ ಮತ್ತು ತೆಲುಗು ಕೀರ್ತನಕಾರರು ಬಹುತೇಕ ಸಮಾನ ಅಂಶಗಳನ್ನು ತಮ್ಮ ಕೀರ್ತನೆಗಳಲ್ಲಿ ಹೊರಹಾಕಿದ್ದಾರೆ. ಇಬ್ಬರ ಉದ್ದೇಶಗಳು ಒಂದೇ ಆಗಿದ್ದರೂ ಅದನ್ನು ಅಭಿವ್ಯಕ್ತಿಸುವಲ್ಲಿ ತಮ್ಮ ಪ್ರಾದೇಶಿಕತೆಗೆ ಅನುಸಾರವಾಗಿ, ಭಾಷೆಯ ಭಾವಕ್ಕೆ ಅನುಗುಣವಾಗಿ, ಸಂಗೀತದ ಲಯಕ್ಕೆ ಬದ್ಧರಾಗಿ ಕೀರ್ತನೆಗಳನ್ನು ರಚಿಸಿದ್ದಾರೆ. ಇವರುಗಳು ರಚಿಸಿದ ಕೀರ್ತನೆಗಳು ಇಂದಿಗೂ ಪ್ರತಿ ಊರಿನ ಭಜನೆ ಮೇಳಗಳಲ್ಲಿ ಜಾತಿ, ಮತ ಭೇದವಿಲ್ಲದೆ ಹಾಡಲ್ಪಡುತ್ತವೆ. ಕೀರ್ತನ ಸಾಹಿತ್ಯ ಒಂದು ವರ್ಗಕ್ಕೆ ಸೀಮಿತವಾಗಿಲ್ಲ, ಅದು ಎಲ್ಲ ವರ್ಗಗಳ ಗುರುಮನೆ, ಅರಮನೆ. ಸಮಾಜದ ಮುನ್ನೆಲೆಯಲ್ಲಿರುವವರಿಂದ ಹಿಡಿದು, ಹಿಂದುಳಿದವರು, ದಲಿತರಾದಿಯಾಗಿ ಎಲ್ಲರೂ

ತಮ್ಮ ತಮ್ಮ ಮಠಗಳಲ್ಲಿ, ಗುಡಿ–ಗುಂಡಾರಗಳಲ್ಲಿ ಕೀರ್ತನೆಗಳನ್ನು ಹಾಡುತ್ತಾರೆ. ಅಂತಹ ಸಾರ್ವತ್ರಿಕ, ಸಾರ್ವಕಾಲಿಕ ಗುಣಗಳನ್ನು ಈ ಕೀರ್ತನೆಗಳು ಒಳಗೊಂಡಿವೆ. ಭಕ್ತಿಯ ಮೂಲಕ ಮಾನವನ ಮುಕ್ತಿಯನ್ನು ತಿಳಿಸುವ ಕೀರ್ತನೆಗಳು, ಸಾಮಾಜಿಕ ಸಾಮರಸ್ಯದ ಬದುಕಿನ ಆಶಯವನ್ನು ಒಳಗೊಂಡಂಥವುಗಳು. ಒಟ್ಟಿನಲ್ಲಿ ಕನ್ನಡ ಮತ್ತು ತೆಲುಗು ಕೀರ್ತನಕಾರರ ಮುಖ್ಯ ಉದ್ದೇಶ ತಾವು ಸಾರುವ ಸತ್ಯ ಜನರ ಮನಸ್ಸನ್ನು ಮುಟ್ಟುವುದು. ಈ ನಿಟ್ಟಿನಲ್ಲಿ ಕನ್ನಡ ಮತ್ತು ತೆಲುಗು ಕೀರ್ತನಕಾರರು ಯಶಸ್ವಿಯಾಗಿದ್ದಾರೆಂದೇ ಹೇಳಬಹುದು.

◆◆



ಕನ್ನಡ-ತೆಲುಗು ಸಾಂಸ್ಕೃತಿಕ ಬಾಂಧವ್ಯ

ಶಾಸ್ತ್ರೀಯ ಸ್ಥಾನಮಾನವನ್ನು ಪಡೆದ ಕನ್ನಡ-ತೆಲುಗು ಭಾಷೆಗಳ ಬಾಂಧವ್ಯ ಇಂದು ನಿನ್ನೆಯದಲ್ಲ. ಇವು ಭೌಗೋಳಿಕ ಗಡಿಗಳಲ್ಲಿ ಪರಸ್ಪರ ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ ಕೊಡುಕೊಳ್ಳುವಿಕೆಗಳ ಮೂಲಕ ಅದನ್ನು ಮತ್ತಷ್ಟು ಬಲಪಡಿಸಿವೆ. ಇಂತಹ ಕೊಡು ಕೊಳ್ಳುವಿಕೆಗಳು ಆಯಾ ರಾಜ್ಯಗಳನ್ನು ಸಮೃದ್ಧಗೊಳಿಸಿವೆ ಮತ್ತು ಶ್ರೀಮಂತಗೊಳಿಸಿವೆ. ಈ ಮಾತನ್ನು 'ಕನ್ನಡ-ತೆಲುಗು ಸಾಂಸ್ಕೃತಿಕ ಬಾಂಧವ್ಯ' ಕೃತಿಯು ಆಧುನಿಕ ಸಂದರ್ಭದಲ್ಲಿಟ್ಟು ಮತ್ತಷ್ಟು ಸ್ಪಷ್ಟಪಡಿಸಿದೆ. ಕನ್ನಡ-ತೆಲುಗಿನ ಅನೇಕ ಲೇಖಕರು, ಸಾಹಿತಿಗಳು, ವಿದ್ವಾಂಸರು, ಸಂಶೋಧಕರು ಬರೆದ ಲೇಖನಗಳನ್ನೊಳಗೊಂಡ ಈ ಸಂಪಾದನಾ ಕೃತಿಯು ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ವಲಯದಲ್ಲಿ ಒಂದು ಉತ್ತಮ ಪರಾಮರ್ಶನ ಗ್ರಂಥವಾಗಲಿದೆ.

ಈ ಸಂಪಾದನಾ ಕೃತಿಯಲ್ಲಿ ಕನ್ನಡ-ತೆಲುಗು ಸಂಸ್ಕೃತಿ, ಸಾಹಿತ್ಯ, ಜನಪದ, ಕಲೆ, ರಂಗಭೂಮಿ, ಯಕ್ಷಗಾನ, ಅನುವಾದ ಸಾಹಿತ್ಯ, ರಾಮಾಯಣ-ಮಹಾಭಾರತಗಳ ಕುರಿತಂತೆ ಬಂದ ಬಹುಪಠ್ಯಗಳ ಸಮೀಕ್ಷೆಗಳು-ಎರಡೂ ಸಾಹಿತ್ಯ ವಲಯಗಳ ಅನೇಕ ಶಿಸ್ತುಗಳ ಅಧ್ಯಯನವನ್ನು ವಿಸ್ತರಿಸಿವೆ. ಪ್ರಾಚೀನದಿಂದ ಹಿಡಿದು ಆಧುನಿಕತೆಯವರೆಗೆ ಚಾಚಿಕೊಂಡ ಈ ಲೇಖನಗಳ ಅಧ್ಯಯನದ ಹರವು ಚರ್ವಿತ ಚರ್ವಣ ಚರ್ಚೆಗಳಿಂದ ಮುಕ್ತವಾಗಿದೆ. ಅಲ್ಲದೆ ಅಂಚಿಗೆ ತಳ್ಳಲ್ಪಟ್ಟ ಮತ್ತು ಅಲಕ್ಷಿತ ಅನೇಕ ವಿಷಯಗಳು ಈ ಸಂಪಾದನಾ ಕೃತಿಯಲ್ಲಿ ಮುನ್ನೆಲೆಯಲ್ಲಿ ಚರ್ಚಿಸಲ್ಪಟ್ಟಿವೆ. ಒಂದೇ ವಿಷಯ ಮತ್ತು ಒಂದೇ ಮಾನದಂಡಗಳಿಗೆ ಸೀಮಿತಗೊಳಿಸದ ಈ ಸಂಶೋಧನಾ ಲೇಖನಗಳ ಗುಚ್ಛ ಕನ್ನಡ-ತೆಲುಗು ರಾಜ್ಯಗಳಲ್ಲಿ ವಿಶಿಷ್ಟ ಕಂಪನ್ನು ಹರಡುವುದರ ಮೂಲಕ ಅನೇಕ ಸಾಮಾಜಿಕ ಆಯಾಮಗಳ ಬಾಂಧವ್ಯವನ್ನು ಬೆಸೆಯುವುದರೊಂದಿಗೆ ಹಲವು ತಿಳುವಳಿಕೆಗಳ ಒಳನೋಟಗಳನ್ನು ನೀಡಲಿದೆ. ಇಂತಹ ಉತ್ತಮ ಸಂಪಾದನ ಕೃತಿಯ ಹಿಂದೆ ಡಾ. ಎ.ಎನ್. ಸಿದ್ದೇಶ್ವರಿಯವರ ಅಪಾರ ಶ್ರಮವಿದೆ. ಅವರ ಈ ಶ್ರಮ ದ್ರಾವಿಡ ದೇಶದ ಎರಡು ಶ್ರೀಮಂತ ಜಗತ್ತುಗಳಿಗೆ ಕನ್ನಡಿ ಹಿಡಿದಿದೆಯೆಂದೇ ಭಾವಿಸುತ್ತಿದ್ದೇನೆ. ಇಂತಹ ಅನೇಕ ಕೃತಿಗಳು ಹೊರಬರಲು ಅಸ್ಸೀಮ ಚೈತನ್ಯದಿಂದ ಪ್ರೋತ್ಸಾಹಿಸುತ್ತಿರುವ ಸೊಂಡೂರಿನ ಪ್ರಭುದೇವರ ಸಂಸ್ಥಾನ ವಿರಕ್ತಮಠದ ಶ್ರೀ ಶ್ರೀ ಶ್ರೀ ಪ್ರಭುಸ್ವಾಮೀಜಿಗಳವರಿಗೆ ಕನ್ನಡ-ತೆಲುಗು ನಾಡಿನ ಜನಗಳು ಸದಾ ಋಣಿಯಾಗುತ್ತಾರೆ.

ಪ್ರೊ. ಕೆ. ಶಾರದಾ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

9 789355 264947

ಪ್ರಭುದೇವರ ಜನಕಲ್ಯಾಣ ಸಂಸ್ಥೆ
ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ
ಸೊಂಡೂರು - 581 119

மணமிக்க
பூச்சூடி கொள்கிறேன்
கூடுதலாய்
முகப்பவுடரம்
புடவைகளுக்கும் கூட
வாசனைத் திரவியம்
பூசி வைத்துள்ளேன்

.................................

ஆடைக்குள்ளிருந்து
தாயின் வாசம்
சொட்டுச் சொட்டாய்
கோப்புகளில் இறங்குகிறது
அவரசமாய்
அலுவலக கழிப்பறைகளில் நுழைந்து
பீச்சி விடப்படும் தெரிகிறது
பசியை தின்று அலறும்
குழந்தையின் அழுகுரல்"

எந்த வரிகள் ஒரு தாயின் மன வேதனையை அ.வெண்ணிலா அவர்களின் "நீரிலலையும் முகம்" என்ற கவிதைத் தொகுப்பு வரிகள் நமக்குப் புலப்படுகின்றன. பொருளாதாரத்திற்காக அலுவலகம் சென்று தன் குழந்தைக்கு பாலூட்ட முடியாமல் வீணாக வெளியேற்றப்படுகின்றதால் தாய் படும் மனவேதனை தெரிகிறது.

கர்ப்பினை பெண்களுக்கு மட்டும் வலியுறுத்தி அன்றைய சமூகம் ஒரு பெண் கணவனை இழந்து விட்டால் (இறந்துவிட்டால்) கைம்மை நோன்பு ஏற்க வேண்டும் இல்லையெனில் உடன்கட்டை ஏற வேண்டும் அல்லது அவனுடன் (கணவனுடன்) உயிர் துறக்க வேண்டும் என்ற நிலை. இன்றைய காலக்கட்டத்தில் மாறி உள்ளது என்றாலும் அவர் சமுதாயத்தால் பார்க்கப்படுகின்ற நிலை இன்னும் மாற வேண்டும்.

கற்பு என்பது பெண்களுக்கு மட்டும் வலியுறுத்தப்பட்டு காலங்காலமாக நடைமுறையில் உள்ள ஒன்றாக உள்ளது. கற்பில் சிறந்தவள் கண்ணகியா மாதவியா என்ற பட்டிமன்றம் இன்றும் நடைபெற்று வருகின்றது. அந்தக் காலம் தொடங்கி இன்றைக்கும்



இந்த வாதம் நடைபெறுகின்றது. கவிஞர் தாமரை அவர்களின் "தீர்ப்பு" என்ற கவிதையில்

சந்தேகமே இல்லை
இருவருமே கற்பில்
சிறந்தவள் தாம்
கற்பிழந்தவன் கோவலனே"

(ஒரு கதவும் கொஞ்சம் கள்ளிப்பாலும் கவிதை தொகுப்பு)

வரிகள் கவிதையின் தீர்ப்பு மட்டுமல்ல ஒட்டுமொத்த பெண்ணினத்தின் தீர்ப்பாக உள்ளது.

கணவனின் கொடுமைகளால் மனைவி படும் வேதனை சொல்லில் அடங்காது. கணவன் எவ்வளவுதான் அடித்து மிதித்தாலும், அவனை விட்டு விலகி விடவோ, போதையில் இருக்கும்போது துளி விஷம் மூலம் அவனைக் கொன்றுவிடவோ செய்யாத மனைவியின் மன வேதனை ஆனந்த விகடனில் வெளிவந்த "வலியிழந்தவள்" என்ற கவிதை வரிகள்.

"நீயெனக்குச் செய்யும்
சித்திரவதைகள்
உதவியாயிருக்கும்
எனக்கும் என் பிள்ளைக்கும்
திரும்ப நீ தேவை என்ற உணர்வு
தோன்ற விடாமலிருக்க"

சீரழிந்த ஆண் சமுதாயம் சிந்திக்க வேண்டிய ஒன்றாக இந்த வரிகள் நமக்குப் புலப்படுத்துகின்றன.

இன்றைய கவிஞர்கள் தாம் சொல்ல வந்த கருத்துக்களைச் சொல்வதற்கு வழக்கத்திலுள்ள சொற்களைப் பயன்படுத்தி தம் கவிதைகளில் பயன்படுத்துகின்றனர். சான்றாக தாமிரபரணியின் "திருடர்கள் ஜாக்கிரதை" என்ற கவிதை

சொக்கத்தங்கம் நூறுபவுன்
ரொக்கப்பணம் ஐம்பதாயிரம்

ஸ்கூட்டர், டிவி, என
பட்டியலிடும் பொழுது தான்
கண்டுகொள்ள முடிந்தது என்னால்
ஆனால்.............
கதவு திறக்கும் பொழுதே
கண்டுகொண்டேன் குரைத்தது
என் வீட்டு நாய்

இந்த வரிகள் உணர்த்தும் கருத்து என்னவெனில் வரதட்சணை வாங்குபவர்கள் திருடர்களாக சித்தரிப்பதை காணமுடிகிறது.

பொதுமகளிர் படும் துன்பங்கள் சொல்லில் அடங்காது. நாங்கள் இறந்தால் எரித்து விடுங்கள். எக்காரணம் கொண்டும் புதைத்து விடாதீர்கள் என்று வேண்டுகிறார்கள். ஏனெனில் சாவிலாவது எங்களை தனித்து இருக்க விடுங்கள் என்று கூறும் கவிதை வரிகள் நம் கண்களில் கண்ணீரை வரவழைக்கின்றன.

**"இவர்கள் இறந்தால்**
**எரித்துவிட வேண்டுமாம்...**
**எந்தக் காரணம் கொண்டும்**
**புதைக்கக் கூடாதாம்**
**குழி தோண்டியாவது**
**பக்கத்தில் படுத்துக்**
**கொள்வார்களாம்....**
**சாவிலாவது தனித்திருக்கும்**
**உரிமை வேண்டுமென்றார்கள்**

ஆணாதிக்கம் மிகுந்த இச்சமூகத்தில் ஆண்களின் ஆசைக்கு பொதுமகளிர் பலிகடாவாக ஆக்க படுகிறார்கள் என்பதை கவிதை வரிகள் புலப்படுத்துகின்றன.

**முடிவுரை**

"பெண்" என்பவள் போகப் பொருள் மட்டுமல்ல. அவள் தனித்துவம் வாய்ந்தவள். சில அர்த்தமில்லாத அடக்குமுறை. ஒடுக்குமுறை சக்திகளினால் பெண்களின் மதிப்புகள் ஆணாதிக்க சமூகத்தால் நசுக்கப்படும் போது அதற்கு எதிராக குரல் கொடுத்து பெண்ணின் தனித்துவத்தை மகத்துவத்தை ஆணாதிக்கச்



சமுதாயத்திற்கு உணரவைப்பது பெண்கள் நோக்கங்களாக இருக்க வேண்டும்.

தொடக்க காலத்தில் புரியாத முறையில் கருத்துக்களை கூறுவதே புதுக்கவிதை என்ற நிலை இன்று மாறி சமுதாய உணர்வோடு காலத்திற்கேற்ற கருத்துக்களை மக்களின் மனதில் விதைக்கின்றன. கவிதைகள் வரவேற்கத்தக்கதாக உள்ளன. சமுதாயத்தில் நல்ல மாற்றங்களை ஏற்படுத்தக்கூடிய கவிதைகள் தொடர்ந்து வளர்ந்து நல்ல வரவேற்ப்பை பெற வேண்டும்.



CHEMPULAM
An International Tamil Research Quarterly Journal
ISSN 2320-589X
செம்புலம்
பன்னாட்டுத் தமிழாராய்ச்சிக் காலாண்டிதழ்
பிப்ரவரி : 2020
உரூ. 30/-
ஆசிரியர்
முனைவர் செம்மூதாய் சு. சதாசிவம்

18. கண்ணதாசன் திரையிசைப்பாடல்களில் குறள்வழி அறியலாகும் வாழ்வியல் நெறிகள் — 70
ராஜகுமாரி. ஈ,

19. சங்க இலக்கியத்தில் தொழில் மாந்தர்கள் — 75
ர. ஸ்டெல்லா ஜெயஸ்ரீ

20. அற இலக்கியங்களில் வாழ்வியல் நெறிகள் — 78
ஆ. கார்த்திகைநாதன்

21. வரைவிடை வைத்துப் பொருள்வயிற் பிரிவில் அகமாந்தர்கள் — 83
முனைவர் சு. அரங்கநாதன்

22. குறிஞ்சித்திணைப் பாடல்களில் கட்டமைப்புக் கூறுகள் — 89
முனைவர் த. மலர்க்கொடி

23. திருக்குற்றாலமும் சித்ரசபையும் — 93
தமிழ்ச்செம்மல் முனைவர் பா. வேலம்மாள்

24. சங்ககால இசைக்கலைஞர்களின் வாழ்வியல் கலைநயம் — 97
Dr.R. எழில்ராமன்

25. மக்கள் நம்பிக்கைகளும் வழிபாடுகளும் — 101
முனைவர் வ. கலைஅரசி

26. தமிழினத்தின் தொன்மையும் பெருமையும் — 105
முனைவர் இரா. நந்திகேஸ்வரி / முனைவர் மலை. சாம்பசிவம்

27. போடி கல்வெட்டு ஓர் அறிமுகம் — 108
கலாநிதி முருகு தயாநிதி

28. சங்க இலக்கியத்தில் பொருளாதாரம் — 114
முனைவர் த. கலாஸ்ரீதர்

29. மணிவாசகர் காட்டும் சிவ வடிவங்கள் — 118
ஆ. தனுசு இராமச்சந்திரன்

30. சங்கஇலக்கியத்தில் இசை — 123
முனைவர் செ. செயந்தி

31. கவுந்தியடிகள் : இளங்கோவின் பிரசாரக் கருவி — 128
பாஸ்கரன் சுமன்

32. திருவள்ளுவர் கூறிய சான்றாண்மை வழி உணர்த்தும் வாழ்வியல் நெறிகள் — 133
திரு. கு. ஞானவில்சன்

33. மதுரைக்காஞ்சியில் நிலம்சாரா தொழிலாளர்கள் — 138
முனைவர் இரா. திராவிடராணி

34. குறள் கூறும் குடியரசு நெறிகள் — 142
முனைவர் பேரா. வேட்டவராயன்

# 25. மக்கள் நம்பிக்கைகளும் வழிபாடுகளும்

**முனைவர் வ. கலைஅரசி**
பதிப்புத் துறை, உதவி இயக்குநர்,
திராவிடப் பல்கலைக் கழகம்,
சித்தூர் மாவட்டம், 517 426,
குப்பம், ஆந்திர மாநிலம்.

தமிழர்களின் பிறப்பிடமும், வாழ்வின் எல்லைகளும் பரந்து விரிந்த எல்லையைக் கொண்டிருந்தது. நிலம் மனிதனின் வாழ்க்கைத் தொட்டில். இந்த இயற்கைப் பின்னணி மனித வாழ்வின் உயிரோட்டமாக விளங்கியது. மக்கள் இயற்கையோடு இயைந்த ஒரு வாழ்க்கையை வாழ்ந்தனர். இந்த இயற்கையையே அன்றைய மக்கள் தெய்வமாக வழிபட்டனர். சூரிய, சந்திரன் வழிபாடுகளைப் பற்றி சங்க இலக்கியங்களில் குறிப்பிடப்பட்டுள்ளன. தம்மை மீறிய சக்தி உண்டு என்று நம்பினர். அந்த நம்பிக்கையின் அடிப்படையில் தான் சூரிய சந்திர வழிபாட்டைச் செய்தனர். இந்த வழிபாட்டு முறையையும், மக்கள் கொண்டிருந்த நம்பிக்கையையும் இங்கு காணலாம்.

உலகத்து உயிர்களுள் மனிதன் தான் பகுத்தறிவு திறனுடன் செம்மையான வாழ்க்கையை வாழ்ந்து கொண்டிருக்கிறான். அதன் அடிப்படையில்தான் தன்னுடைய தேவைகளான உணவு, உடை, உறைவிடம் போன்றவற்றை ஏற்படுத்திக் கொண்டிருக்கிறான். இவ்வாறு உடலுக்குத் தேவையான வசதிகளை ஏற்படுத்திக் கொண்ட மனிதன் மனதிற்கு நன்மையை விளைவிக்கும் பொருட்டு கடவுள் பற்றிய சிந்தனையையும், வழிபாடும் தமக்கு நன்மை புரியும் என நம்பினான். இதனையே தொல்காப்பியர்,

"வழிபடு தெய்வம் நிற்புறங் காப்பப்
பழிதீர் செல்வமொடு வழிவழி சிறந்து
பொலிமின் என்னும் புறநிலை வாழ்த்தே"

தொல் - பொருள் - 415

கூறுவதன் மூலம் இறைவழிபாட்டின் சிறப்பையும், அவ்வாறு வழிபாடு செய்வோரைத் தெய்வம் காத்தருளும் என்பதும் புலனாகின்றன.

## நம்பிக்கையும் வழிபாடு முறையும்

ಮುಂದಿನ ಹಂತದಲ್ಲಿ ಅವರ ಕಳವಿನ ಪ್ರೇಮ ಅಲರ್ ಆಗುತ್ತದೆ, ಅಂದರೆ ಗಾಳಿಸುದ್ದಿ ಹಬ್ಬುತ್ತದೆ. ಹುಡುಗಿಯ ಮನೆಯವರಿಗೆ ಈ ವಿಷಯ ತಿಳಿಯುತ್ತದೆ. ಆಗ ಅವಳನ್ನು ಅವಳ ತಾಯಿ ಕೇಳುತ್ತಾಳೆ (ನಟ್ರಿಣೈ 147ನೇ ಪದ್ಯ) ಕೆಂಪು ಮೂತಿಯ ಹಸಿರು ಗಿಳಿರಾಮ ತೆನೆಯನ್ನೆಲ್ಲಾ ತಿಂದು ಹಾರಿತಲ್ಲೇ ಕಾವಲಿರದೆ ನೀ ಎಲ್ಲೋಗಿದ್ದೆ?" ಅದಕ್ಕೆ ಅವಳು "ನಾನು ಅವನ ನೋಡ್ಲಿಲ್ಲ, ಮಾತನ್ನೂ ಆಡ್ಲಿಲ್ಲ, ಹೂ ಕೊಯ್ದು ನೀರಿಗೆ ಬಿಟ್ಟು ನೀರಾಟ ಆಡ್ಲಿಲ್ಲ" ಎಂದು ಉತ್ತರಿಸುತ್ತಾಳೆ. ಆಗ ಅವಳ ತಾಯಿಗೆ ವಿಷಯ ಪೂರ್ತಿ ಗೊತ್ತಾಗಿ ಮನೆಯಲ್ಲಿಯೇ ಬಂಧಿಸುತ್ತಾರೆ. ಈ ಹಂತದಲ್ಲಿ ಬರುವುದೇ 'ಒರುದಲೈ ಉಳ್ಳುದಲ್' ಎಂಬುದು ಅಂದರೆ ನಿರಂತರವಾಗಿ ಪ್ರೇಮಿಯನ್ನು ನೆನೆಯುವುದು. ಕುರುಂತ್ತೊಗೈನ 286ನೇ ಪದ್ಯದಲ್ಲಿ "ಅಮೃತ ಸುರಿವ ಕೆಂದುಟಿಗಳ ಪ್ರೇಯಸಿಯ ನಾನು ಇನ್ನೆಂದು ಮರೀಲಾರೆ, ಅವಳ ನೆನೆವುದೊಂದೇ ನನಗಿರುವ ದಾರಿ" ಎಂದು ದುಃಖಿಸುತ್ತಾನೆ. ಕನ್ನಡದಲ್ಲೂ ಪ್ರಖ್ಯಾತವಾಗಿರುವ ಗೀತೆಯೊಂದಿದೆ. "ಕುಂತ್ರ ನಿಂತ್ರೆ ಅವನ ಧ್ಯಾನ ಜೀವಕ್ಕಿಲ್ಲರಿ ಸಮಾಧಾನ ಅವನಿಗೆ ಎಂಥಾ ಬಿಗುಮಾನ ಅವನೇ ನನ್ನಾ ಗೆಣೆಕಾರ" "ನಿನಮ್ಯಾಗೆ ಮನಸು ಐತಿ ಬರೀ ನನಗಾ ನಿಂದೇ ಚಿಂತೀ ಏ ಗೆಳತಿ ನನ ಕನಸಿನಾಗ ನೀ ಬಂದು ಹೋದಾಂಗ ಆಗತೈತಿ" ಹೀಗೆ ಅಗಲಿ ಪರಿತಪಿಸುವುದೇ ಪಾಲೈನ ವಸ್ತು ವಿಷಯ. ಮೇಲಿನ ಗೀತೆಗಳಲ್ಲಿ ಇದು ಮದುವೆಯ ಮುಂಚಿನ ಅಗಲಿಕೆಯಾಗಿ ಚಿತ್ರಿತವಾಗಿದೆ.

ಇವರಿಬ್ಬರಿಗೆ ಮದುವೆಯಾಗದೇ ಬೇರೆ ದಾರಿಯೇ ಇಲ್ಲವಾಗುತ್ತದೆ. ಅವಳನ್ನು ಕಾಣಲಾಗದೆ ಚಡಪಡಿಸುವ ಹುಡುಗ ಹೆದರಿಸಿಯೋ, ಬೆದರಿಸಿಯೋ ಹೇಗಾದರೂ ಅವಳನ್ನು ವರಿಸಲು ಯತ್ನಿಸುತ್ತಾನೆ. ತೊಲ್‌ಗಾಪ್ಪಿಯಂನಲ್ಲಿ ಈ ಸಂದರ್ಭವನ್ನು 'ಮಡಲ್ ಏರುವುದು' ಎಂದು ವಿವರಿಸಲಾಗಿದೆ. ಮಡಲ್ ಏರುವುದು ಅಂದರೆ ತಾಳೆ ಮರದ ಬೊಡ್ಡೆಯನ್ನು ಕುದುರೆಯಂತೆ ಮಾಡಿಕೊಂಡು ನಾಯಕ ಅದನ್ನು ಏರಿ, ನಾಯಕಿ ಇರುವ ಊರಿಗೆ ಬಂದು ಅವಳ ಮನೆಯ ಮುಂದೆ ನಿಲ್ಲುತ್ತಾನೆ. ಆಗ ಅವರ ಪ್ರೇಮವು ಊರಿಗೆಲ್ಲಾ ತಿಳಿದು ಹುಡುಗಿಯ ಮನೆಯವರು ಮದುವೆಗೆ ಸಿದ್ದತೆ ಮಾಡುತ್ತಾರೆ. ಮದುವೆಯಾಗದೆ ಕೂಡುವುದನ್ನು ಸಮಾಜವು ಒಪ್ಪಿಕೊಳ್ಳುವುದಿಲ್ಲ ಮದುವೆಯೆಂಬ ಸಮಾಜ ಧರ್ಮದ ಒಪ್ಪಿತ ಮುದ್ರೆ ಬಿದ್ದಾಗ ಆ ಸಂಬಂಧದ ಪ್ರೇಮ ಯೋಗ್ಯವಾಗುತ್ತದೆ.(ನೋಡಿ. ಜಾನಪದ ಸಂಕಥನ, ಬಸವರಾಜ್ ಪೊಲೀಸ್ ಪಾಟೀಲ ಪು. 72) ಇದನ್ನೆ ತೊಲ್‌ಗಾಪ್ಪಿಯರ್ ಕಳವಿಯಲ್ ನಂತರ ಕಜ್‌ಪಿಯಲ್ ಅಂದರೆ ಕದ್ದು ಕೂಡಿದ ನಂತರ ಮದುವೆಯು ಆಗಲೇಬೇಕು ಎನ್ನುತ್ತಾರೆ. ಕನ್ನಡದಲ್ಲೂ ಒಂದು ಜನಪದ ಗೀತೆ ಕಳವಿನ ಪ್ರೇಮದಿಂದ ಮದುವೆಯ ಕಡೆಗೆ ಹೋಗಿ ಮುಗಿಯುವುದನ್ನು ಕಾಣಬಹುದು.



"ಜಾತ್ರೇಲಪ್ಪ ಕಂಡೆ ಕಣ್ರೆ ಛತ್ರಿ ಮುಚ್ಚಿ ನಿಂತ ಕಣ್ರೆ
ಪಕ್ಕಕೆ ಬಂದು ನಿಂತ ಕಣ್ರೆ ನನ್ನ ಪಕ್ಕಕೆ ಬಂದು ನಿಂತಾ ಕಣ್ರೆ
ಅವನೇ ನನ್ನ ಗೆಣೆಕಾರ.
ಚಾವಡೀಗ್ ಬಂದು ನಿಂತಾ ಕಣ್ರೆ
ತಾಳಿ ಚಿನ್ನ ತಂದ ಕಣ್ರೆ
ನಂಗೂ ಅವನ್ನೂ ಮದ್ವೆ ಕಣ್ರೆ, ನನ್ನೂ ಅವನ್ನೂ ಮದ್ವೆ ಕಣ್ರೆ
ಅವನೇ ನನಾ ಯಜಮಾನ.

ಪ್ರೀತಿಸಿದ ಹುಡುಗ ಹುಡುಗಿಯ ಚಾವಡಿಗೆ ಬಂದು ನಿಲ್ಲುವುದನ್ನೆ ತಮಿಳಿನಲ್ಲಿ ಮಡಲ್ ಏರುವುದಕ್ಕೆ ಸಮ ಎಂದು ಭಾವಿಸಬಹುದೇನೋ. ಕುರುಂತ್ತೊಗೈನ 17ನೇ ಪದ್ಯದಲ್ಲಿ ನಾಯಕ ತಾಳೇ ಗರಿಯ ಕುದುರೆಯನ್ನೇರಿ ನಾಯಕಿಯ ಊರಿಗೆ ಬರುವುದನ್ನು ವಿವರಿಸಲಾಗಿದೆ. ತಿರುಕ್ಕುರಳ್‌ನಲ್ಲೂ ಮಡಲ್ ಏರುವುದಕ್ಕೆ ಸಂಬಂಧಿಸಿದ ಪದ್ಯಗಳಿವೆ. "ಅಡಗಿದ್ದರೆ ಎಲ್ಲರೂ ಅರಿಯಲಾರರೆಂದು ಭಾವಿಸಿ ನನ್ನ ಕಾಮವು ಈ ಊರ ಬೀದಿಯಲ್ಲಿ ಭ್ರಮೆಯಿಂದ ಸುತ್ತುತ್ತಿದೆ" ಎಂಬ ಸಾಲುಗಳಿವೆ. ಕನ್ನಡದ ಜನಪದ ಗೀತೆಯಲ್ಲಿ ಈ ರೀತಿಯ ಪದ್ಧತಿ ಇಲ್ಲದೇ ಹೋದರೂ ನಾಯಕಿಯನ್ನು ಹೆದರಿಸುವುದನ್ನು ಕಾಣಬಹುದು. "ಎಲೆ ಕೆಂಚಿ ತಾರೇ ನಮ್ ಮನೇಗಂಟ ಬಾರೇ ನೀ ಬಾರದೇ ಹೋದರೆ ನಾ ಕೆರೆ ಬಾವಿ ಪಾಲೇ" ಎಂದು ನುಡಿಯುವುದನ್ನು ಕಾಣಬಹುದು.

ಇವೆಲ್ಲದರ ನಂತರ ಅವರಿಬ್ಬರಿಗೂ ಮದುವೆಯಾಗುತ್ತದೆ. ಮುಂದಿನದ್ದೇ ಮರುದಂ ಮತ್ತು ನೆಯ್‌ದಲ್ ನೆಲ. ಗದ್ದೆ ಮತ್ತು ಗದ್ದೆಗಳಿಂದಾವೃತವಾದ ನೆಲ ಮರುದಂದು. ಇಲ್ಲಿನ ಜನರ ಮುಖ್ಯ ಕಾಯಕ ವ್ಯವಸಾಯ. ಇಲ್ಲಿ ವಿವಾಹದ ನಂತರದ ವಿರಹ, ಮುನಿಸು, ಜಗಳ ಮತ್ತು ಅದಕ್ಕೆ ಕಾರಣವಾದ ಅಂಶಗಳೇ ಇಲ್ಲಿನ ವಸ್ತು ವಿಷಯವಾಗಿವೆ. ನೆಯ್ದಲ್‌ನ ನೆಲ ಕಡಲು ಮತ್ತು ಕಡಲಿನಿಂದಾವೃತವಾದ ಪ್ರದೇಶ. ಇದೂ ಅಗಲಿಕೆ ಮತ್ತು ಕಾಯುವಿಕೆಗೆ ಸಂಬಂಧಿಸಿದ್ದು. ಆದರೆ ಇದು ಮುಲ್ಲೈ ನೆಲದ ಅಗಲಿಕೆ ಮತ್ತು ಕಾಯುವಿಕೆಗಿಂತ ಭಿನ್ನ. ಮುಲ್ಲೈ ನೆಲದಲ್ಲಿ ವಿವಾಹ ಪೂರ್ವ ಕಾಯುವಿಕೆ ಮತ್ತು ಅಗಲುವಿಕೆ ಇದ್ದರೆ ನೆಯ್ದಲ್‌ನಲ್ಲಿ ವಿವಾಹ ನಂತರದ ಅಗಲುವಿಕೆ ಮತ್ತು ಕಾಯುವಿಕೆ ಇರುತ್ತದೆ. ನಾಯಕನು ವೇಶ್ಯೆಯ ಮನೆಗೆ ಹೋದಾಗ ನಾಯಕಿ ಅಗಲಿಕೆಯನ್ನು ಸಹಿಸದೆ ವಿರಹವೇದನೆಯಲ್ಲಿ ಪರಿತಪಿಸುವುದು, ನಾಯಕ ಬಂದುದನ್ನು ಗೆಳತಿ ನಾಯಕಿಗೆ ತಿಳಿಸುವುದು, ಮೊದಲಾದವು ಇಲ್ಲಿನ ವಸ್ತು ವಿಷಯವಾಗಿವೆ. ಮದುವೆಯಾಗಿ ಕೆಲವು ವರ್ಷಗಳು ಉರುಳಿದ ನಂತರ ನಾಯಕ ವೇಶ್ಯೆಯರ ಸಂಗವನ್ನು ಮಾಡಿ, ಅವರೊಡನೆ ನೀರಾಟವಾಡಿ ಮನೆಗೆ

ಬರುತ್ತಾನೆ. ಅದನ್ನು ಅರಿತ ನಾಯಕಿ ಅವನ ಮೇಲೆ ಮುನಿದು ಜಗಳವಾಡುತ್ತಾಳೆ. ತನ್ನ ಗೆಳತಿಗೆ ಈ ವಿಷಯವನ್ನು ಹೇಳಿ ಕಣ್ಣೀರಿಡುವುದು, ನಾಯಕ ಸಂಧಾನಕ್ಕಾಗಿ ತನ್ನ ಗೆಳೆಯನನ್ನು ಕಳಿಸುವುದು, ಆಕೆ ಅವನನ್ನು ಒಳಗೆ ಸೇರಿಸದೇ ಕಳಿಸುವುದು, ಊರಿನವರು ಅವಳಿಗೆ ನಾಯಕನ ಅನೈತಿಕ ಸಂಬಂಧದ ಬಗ್ಗೆ ದೂರು ಹೇಳುವುದು ಮೊದಲಾದ ಅಂಶಗಳೆಲ್ಲಾ ಈ ಮರುದಂ ನೆಲದಲ್ಲಿವೆ.

ಕಲಿತ್ತೊಗೈನ 30ನೇ ಪದ್ಯದಲ್ಲಿ ನಾಯಕಿ "ಇರುಳಿನಲ್ಲಿ ನಾನು ನಿದುರೆಯಿಲ್ಲದೆ ತೊಳಲುತ್ತಿರೆ, ಅವನು ನವಿಲಿನಂತಹ ಹೆಂಗಳೆಯರೊಡನೆ ಕೊಳಗಳಲ್ಲಿ ನೀರಾಟ ವಾಡುತಿಹನು." ಎಂದು ಕಣ್ಣೀರಿಡುತ್ತಾಳೆ. ಮತ್ತೊಂದು ಪದ್ಯದಲ್ಲಿ (ಕಲಿ–87,88) ಮನೆಗೆ ಬಂದ ನಾಯಕನನ್ನು ಖಂಡಿಸಿ ಮಾತಾಡುತ್ತಾಳೆ. "ಚಂಚಲ ಕಂಗಳ ಆ ನಿನ್ನ ಪ್ರೇಯಸಿಯರು ಮುಡಿದ ಹೂಗಳು ನಲುಗುವಂತೆ ನೀನು ಎದಗಪ್ಪಿ ಕೊಂಡಿದ್ದರಿಂದ ನಿನ್ನೆದೆಗೆ ಪೂಸಿಕೊಂಡಿದ್ದ ಶ್ರೀಗಂಧ ಅಳಿಸಿಹೋಗಿದೆ. ಈ ಸೂಚನೆ ಕಾಣದೇ ಹೋಗಿದ್ದರೆ ನಾನು ನೀನು ಹೇಲುವ ಸುಳ್ಳನ್ನು ನಂಬುತ್ತಿದ್ದೆನಲ್ಲಾ, ಇಲ್ಲಿಗೇಕೆ ಬಂದೆ ಅಲ್ಲಿಯೇ ಇರಬಹುದಿತ್ತಲ್ಲ. ಎನ್ನುತ್ತಾಳೆ. ಅದಕ್ಕೆ ಆತ

**"ವೇಳುರ್‌ನ ಬಲಿ ಬೇಡುವ ದೈವದ ಮೇಲಾಣೆ**
**ನೀನು ಸಂದೇಹ ಪಡುವಂತೆ ನಾನು ವೇಶ್ಯೆಯರೊಡನೆ ಇದ್ದುದೇ**
**ಆದರೆ**
**ಆ ದೈವ ನನ್ನ ಶಿಕ್ಷಿಸದೇ ಬಿಡದು" ( ಅಗಂ166)**
**ಎನ್ನುತ್ತಾನೆ. ಅದನ್ನು ಕೇಳಿದ ನಾಯಕಿ,**
**"ನಿನ್ನ ಕಂಡರೆ ನನಗೆ ಅಂಜಿಕೆಯಾಗುವುದು,**
**ವೇಶ್ಯೆಯೊಡನೆ ಕೂಡಿ ನಲಿದು,**
**ಅವಳ ಮಾಲೆಯನ್ನು ನೀನು ಧರಿಸಿ ಬಂದು**
**ಅದನ್ನು ಮರೆಮಾಚಲು ಯತ್ನಿಸಿ,**
**ಸುಳ್ಳು ಸತ್ಯವನ್ನು ಇಡುತ್ತಿರುವೆಯಲ್ಲಾ**
**ಇದು ಯಾರಿಗೆ ಕೇಡಾಗಿ ಪರಿಣಮಿಸುವುದೋ"**

ಎಂದು ಅಂಜುತ್ತಾಳೆ. ಕೆಲವೊಮ್ಮೆ ನಾಯಕ ವೇಶ್ಯೆಯ ಮನೆಗೆ ಹೋಗಲು ಸಿದ್ಧವಾದಾಗ ಅವನ ಪುಟ್ಟ ಮಗು ಎದುರಾದಾಗ ಅವನು ಹೋಗುವುದನ್ನು ಬಿಡುವ ಸಂದರ್ಭಗಳೂ ಇಲ್ಲಿವೆ. ಅಗಮ್ 66 ರಲ್ಲಿ ನಾಯಕಿ ತನ್ನ ಗೆಳತಿಗೆ ಹೇಳುತ್ತಾಳೆ. 'ತನ್ನನ್ನು ತಾನು ಸಿಂಗರಿಸಿಕೊಂಡು ಬೇರೊಬ್ಬಳ ಸಂಗ ಸುಖಕ್ಕಾಗಿ ಹೊರಗೆ ಅಡಿಯಿಟ್ಟನು. ಅವನ ರಥದ ದನಿ ಕೇಳಿ ನನ್ನ ಮಗ ತಪ್ಪು ಹೆಜ್ಜೆಯನಿಡುತಾ ತಂದೆಯ ಬಳಿಗೆ ಹೋದನು. ಮಗನನ್ನು ಎದೆಗಪ್ಪಿಕೊಂಡ



ಅವನು ಹೊರಗೆ ಹೋಗದೆ ಮನೆಯೊಳಗೆ ನಡೆದನು. ಅವನ ಪಯಣವನ್ನು ಮಗನ ಮೂಲಕ ನಾನೇ ತಡೆದೆನೆಂದು ಅವನು ಭಾವಿಸಬಾರದೆಂದು ಮಗನನ್ನು ಹೊಡೆಯಲು ನಾನು ಪುಟ್ಟ ಕೋಲೊಂದನ್ನು ಹಿಡಿದು ತಂದೆ. ಆದರೆ ಅವನು ನನ್ನನ್ನು ತಡೆದು ಮಗನನ್ನು ಬಿಗಿಯಾಗಿ ಅಪ್ಪಿಕೊಂಡನು."

ಈ ಸಾಲುಗಳು ಅವನ ಪಯಣವನ್ನು ತಪ್ಪಿಸಲು ನಾಯಕಿ ಹೂಡಿದ ತಂತ್ರವನ್ನು ತಿಳಿಸುತ್ತದೆ. ಗಂಡನು ಪರವನಿತೆಯರ ಸಂಗವನ್ನು ಮಾಡಿದ್ದಾನೆಂದು ತಿಳಿದು ಅವಳು ಮುನಿದಾಗ ಹಿರಿಯರು ಬುದ್ಧಿ ಹೇಳುತ್ತಾರೆ. ಅಗಮ್‌ನ 316ನೇ ಪದ್ಯ ಇದಕ್ಕೆ ಉದಾಹರಣೆಯಾಗಿದೆ. 'ತನ್ನಿನಿಯ ವೇಶ್ಯೆಯ ಸಂಗವನ್ನು ಮಾಡಿದನೆಂದು ಮುನಿದು ಅಗಲಿ ಬಾಳುವ ಹೆಂಗಳೆಯರ ನೋಡು! ಸಿರಿಲಕ್ಷ್ಮಿ ನೀಗಿ ಹೋದ ಕಾರಣ ಅವರು ಇರುವ ಸ್ವಲ್ಪವೇ ಅಕ್ಕಿಯಲಿ ಗಂಜಿಯ ಮಾಡಿ ತಿಂದು ಏಕಾಂಗಿ ಯಾಗಿ ದುಃಖಿಸುತಿಹರು. ಜೇನಿನಂತೆ ಸನಿನುಡಿಗಳನ್ನಾಡುವ ಮಕ್ಕಳು ಹಾಲಿಲ್ಲದೆ ಬತ್ತಿ ಹೋದ ಮೊಲೆಗಳನ್ನು ಸವಿಯುತ್ತಿವೆ. ಮನಸ್ಸನ್ನು ಬದಲಾಯಿಸಿಕೊಂಡು ಬಾಳದಿರೆ ಬುದ್ಧಿ ಇಲ್ಲದವರಾಗುತ್ತಾರೆ, ಮುನಿದು ಫಲವಿಲ್ಲ" ಎನ್ನುತ್ತಾರೆ.

ಕನ್ನಡ ಜನಪದ ಗೀತೆಗಳಲ್ಲೂ ಇದಕ್ಕೆ ಸಂವಾದಿಯಾದ ಅನೇಕ ಗೀತೆಗಳಿವೆ. ಹೆಣ್ಣೊಬ್ಬಳು ತನ್ನ ಗಂಡನಿಗೆ ಅನ್ಯ ಹೆಣ್ಣುಗಳ ಸಂಬಂಧ ಮಾಡಬೇಡವೆಂದು ಮೊದಲೇ ವಿನಂತಿಸಿಕೊಳ್ಳುತ್ತಾಳೆ.

**'ಹಣ್ಣ ಹಾಗಲಕಾಯಿ ಎಣ್ಣ್ಯಾಗ ಕರದೀನ**
**ಬಂದಾರೆ ನೋಡು ಸವಿಗಾರ– ನನಮ್ಯಾಲ**
**ತಂದಾರೆ ನೋಡು ಸವತೀಯಾ'**

ಬಾಯಿಗೆ ರುಚಿಯಾಗಿ ಮಾಡಿದ್ತೀನಿ ಮಾರಾಯ ಸವತೀನಾ ಮಾತ್ರ ತರಬೇಡ ಅಂತಾಳೆ. ಸಾವಿರ ಕೊಟ್ಟರೂ ಸವತಿಯಾ ಮನೆಬ್ಯಾಡ ಎಂಬ ಖಚಿತ ನುಡಿ ಅವಳದ್ದು. ಆದರೂ ಅವನು ಅನ್ಯ ಹೆಂಗಸರ ಸಂಗ ಮಾಡುತ್ತಾನೆ. ಯಾಕೆಂದರೆ ಜನಪದರೇ ಹೇಳುವಂತೆ,

**"ಸೂಳೀಗೆ ಹೋಗೋನ ಸುಲಿದು ಮುಟ್ಟೀಕಟ್ಟಿ**
**ಊರ ಹೊರಗವನ ಹೆಡಮುರಗಿ ಕಟ್ಟಿದರ**
**ಸೂಳೆಂಬ ಸಬುದ ಬಿಡಲೊಲ್ಲ".**

ನಾಯಕನು ಅನ್ಯ ಹೆಣ್ಣೊಬ್ಬಳ ಸಂಗದಲ್ಲಿದ್ದಾನೆಂಬುದು ಅನ್ಯರ ಮೂಲಕವೇ ಆಕೆಗೆ ತಿಳಿಯುತ್ತದೆ.

"ಚಿಂತಾಕು ಇಟಕೊಂಡು ಚಿಪ್ಪಾಟಿ ಬಳೆವಾಕೆ,
ಚಿಂತಿಲ್ಲವೇನ ನಿನಗಿಷ್ಟು ನಿಮ್ಮವರು
ಅಲ್ಲೊಬ್ಬಳ ಕೂಡಾ ನಗತಾರೆ" .

ಅವರ ಎದುರಿಗೆ ತನ್ನ ಗಂಡನನ್ನು ಬಿಟ್ಟು ಕೊಡಲು ಬಯಸದ ಅವಳು

"ನಕ್ಕರೆ ನಗಲೆವ್ವ ನಗೆಮುಖದ ಕ್ಯಾದಿಗಿ,
ನಾ ಮುಟ್ಟಿ ಮುಡಿದ ಪರಿಮಳದಾ ಹೂವಾ
ಅವಳೊಂದು ಗಳಿಗೀ ಮುಡೀಯಾಲೀ".

ಹಾಗೆ ಹೇಳಿದ ಮಾತ್ರಕ್ಕೆ ಗಂಡನ ಆ ಕಲ್ಯಾಣ ಗುಣವನ್ನು ಒಪ್ಪಿಕೊಂಡಳು ಎಂದು ಅರ್ಥವಲ್ಲ. ಮನೆಗೆ ಬಂದವನನ್ನು ಪ್ರಶ್ನಿಸುತ್ತಾಳೆ.

'ಸಬ್ಬಂತು ರಾತೂರಿ ಒಬ್ಬಾಕಿ ನಾ ಇದ್ದಿ
ನೀವೆಲ್ಲಿ ಹೋಗಿ ಬಂದ್ರಿ, ನೀವೆಲ್ಲಿ ಆಡಿ ಬಂದ್ರಿ?
ಎದೆಯ ಮ್ಯಾಲಿನ ಗಾಯ ಎಳಿಯ ಚಂದ್ರಮನಂಗ
ನೀವೆಲ್ಲಿ ಹಾದು ಬಂದ್ರಿ– ನನರಾಯ ನೀವೆಲ್ಲಿ ಹಾದು ಬಂದ್ರಿ
ಹತ್ತು ಮಾರೀನ ಮುತ್ತಿನ ನಡಿಕಟ್ಟು
ಮತ್ಯಾಕೆ ಮಾಸಿದವರಿ ನನರಾಯ ಮತ್ತ್ಯಾಕ ಮಾಸಿದವರಿ?'

ಅಂತ ಕೇಳ್ತಾಳೆ. ಮತ್ತೊಂದು ಹಾಡಲ್ಲಿ,

"ಎಲ್ಲಿ ಹೋಗಿದ್ದೀ ರಾಯ ಸೆಲ್ಯಾಕ ಮಾಸ್ಯಾದ
ಅಲ್ಲೊಬ್ಬಳ ಕೂಡ ಸಲೀಗೆಯ ನೀವ್ ಮಾಡಿ
ಇಲ್ಲೆಂಬುದೇನ ನನ ಮುಂದ"

ತಮಿಳು ಮತ್ತು ಕನ್ನಡ ಎರಡರಲ್ಲೂ ನಾಯಕ ತನ್ನನ್ನು ಸಮರ್ಥಿಸಿಕೊಳ್ಳಲು ಸುಳ್ಳು ಹೇಳುವುದನ್ನು ಗಮನಿಸಬಹುದು.

ಗಂಡನನ್ನು ಪ್ರಶ್ನಿಸುವುದು ಮಾತ್ರವಲ್ಲ, ಹಿತವಚನಗಳನ್ನೂ ನುಡಿಯುತ್ತಾಳೆ.

"ಅಂಗೀಯ ಮ್ಯಾಲಂಗಿ ಛಂದೇನೋ ನನರಾಯ,
ರಂಬಿ ಮ್ಯಾಲ ರಂಬಿ ಪ್ರತಿರಂಬಿ ಬಂದರಾ
ಛಂದೇನೋ ರಾಯ ಮನಿಯಾಗ".

ಗಂಡು ಇಂಥ ಕಸುಬಿಗೆ ಒಂದು ಸಲ ಬಿದ್ದನೆಂದರೆ ಮತ್ತೆ ಅದನ್ನು ತಿದ್ದುಕೊಳ್ಳುವ ಶಕ್ತಿ ಅವನಲ್ಲಿಲ್ಲವೆಂಬುದು ಹೆಣ್ಣಿಗೆ ಗೊತ್ತು. ಹಾಗಾಗಿ ಸೂಳೆಯ ಮನೆ ಸೇರುವವನ ಸ್ಥಿತಿ ಏನಾಗುತ್ತದೆನ್ನುವುದನ್ನೂ ಹಾಡಿದ್ದಾಳೆ. (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ–7 ಪು. 127)



"ಸೂಳಿಗೆ ಹೋದೋನು ಏನಾದ ಎಂತಾದ,
ಕಾಡು ನಾಯಾದ ಕಪಿಯಾದ ಆ ಮುರವ
ಸೂಳೆಯ ಕಾಲಿಗೆ ಕೆರವಾದ"

ಎಂದು ಬಹಳ ಖಾರವಾಗಿಯೇ ತಮ್ಮ ಕೋಪವನ್ನು ಆ ಹೆಣ್ಣು ಮಕ್ಕಳು ಹೊರಹಾಕುತ್ತಾರೆ. ಸಂಗಂನಲ್ಲಿ ನಾಯಕಿ ಗೆಳತಿಯ ಬಳಿ ಹೇಳಿಕೊಂಡರೆ ಕನ್ನಡದ ಬೆಟ್ಟದ ತಾಯಿ ಚಾಮುಂಡಿಯ ಹಾಡಿನಲ್ಲಿ ನಂಜುಡೇಶ್ವರನ ಬಗ್ಗೆ ಉತ್ನಳ್ಳಿ ಮಾರಮ್ಮನ ಬಳಿ ದೂರು ಹೇಳುವುದನ್ನು ಕಾಣಬಹುದು.

'ಕೇಳ್ ಕೇಳ್ ನಸ್ತಂಗಿ ಉತ್ನಳ್ಳಿ ಮಾರವ್ವ
ನಿಮ್ಮ ಭಾವನಾದ ನಂಜುಡೇಶ್ವರನು ಹೋಗಿ ಮೂರು ತಿಂಗಳಾಯ್ತಲ್ಲವ್ವಾ
ಅವ್ನ ಹೋದಾಗಿಂದ ನನ ಕಂದ ನನ್ನ ಜೀವಕ ಅನ್ನ, ನೀರು, ನಿದ್ರಿ ಸೇರ್ತಿಲ್ಲ
ನೆತ್ತಿ ಮ್ಯಾಲೆ ನೆರೆ ಬಂದಿರ್‌ವಂತ ಆ ಮುದಿ ನನ್ನ ಸವತೀಗ್ ಒಲ್ಕಂಡ್
ಕುಂತವ್ನಲ್ಲ.'

ದೂರು ಹೇಳಿ ಸುಮ್ಮನಾಗೋರಲ್ಲ ನಮ್ಮ ಜನಪದ ಹೆಣ್ಣು ಮಕ್ಕಳು. ಅವರು ಹೊಟ್ಟೆ ಉರೀನಾ ಹೊರಗೆ ಹಾಕೋಕ್ಕೆ ಶಾಪ ಕೂಡಾ ಹಾಕುತ್ತಾರೆ.

'ಅವ್ನಗೆ ಹಾವಾದ್ರೂ ಕಚ್ಚಬಾರ್ದಾ ಚೇಳಾದ್ರು ಚುಚ್ಚಬಾರ್ದಾ
ನಾಗಾರ ಜ್ವರ ಬಂದು ನರಳಾಡಿ ಸಾಯಬಾರ್ದ
ಹೊಟ್ಟೆಯ ನೋವು ಬಂದು ಹಟ್ಟೀಲಿ ಬೀಳಬಾರ್ದ
ಕಳ್ಳ ಅವನ್ ಆಯ್ಸ್ ಕಡಿಯ ಬರಲಿಲ್ಲ ತಂಗ್ಯವ್ವಾ'

ತಮಿಳಿನಲ್ಲಿ ಗಮನಿಸಿದ ಹಾಗೇ ಕನ್ನಡದಲ್ಲೂ ಗಂಡನ ಮೇಲೆ ಮುನಿದ ನಾಯಕಿಗೆ ಬುದ್ದಿ ಹೇಳುವ ನುಡಿಗಳಿವೆ.

"ಪರಿಮಳದರಸರು ಪರನಾರಿಗ್ಹೋದರ
ಮನಿ ಮಡದಿ ಬಾಯ ಬಿಡಬ್ಯಾಡ– ತಾವ್ತಮ್ಮ
ಮನ ಹೇಸಿ ಮನಿಗೆ ಬರತಾರ."

(ಇದರ ಬೆನ್ನಲ್ಲೇ ಬಹುಶಃ ಇಟ್ಟುಕೊಂಡವಳು ಇರೋ ತನ್ಕಾ ಕಟ್ಟಿಕೊಂಡವಳು ಕೊನೇ ತನ್ಕಾ ಅನ್ನೋ ಗಾದೆ ಬಂದಿರಬಹುದೇನೋ?)

ಪ್ರೀತಿ, ಪ್ರೇಮ, ಮದುವೆ, ಜಗಳ ಇವೆಲ್ಲದರ ನಂತರ ಬರುವುದೇ ಸಮಾಧಾನ ಅಥವಾ ರಾಜಿಯಾಗುವುದು. ತಪ್ಪು ಮಾಡಿದ ಗಂಡ ತಪ್ಪೇ ಮಾಡಿಲ್ಲವೆಂದು ವಾದಿಸುತ್ತಾನೆ, ಕೂಗಾಡುತ್ತಾನೆ, ಕೊನೆಗೆ ತಾನೇ ಸಮಾಧಾನ ಮಾಡುತ್ತಾನೆ. ಈ ಪ್ರಸಂಗ ಸಂಗಂ ಮತ್ತು ಕನ್ನಡದ ಜನಪದ ಗೀತೆ ಎರಡರಲ್ಲೂ ಸೊಗಸಾಗಿ

ಮೂಡಿ ಬಂದಿದೆ. ನಟ್ರಿಣೈ 250 ರಲ್ಲಿ ನಾಯಕ ಮುನಿದ ಮಡದಿಯನ್ನು ಶಾಂತಗೊಳಿಸಲು, ಬೀದಿಯಲ್ಲಿ ಆಡುತ್ತಿದ್ದ ತನ್ನ ಮಗನನ್ನು ಎತ್ತಿಕೊಂಡು ಮನೆ ಒಳಗೆ ಹೋಗುತ್ತಾನೆ. ಆಗಲಾದರೂ ಅವಳು ಸಮಾಧಾನವಾಗಬಹುದೆಂದು. ಆದರೆ ಅವಳು ಮುಖಗಂಟಿಕ್ಕಿ 'ಯಾರು ನೀವು?' ಎಂದು ಕೇಳುತ್ತಾಳೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವಳನ್ನು ' ಎಲ್ಲರಿಗಿಂತಲೂ ನಾನು ನಿನ್ನ ಹೆಚ್ಚಾಗಿ ಪ್ರೀತಿಸುವೆ'. ಎನ್ನುತ್ತಾನೆ. ಆಗ ಅವಳು ಎಲ್ಲರೆಂದರೆ? ಎಲ್ಲರೆಂದರೆ? ಎಂದು ಇನ್ನಷ್ಟು ಕೋಪಗೊಳ್ಳುತ್ತಾಳೆ.(ಕುರಳ್–1314) ಕೊನೆಗೇ ಆತ ಸೋತು "ಪ್ರಿಯಳೇ ನಾನು ಮಾಡಿದ ತಪ್ಪುಗಳ ಕಂಡು ಹಿಡಿದು ಸಾಕ್ಷಿ ಸಹಿತ ತೋರಿರುವೆ, ನಾನು ತಪ್ಪು ಮಾಡಿದ್ದೇನೆ. ನನ್ನ ಮೇಲೆ ದಯೆ ತೋರು ಎಂದು ಕಾಲಿಗೆ ಬೀಳುತ್ತಾನೆ.(ಕಲಿ–89). ಅಲ್ಲಿಗೆ ಆಕೆ ಸ್ವಲ್ಪ ಶಾಂತಳಾಗುತ್ತಾಳೆ. ಈ ಸಂದರ್ಭಕ್ಕೆ ಹೋಲುವ ಕನ್ನಡದ ಗೀತೆಯನ್ನು ಉದಾಹರಿಸುವುದಾದರೆ, ಇಬ್ಬರಿಗೂ ಮಾತುಕತೆ, ಹೊಡೆದಾಟ ನಡೆದ ನಂತರ, ಆಕೆ ಗಂಡನ ಮೇಲೆ ಮುನಿದು ತವರಿಗೆ ಹೋಗುವುದಕ್ಕೆ ಸಿದ್ಧಳಾಗುತ್ತಾಳೆ, ಆಗ

**ಮಡದೀಯ ಬಡಿದಾನ, ಮನದಾಗ ಮರುಗ್ಯಾನ**
**ಒಳಗ್ಹೋಗಿ ಸೆರಗ ಹಿಡಿಯುತಾ ಕೇಳ್ಯಾನ**
**ನಾ ಹೆಚ್ಚೋ ನಿನ್ನ ತವರೆಚ್ಚೋ ಅಂತ ಸಮಾಧಾನ ಮಾಡಲು ಯತ್ನಿಸುತ್ತಾನೆ.**

ಹೀಗೆ ಸಂಗಂ ಮತ್ತು ಜನಪದ ಗೀತೆಗಳ ಸಾಕಷ್ಟು ವಸ್ತು ವಿಷಯಗಳು ಒಂದಕ್ಕೊಂದು ಹೋಲುವುದನ್ನು ಈ ಮೂಲಕ ಗುರುತಿಸಬಹುದಾಗಿದೆ. ಇದೇ ರೀತಿ ಜನಪದ ಗೀತೆಗಳ ಪ್ರಾಸಗಳನ್ನು ತೊಲ್‌ಗಾಪ್ಪಿಯಂ ಹೇಳುವ 13,699 (ಸೂತ್ರ.1358) ಬಗೆಗಳೊಡನೆ ಹೋಲಿಸಿ ಪ್ರಾಸದ ವೈವಿಧ್ಯಮಯ ಜಗತ್ತನ್ನು ಅನಾವರಣ ಮಾಡಬಹುದು. ಸಂಗಂ ಮತ್ತು ಕನ್ನಡ ಜನಪದ ಗೀತೆಗಳಲ್ಲಿನ ಉಪಮೆ, ರೂಪಕ, ಒಳಾರ್ಥ (ಉಳ್ಳುರೈ), ಗೆಳತಿಗೆ ಇರುವ ಪ್ರಾಮುಖ್ಯತೆ, ಪ್ರಕೃತಿಯ ಉಲ್ಲೇಖ, ಹೂಗಳು, ಮರಗಳು ಮೊದಲಾದವುಗಳಿಗೆ ಸಂಬಂಧಿಸಿದಂತೆ ತೌಲನಿಕ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

**ಪರಾಮರ್ಶನ ಗ್ರಂಥಗಳು:**


1. ಗರತಿಯ ಹಾಡು– (ಸಂಗ್ರಹ) ಹಲಸಂಗಿ ಗೆಳೆಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2017
2. ಜನತಾ ಗೀತೆಗಳು – (ಸಂಗ್ರಾಹಕರು) ಡಾ. ಬಿ.ಎಸ್. ಗದ್ದಗೀಮಠ, ಸಹಕಾರಿ ಸಾಹಿತ್ಯ ಸಂಘ, ಧಾರವಾಡ, 1956





3. ಜಾನಪದ ಕಥನಗೀತೆಗಳು – ಕ.ರಾ.ಕೃ, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, 1959
4. ನಟ್ರಿಣೈ – ಡಾ. ವಿ.ಟಿ. ರಾಮ ಸುಬ್ರಹ್ಮಣ್ಯಂ, ತಿರುಮಗಳ್‌ನಿಲೈಯಂ, ಚೆನ್ನೈ, 2009
5. ಅಗನಾನೂರು – ಪುಲಿಯೂರು ಕೇಸಿಗನ್, ಗೌರಾ ಪುತ್ತಗ ಮೈಯ್ಯಂ, 2020
6. ಕಲಿತ್ತೊಗೈ – ಪುಲಿಯೂರು ಕೇಸಿಗನ್, ಗೌರಾ ಪುತ್ತಗ ಮೈಯ್ಯಂ, 2019
7. ಕುರುಂತ್ತೊಗೈ – ವಿ. ಇ. ಸೋಮಸುಂದರನಾರ್, ಕಳಗಮ್ ಪದಿಪ್ಪಗಮ್, ಚೆನ್ನೈ, 2018
8. ತೊಲ್‌ಗಾಪ್ಪಿಯಂ – ಡಾ. ಜಯಲಲಿತಾ ( ಕನ್ನಡಾನುವಾದ), ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು, 2017
9. ಐಂಗುರುನೂರು – ಪುಲಿಯೂರು ಕೇಸಿಗನ್, ಪಾರಿ ನಿಲೈಯಮ್, ಚೆನ್ನೈ, 2016



**– ಡಾ. ಜಯಲಲಿತ**
**ಕನ್ನಡ ಸಹ ಪ್ರಾಧ್ಯಾಪಕರು**
**ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ**
**ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.**

ISSN : 2347 - 5048

# ಅರುಹು ಕುರುಹು

ಕನ್ನಡ ತ್ರೈಮಾಸಿಕ

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ಸಂಪುಟ : ೧೨, ಸಂಚಿಕೆ : ೪೭, ಜನವರಿ-ಮಾರ್ಚ್-೨೦೨೨

ಯುಜಿಸಿ ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞ- ಪರಿಶೀಲಿತ ಕನ್ನಡ ಪತ್ರಿಕೆ

UGC CARE LISTED AND PEER- REVIEWED KANNADA JOURNAL



ISSN: 2347 - 5048

# ಅರುಹು ಕುರುಹು

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ಸಂಪುಟ : ೧೨ ಸಂಚಿಕೆ : ೪೭ ಜನವರಿ-ಮಾರ್ಚ್ ೨೦೨೨

ಯುಜಿಸಿ ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞ - ಪರಿಶೀಲಿತ ಕನ್ನಡ ಪತ್ರಿಕೆ

UGC CARE LISTED AND PEER - REVIEWED KANNADA JOURNAL

**ತಜ್ಞಪರಿಶೀಲನ ಸಮಿತಿ**

**PEER REVIEW COMMITTEE**

**ಡಾ. ಸಿ. ನಾಗಣ್ಣ**
ಸಂದರ್ಶಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ಎಂ.ಜಿ. ಮಂಜುನಾಥ**
ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ಪ್ರೀತಿ ಶ್ರೀಮಂಧರಕುಮಾರ್**
ಪ್ರಾಧ್ಯಾಪಕರು (ನಿ), ಮೈಸೂರು ವಿಶ್ವವಿದ್ಯಾನಿಲಯ

**ಡಾ. ಮುಜಾಫರ್ ಅಸ್ಸಾದಿ**
ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ವಿನಯಾ ಒಕ್ಕುಂದ**
ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾಂಡೇಲಿ

**ಡಾ. ಸೋಮಣ್ಣ ಹೊಂಗಳ್ಳಿ**
ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ

**ಡಾ. ಮೇಟಿ ಮಲ್ಲಿಕಾರ್ಜುನ**
ಭಾಷಾವಿಜ್ಞಾನ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ

**ಡಾ. ಎಫ್.ಟಿ. ಹಳ್ಳಿಕೇರಿ**
ಜಾನಪದಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ

**ಡಾ. ಪರಮಶಿವಮೂರ್ತಿ**
ಕನ್ನಡ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ

**ಡಾ. ಆರ್. ಸುನಂದಮ್ಮ**
ಕನ್ನಡ ಪ್ರಾಧ್ಯಾಪಕರು, ಮಹಿಳಾ ವಿಶ್ವವಿದ್ಯಾಲಯ

**ಡಾ. ಅಪ್ಪಗೆರೆ ಸೋಮಶೇಖರ**
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಸಂಪಾದಕರು
**ಪ್ರೊ. ಎಚ್ ಎಸ್ ಉಮೇಶ**

ಗೌರವ ಸಂಪಾದಕರು
**ಡಾ. ಹಾ ತಿ ಕೃಷ್ಣೇಗೌಡ**

ವ್ಯವಸ್ಥಾಪಕ ಸಂಪಾದಕರು
**ಹಾ ತಿ ರತ್ನ**

ವಿನ್ಯಾಸ
**ಹಾಲತಿ ಲೋಕೇಶ್**

ತಾಂತ್ರಿಕ ಸಹಕಾರ
**ವಿಪುಲ್ ಹಾಲತಿ**

**ಅರುಹು ಕುರುಹು**, ತ್ರೈಮಾಸಿಕ ಪತ್ರಿಕೆ
#೧೦, 'ಬೆಳಕು', ಕುವೆಂಪು ರಸ್ತೆ, ಪೃಥ್ವಿ ಬಡಾವಣೆ, ದಟ್ಟಗಳ್ಳಿ ೩ನೆಯ ಹಂತ
ಮೈಸೂರು-೫೭೦೦೩೩, ಮೊ: ೯೮೮೬೬೭೨೮೩೩
aruhukuruhu@gmail.com

# ಒಳನೋಟ


೧. ಸಿರಿಗುಪ್ಪೆ : ಶಾಸನಗಳ ಒಂದು ನೋಟ – ಡಾ ಎ ಸಿ ವಾಲಿ / ೭

೨. ಸವದತ್ತಿ ತಾಲ್ಲೂಕಿನ ಶೈವ ಶಾಸನಗಳು – ಡಾ ಕೆ ಎಸ್ ಪಾಟೀಲ/ ೧೧

೩. ಕನ್ನಡ ಜನಭಾರತ ಪರಂಪರೆಯ ಸಾಹಿತ್ಯದಲ್ಲಿ ದುರ್ಯೋಧನ
– ಡಾ ರವಿರಾಜ ಶೆಟ್ಟಿ / ೧೫

೪. ಕವಿತಾಗುಣಾರ್ಣವನ 'ಪೆಱರಿಂದಮಪ್ಪುದೇಂ'
– ಡಾ ಹೆಚ್ ಎನ್ ಮಂಜುರಾಜು / ೨೦

೫. ಮಹಾಭಾರತ ಯುದ್ಧ ಪಂಚಕ ಪರ್ವಗಳು – ಡಾ ರವಿರಾಜಶೆಟ್ಟಿ / ೨೫

೬. ಉಯ್ಯಾಲು ಪದ ಸಾಹಿತ್ಯ : ಪ್ರಭುದೇವರ ನಿಲ್ಲಲಾಡಿದನುಯ್ಯಾಲ – ವಿವೇಚನೆ
– ಡಾ ಆರ್ ವಿ ಪಾಟೀಲ / ೩೧

೭. ಅಯ್ದಕ್ಕಿ ಮಾರಯ್ಯ – ಲಕ್ಕಮ್ಮ – ಡಾ ಜಗದೇವಿ ತಿಬಶೆಟ್ಟಿ / ೩೬

೮. ಅಂಬಿಗರ ಚೌಡಯ್ಯನ ವಚನಗಳಲ್ಲಿ ಸಮಾಜಮುಖಿ ಚಿಂತನೆ
–ಡಾ ಟಿ ಡಿ ರಾಜಣ್ಣ ತಗ್ಗಿ / ೪೩

೯. 'ಅಂಬಿಗರ ಚೌಡಯ್ಯರ' ವಚನಗಳಲ್ಲಿ ಜೀವನ ಮೌಲ್ಯ
– ಡಾ ಟಿ ಕೆ ಶರತ್‌ಕುಮಾರ್ / ೪೯

೧೦. ವಚನಗಳ ಸ್ವರೂಪ ಕುರಿತು ಸಿದ್ಧರಾಮ ನಡೆಸುವ ಜಿಜ್ಞಾಸೆ : ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ
– ಅರವಿಂದ ಇ / ೫೪

೧೧. ಭರತೇಶ ವೈಭವದಲ್ಲಿ ಭೋಗ–ಯೋಗದ ವೈಭವೀಕರಣ
– ಡಾ ಎಂ ರಂಗಸ್ವಾಮಿ / ೬೦

೧೨. ಬುಡಕಟ್ಟುಗಳಲ್ಲಿನ ಹೋಳಿ ಆಚರಣೆ – ಡಾ ಜಿ ಎಸ್ ಸಕ್ರೇನಾಯ್ಕ / ೬೬

೧೩. ಜಾನಪದ ಸಾಹಿತ್ಯದಲ್ಲಿ ಮಂದರ್ತಿ – ಡಾ ಉದಯಕುಮಾರ್ ಶೆಟ್ಟಿ / ೭೧

೧೪. ಪಯೋದಯದ ಆಯ್ದ ಕವಿತೆಗಳಲ್ಲಿ ಜಾನಪದ ಪ್ರಜ್ಞೆ– ಚಾಂದಸಾಬ / ೭೭

೧೫. ಶ್ರೀ ಕುವೆಂಪು – ಎಸ್ ಎಂ ಶಿವಪ್ರಕಾಶ್ / ೮೩

೧೬. ಕುವೆಂಪು ಅವರ ಹೊಸ ಸೃಷ್ಟಿ 'ಅನಲಾ' ಪಾತ್ರ ವಿವೇಚನೆ – ಡಾ ಉಷಾದೇವಿ / ೮೭

೧೭. ಕುವೆಂಪು ಕಥನ ಹಾಗೂ ಸಬಾಲ್ಟರ್ನ್ ದಾರ್ಶನಿಕತೆ
– ಡಾ. ಚಿಕ್ಕಮಗಳೂರು ಗಣೇಶ / ೯೩

೧೮. ಶೂದ್ರತಪಸ್ವಿಯ ಉನ್ನತ ಶಿಖರ ಕುವೆಂಪು – ಡಾ ಹಾಲತಿ ಸೋಮಶೇಖರ್ / ೯೯

೧೯. ಕುವೆಂಪು ಚಿತ್ರಿಸಿದ 'ಅಕ್ಕಣೆ' – ಡಾ ಉಷಾದೇವಿ / ೧೦೪

೨೦. ಯು ಆರ್ ಅನಂತಮೂರ್ತಿ ಅವರ ಕತೆಗಳಲ್ಲಿ ಪ್ರತಿಭಟನೆಯ ನೆಲೆಗಳು
– ಆನಂದ ಎಸ್ ಎನ್ / ೧೦೯

೨೧. ಶಿವರಾಮ ಕಾರಂತರ ಸಣ್ಣಕಥಾ ಸಂಕಲನ 'ಹಸಿವು' / ೧೧೪
– ಡಾ ಶಿವಕುಮಾರ್ ಎಂ ಕೆ

೨೨. ಕಾರಂತರ ಮೂಕಜ್ಜಿಯ ಕನಸುಗಳು ಮತ್ತು ಈವ್ ಪಾಮರ್ ಅವರ "The Plains of Camdeboo" – ಡಾ ಶುಭಾ ಮರವಂತೆ / ೧೧೮

೨೩. ಬಿರಿದ ನೆಲದ ಧ್ಯಾನದೊಳಗೆ ಮೌನ ಧ್ಯಾನಿಯ ಪಯಣ / ೧೨೪
– ಪ್ರೇಮಿಲಾ ನಾಗಶೆಟ್ಟಿ

೨೪. 'ಸೀತೆ–ರಾಮ–ರಾವಣ' : ಒಂದು ಸ್ತ್ರೀವಾದಿ ನೋಟ / ೧೨೮
– * ಆರ್ ಶಶಿಕಲಾ ** ಡಾ ನಿತ್ಯಾನಂದ ಬಿ ಶೆಟ್ಟಿ

೨೫. ಶೋಷಣೆಯ ವಿವಿಧ ಮುಖಗಳು – ಡಾ ಉಷಾದೇವಿ / ೧೩೩

೨೬. ಸಾಹಿತ್ಯೋಕ್ತ ಅಪರಾಧ ಮತ್ತು ಶಿಕ್ಷೆ; ಒಂದು ಕಿರುನೋಟ – ರಶ್ಮಿ ದೇವಾಪುರ / ೧೩೮

೨೭. ಸ್ವಾತಂತ್ರ್ಯಾನಂತರ ಭಾರತದಲ್ಲಿ ಮಹಿಳಾ ಶಿಕ್ಷಣದ ಶಿಫಾರಸ್ಸುಗಳು
– ಡಾ ಅರುಣ ವಾಯ್ ಕಾಂಬಳೆ / ೧೪೩

೨೮. ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ ಚರಿತ್ರೆಯ ಹೊಸ ಬಾನಗಡಿ
– ಡಾ ಸುಬ್ರಹ್ಮಣ್ಯ ಕೆ / ೧೪೮

೨೯. ಮುಡಬೂಳ ಶ್ರೀ ರಂಗಲಿಂಗೇಶ್ವರರ ತತ್ವಪದಗಳ ತಾತ್ವಿಕ ಚಿಂತನೆ
– ನಾಗಪ್ಪ ಅನಂತಪ್ಪ / ೧೫೧

೩೦. ಡಾ ಶರಣಬಸಪ್ಪ ಅಪ್ಪಾ ಅವರ ಮಹಾದಾಸೋಹ ಸೂತ್ರಗಳಲ್ಲಿ : ಜೀವನ ಪ್ರೀತಿ
– ಡಾ ಶಾಂತಪ್ಪ ಎನ್ ಡಂಬಳ / ೧೫೬

೩೧. ಕೆಟ್ಟ ಕನಸುಗಳು – ತೆಲುಗು ಮೂಲ : ಮಂದರಪು ಹೈಮವತಿ / ೧೬೨
ಕನ್ನಡರೂಪ : ಡಾ. ಗುರುಮೂರ್ತಿ ಪೆಂಡಕೂರು

೩೨. ಡಾ ಈಶ್ವರಯ್ಯ ಮಠ ಅವರ 'ವಚನ ಸಂಗ್ರಹ' : ಒಂದು ಟಿಪ್ಪಣಿ / ೧೬೪
– ಡಾ ರಾಮಚಂದ್ರಪ್ಪ ಗಣಾಪೂರ

೩೩. ರಾಯಚೂರು ಜಿಲ್ಲೆಯ ದಲಿತ ತತ್ವಪದಕಾರರು / ೧೭೧
– ಡಾ ಬಸವರಾಜ ಪಿ ನಾಯಕ

೩೪. ಕೆಂಪಾಗಿ... ಕ್ರಾಂತಿಯ ವಾರಸುದಾರರಾಗಿ... ಗುಲಾಮಗಾರಿಕೆಯ ಧಿಕ್ಕರಿಸಿ...
– ಡಾ ಅಪ್ಪಗೆರೆ ಸೋಮಶೇಖರ್/ ೧೭೬

೩೫. ಭಾರತದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಅದರ ಮಿತಿಗಳು
– ವಿಜಯಕುಮಾರ ಎಂ ಸಿ / ೧೮೨

೩೬. ಭಾರತೀಯ ಸಮಾಜದಲ್ಲಿ ಜಾತಿ ರಚನೆ ವಿಕಾಸ ಮತ್ತು ಬದಲಾವಣೆ
– ಡಾ ಅರುಣ ವಾಯ್ ಕಾಂಬಳೆ / ೧೮೮

೩೭. ಮಂಡ್ಯ ನೆಲದ ಅಸ್ಮಿತೆಯ ಪ್ರಮುಖ ರೈತ ಹೋರಾಟಗಳು / ೧೯೨
– ಪವನಕುಮಾರ ಬಿ

೩೮. ಸತ್ಯಾಗ್ರಹ ಮತ್ತು ಗಾಂಧಿ – ದೇವನಾಂಪ್ರಿಯ (ದೇವಪ್ಪ ಬೆನಕನವಾರಿ) / ೧೯೭

೩೯. ಭಾರತದಲ್ಲಿ ಮುಸ್ಲಿಂ ಮಹಿಳೆಯರ ಸ್ಥಿತಿಗತಿ ಮತ್ತು ಹೋರಾಟಗಳು / ೨೦೨
– ಮಹಮ್ಮದ್ ಮುಸ್ತಾಫ್ ಪಿ ಎಸ್

೪೦. ಡಿಜಿಟಲ್ ಯುಗದಲ್ಲಿ ಗ್ರಂಥಪಾಲಕರ ಪಾತ್ರ / ೨೦೬
– ಬಸವರಾಜ ಮಾಲಿಪಾಟೀಲ್

೪೧. ಭಾರತದಲ್ಲಿ ಚರ್ಚಾತ್ಮಕ ಪ್ರಜಾಪ್ರಭುತ್ವ : ಸವಾಲುಗಳು ಮತ್ತು ಸಾಧ್ಯತೆಗಳು
– ವಿನಯ್ ಆರ್ ಕುಲಕರ್ಣಿ / ೨೧೧
೪೨. ಕೋವಿಡ್ ೧೯ರ ಸಮಯದಲ್ಲಿ ಬಾನುಲಿ ಮೂಲಕ ಕಲಿಕೆ
– ಸಂತೋಷ್ ಆಲ್ಬರ್ಟ್ ಸಲ್ಡಾನ / ೨೧೬
೪೩. ಉಡುಪಿ ಜಿಲ್ಲೆಯ ಶಕ್ತಿ ಕೇಂದ್ರಗಳು – ಡಾ ಉದಯ್‌ಕುಮಾರ್ ಶೆಟ್ಟಿ / ೨೨೧
೪೪. ಕರ್ನಾಟಕ ಗ್ರಾಮೀಣ ಮಾದಿಗ ಸಮುದಾಯದ ಕಲಿಕೆ ವಂಚಿತ ಹೆಣ್ಣು ಮಕ್ಕಳ ಸ್ಥಿತಿಗತಿ – * ಗೀತಾ ರಾಜಶೇಖರ ಪತ್ತಾರ ** ಡಾ ಚಂದಪ್ಪ ಆರ್ ಕಂಬಾರ / ೨೨೮
೪೫. ನಾ ಡಿಸೋಜರ ಮಕ್ಕಳ ಕಾದಂಬರಿಗಳಲ್ಲಿ ಪರಿಸರ ಪ್ರಜ್ಞೆ / ೨೩೩
– ಪ್ರವೀಣ ಪದ್ಯಾಣ
೪೬. ತಾಂಡಾಯಣ : ಒಂದು ವಿಶ್ಲೇಷಣೆ – ಡಾ ಮುನಿರಾಜ ಎ / ೨೩೮
೪೭. ನಾಡೋಜ ಗೀತಾ ನಾಗಭೂಷಣ ಅವರ ಸಣ್ಣ ಕಥೆಗಳಲ್ಲಿ ಬದುಕಿನ ಹೋರಾಟ
– ಸವಿತಾಬಾಯಿ ಚಂದಪ್ಪ / ೨೪೪
೪೮. ಡಾ ಹನುಮಂತರಾವ ಬಿ ದೊಡ್ಡಮನಿ ಅವರ ಸಾಹಿತ್ಯ ಪ್ರಕಾರಗಳ ಅವಲೋಕನ
– ಎಂ ಡಿ ರಾಜಾಪಟೇಲ್ / ೨೪೮
೪೯. ಯೋಗ ಗುರು ರಾಘವೇಂದ್ರ ಸ್ವಾಮೀಜಿ ಅನಾಥ ಸೇವಾಶ್ರಮ ಮಲ್ಲಾಡಿಹಳ್ಳಿ ಸಂದರ್ಶನ – * ಡಾ ತಿಮ್ಮಪ್ಪ ನರಸಪ್ಪ ವಡ್ಡೆಪಲ್ಲಿ ** ಡಾ ಕೆ ಕೃಷ್ಣಶರ್ಮ / ೨೫೩
೫೦. ಬೀದರ ಜಿಲ್ಲೆಯ ಮಹಿಳಾ ಸಾಹಿತ್ಯ – ಅಶೋಕ ಶಿವರಾಮ / ೨೫೮
೫೧. ಎಂ ಎಸ್ ಕೆ ಪ್ರಭು ಅವರ 'ಗುಂಡುಸೂಜಿ' ಮತ್ತು ಪಿ. ಲಂಕೇಶರ 'ವಾಸನೆ' ಕಥೆಗಳ ತೌಲನಿಕ ಅಧ್ಯಯನ – * ರಾಮಚಂದ್ರಪ್ಪ ವಿ ** ಪ್ರೊ ಅಣ್ಣಮ್ಮ / ೨೬೨
೫೨. ಮೈ ಫಾದರ್ ಬಾಲಯ್ಯ : ದಲಿತ ಲೋಕದ ಅನುಭವ ಕಥನ / ೨೬೬
– ನಂದಪ್ಪ ಪಿ
೫೩. ಹುಲಿಮನಿ ಆಟ ನೆನಪಿಸುವ ಬಸವರಾಜ ಡೋಣೂರರ ಉರಿಯ ಕೆಂಡದ ಮೇಲೆ – ಡಾ ಬಸವರಾಜ ಕುಂಬಾರ / ೨೭೧
೫೪. ಸೊಲ್ಲಾಪುರ ಜಿಲ್ಲೆಯ ಶರಣರು – ಡಾ ಗುರುಸಿದ್ಧಯ್ಯಾಸ್ವಾಮಿ / ೨೭೫
೫೫. ಬೆಂಕಿ ಬೆಡಗು ಕೃತಿಯ ಜೀವನ ದರ್ಶನ – ರವಿ ಎನ್.ಸಿ. / ೨೮೧
೫೬. 'ಅಭಿನವಾಭಿಧಾನಂ' ಶಬ್ದಕೋಶ – ಒಂದು ಅವಲೋಕನ / ೨೮೫
– ಡಾ ಸುಧಾ ಎಸ್ ಕೌಜಗೇರಿ
೫೭. ವಿರಹ ದರ್ಶನದ ದಿವ್ಯ – ಕನ್ನಡ ಮೇಘದೂತ ಕಾವ್ಯದ ಬೆಡಗು ಮತ್ತು ಶಾಶ್ವತತೆ – ಶೈಲೇಶ್‌ಕುಮಾರ್ ಶಿವಕುಮಾರ್ / ೨೮೯
೫೮. ಸಮಕಾಲೀನ ಮಹಿಳಾ ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆ / ೨೯೫
– ಡಾ ರತ್ನಾಕರ ಮಲ್ಲಮೂಲೆ
೫೯. ಅಲಕ್ಷಿತ ವಚನಗಳಲ್ಲಿ ಒದಿನ ಗ್ರಹಿಕೆ : ಜ್ಞಾನ, ಭಕ್ತಿ, ವಿದ್ಯೆಯ ಸಮನ್ವಯದ ಅರಿವು – ಡಾ ಎಂ ಎಸ್ ದುರ್ಗಾಪ್ರವೀಣ / ೩೦೧

# ಅಲಕ್ಷಿತ ವಚನಗಳಲ್ಲಿ ಓದಿನ ಗ್ರಹಿಕೆ : ಜ್ಞಾನ, ಭಕ್ತಿ, ವಿದ್ಯೆಯ ಸಮನ್ವಯದ ಅರಿವು

ಡಾ ಎಂ ಎಸ್ ದುರ್ಗಾಪ್ರವೀಣ

ಪ್ರಸ್ತುತ ಸಂಶೋಧನಾ ಪ್ರಬಂಧವು ಕನ್ನಡದ ವಚನ ಸಾಹಿತ್ಯದಲ್ಲಿ ಕಾಣಿಸುವ ಓದಿನ ಗ್ರಹಿಕೆಯನ್ನು ಈಗಾಗಲೇ ಸುಪ್ರಸಿದ್ಧವಾಗಿರುವ ವಚನಗಳ ಜೊತೆಜೊತೆಗೆ ಸಾಮಾನ್ಯವಾಗಿ ಹೆಚ್ಚು ಚರ್ಚಿತವಲ್ಲದ, ಅಧ್ಯಯನಕ್ಕೊಳಗಾಗದ, 'ಅಲಕ್ಷಿತ'ವೆಂದು ಗುರುತಿಸಲಾಗುವ ವಚನಗಳ ಅಧ್ಯಯನದೊಂದಿಗೆ ಗುರುತಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಮುಖ್ಯವಾಗಿ ವಚನಗಳ ಮೌಖಿಕತೆಯ ಹಾದಿಯ ಅರಿವಿನೊಂದಿಗೆ ಅಕ್ಷರ ಪ್ರಪಂಚದೊಂದಿಗೆ ಬೆಸೆದುಕೊಂಡಿರುವ ಓದು, ವಿದ್ಯೆ, ಜ್ಞಾನದ ಸ್ವರೂಪವನ್ನು ಅನ್ವೇಷಿಸುವುದು ಮತ್ತು ವಚನಗಳಲ್ಲಿ ಓದು ಬರೆಹದ ದಾಖಲಾತಿಯ ಬಗೆಗಿನ ಪ್ರತಿಕ್ರಿಯೆಯ ಸ್ವರೂಪವನ್ನು ಕಂಡುಕೊಳ್ಳುವುದು ಇಲ್ಲಿನ ಆಶಯವಾಗಿದೆ.

ಬಸವಣ್ಣನವರ ಸುಪ್ರಸಿದ್ಧ ವಚನದಲ್ಲಿ ಕಾಣಿಸುವ "ಏತ ತಲೆ ಬಾಗಿದಡೇನು, ಗುರುಭಕ್ತನಾಗಬಲ್ಲುದೇ? ಇಕ್ಕುಳ ಕೈಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೇ? ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೇ?"(ವಚನ ಸಂಖ್ಯೆ ೧೨೫) (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಅ; ಪು.೨೦) ಎಂಬುದರ ಅರ್ಥ ಸ್ವಯಂಸಂಪೂರ್ಣ. ಇಲ್ಲಿ ಬರುವ ಗಿಳಿ ಓದಿನ ಪ್ರಸ್ತಾಪ ಅತ್ಯಂತ ಕುತೂಹಲಕರವೆನಿಸುತ್ತದೆ. ವಿಶೇಷವಾಗಿ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಕಾಣಿಸುವ ಮಾತು ಮತ್ತು ಗಿಳಿಯ ಸಂಬಂಧದ ಬಗ್ಗೆ ಪ್ರತ್ಯೇಕವಾಗಿ ಅಧ್ಯಯಿಸಬಹುದಾಗಿದೆ. ಜನಪದದಲ್ಲೂ ಇದು ಬಹಳ ಮುಖ್ಯ ಅಂಶ ಎಂಬುದನ್ನು ಇಲ್ಲಿ ಪ್ರಾಸ್ತಾವಿಕವಾಗಿ ಗುರುತಿಸಿಕೊಳ್ಳಬಹುದು. ಬಸವಣ್ಣನವರ ಇನ್ನೊಂದು ವಚನ (ವ.೧೬೩)ದಲ್ಲಿಯೂ "ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ ಎಂದೆಂದೂ ಅಳಿಯನೆಂದು। ಗುಡಿ ಕಟ್ಟಿದೆಯಲ್ಲಾ ನಿನ್ನ ಮನದಲ್ಲಿ। ಮಾಯಾಮಂಜರ ಕೊಲುವಡೆ ನಿನ್ನ ಹಂಜರ ಕಾವುದೇ?" (ಅದೇ; ಪು.೨೩) ಎಂಬ ಪ್ರಸ್ತಾಪ ಕಾಣಿಸುತ್ತದೆ.

ಈ ಹಿನ್ನೆಲೆಯಲ್ಲಿ ವಚನಗಳಲ್ಲಿ ಕಾಣಿಸುವ ಓದಿನ ಪರಿಕಲ್ಪನೆಯನ್ನು ನೋಡಬಹುದು. ಸ್ವತಂತ್ರ ಸಿದ್ಧಲಿಂಗೇಶ್ವರ ಅವರ ವಚನ(ವ.೮೯೬)ದ ಸಾಲುಗಳನ್ನು ಇಲ್ಲಿ ಗಮನಿಸಬೇಕು. "ಕಾಡೊಳಗಣ ಹುಲುಗಿಣಿಯ ಹಿಡಿತಂದು, ಓಂ ನಮಶಿವಾಯ, ಹರಹರ ಶಿವಶಿವ ಎಂದು ಓದಿಸಿದರೆ ಓದದೆ?" (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಆ; ಪು.೪೫೧) ಎನ್ನುವಲ್ಲಿ ಓದು ಎನ್ನುವುದು ಹೇಗೋ ಲಭ್ಯವಾಗಬಹುದಾದರೂ ಅದರ ಪ್ರಯೋಜನ ಹೇಗಿರಬೇಕು ಎನ್ನುವ ಕಾಳಜಿ ಶರಣರಲ್ಲಿ ಕಾಣಿಸುವುದು ಗಮನಾರ್ಹ.

ಸಿದ್ಧರಾಮೇಶ್ವರ ಅವರು ತಮ್ಮ ವಚನ(ವ.೧೫೫೩)ದಲ್ಲಿ "ಓದಿದ ಫಲ ಕೂಚಭಟ್ಟನಂತಾಗಬಾರದು" ಎಂದು ನೇರವಾಗಿ ಹೇಳಿ 'ಪರಾಶರನಂತೆ, ಮಯೂರನಂತಾಗಬಾರದು' ಎನ್ನುತ್ತಾ "ಓದಿನ ಫಲ ನಮ್ಮ ಹಾವಿನಹಾಳ ಕಲ್ಲಯ್ಯನ ಮನೆಯ ಶ್ವಾನನಂತಾಗಬೇಕು ಕಾಣಾ, ಕಪಿಲಸಿದ್ಧ ಮಲ್ಲಿಕಾರ್ಜುನಾ" (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಅ;

ಡಾ.ಎಂ.ಎಸ್.ದುರ್ಗಾಪ್ರವೀಣ, ಆಯ್ಕೆ ಶ್ರೇಣಿ ಸಹಾಯಕ ಪ್ರಾಧ್ಯಾಪಕ,
ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ,
ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

ಪು.೭೦೬) ಎನ್ನುವಲ್ಲಿ ನಾಯಿಯ ನಿಷ್ಠೆಯ ಪ್ರಸ್ತಾಪದೊಂದಿಗೆ ಸದಾ ಹಿಂಬಾಲಿಸುವ ಓದಿನ, ಅರಿವಿನ ಫಲ ಬಹಳ ಮುಖ್ಯ ಎನ್ನುವ ಭಾವ ಎದ್ದು ಕಾಣುವಂತಹುದು. ಮುಂದುವರೆದು(ವ.೧೫೯೪) "ಓದುವುದು ಸದ್ಗುಣಕ್ಕಲ್ಲದೆ ಕಿವಿಯನೂದುವುದಕ್ಕೇನೋ, ಅಯ್ಯಾ?" (ಅದೇ; ಪು.೭೦೬) ಎಂಬುದು ಗಮನಾರ್ಹವೆನಿಸುತ್ತದೆ.

ಉರಿಲಿಂಗ ಪೆದ್ದಿ ಅವರ ವಚನ(ವ.೧೫೩೧)ದಲ್ಲಿ "ವೇದ ಶಾಸ್ತ್ರ ಪುರಾಣ ಆಗಮ ಪುರಾತನರ ಗೀತದ ವಚನ ಪ್ರಸಂಗವನರಿದು ದಾಸೋಹವಿಲ್ಲದಿದ್ದರೆ ಆ ಓದು ಗಿಳಿ ಓದಿನಂತೆ" (ಅದೇ; ಪು.೧೧೩೪) ಎಂದು ನೇರವಾಗಿ ಹೇಳಿರುವುದು ಕಂಡುಬರುತ್ತದೆ. ಹಲವಾರು ವಚನಗಳಲ್ಲಿ ಓದುವಿಕೆ ಮತ್ತು ಕೇಳುವಿಕೆ ಸಾದೃಶ್ಯ ವೈದೃಶ್ಯಾತ್ಮಕವಾಗಿ ಬಳಕೆಯಾಗಿದ್ದು ಇಲ್ಲಿ ಅದು ಸ್ಪಷ್ಟವಾಗಿ ಗೋಚರವಾಗುವ ಬಗೆಯನ್ನು ನೋಡಬೇಕು.

ಸಿದ್ಧರಾಮೇಶ್ವರರ ವಚನ(ವ.೧೫೯೨)ದಲ್ಲಿ ಓದಿನ ಫಲ ಯಾರ್‍ಯಾರಿಗೆ ಆಯಿತೆಂದು ಹೇಳುವುದಿದೆ: "ಶಿವಲೆಂಕ ಮಂಚಣ್ಣಂಗೆ, ಹಲಾಯುಧಂಗೆ, ಮಲಯರಾಜಂಗೆ, ಹಾಗೆಯೇ ಜನ್ಮವಳಿದವವಂಗೆ ಆಗಿತ್ತು" (ಅದೇ; ಪು.೭೦೬) ಎಂದಿರುವಲ್ಲಿ ಓದು ಎಂಬುದು ಕೇವಲ ಸೀಮಿತಾರ್ಥದಲ್ಲಿ ಬಳಕೆಯಾಗಿಲ್ಲ ಎಂಬುದು ಕಂಡುಬರುತ್ತದೆ.

ನಗೆಯ ಮಾರಿತಂದೆಯ ವಚನ(ವ.೧೨೫೪)ದಲ್ಲಿ "ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ, ಹೊಯಿವ ದೊಣ್ಣೆ ಕೈಯಲ್ಲಿ, ಲೇಸಾಯಿತ್ತು ಈತನಿರವು, ಮಾತಿನಲ್ಲಿ ಆಗಮ, ಮನದಲ್ಲಿ ತೂತಿನ ಕುಡುಕೆಯ ಆಶೆ, ಇದು ನೀತಿಯಲ್ಲ, ಆತುರವೈರಿ ಮಾರೇಶ್ವರ" (ಅದೇ; ಪು.೧೩೨೯) ಎಂದು ಬರುವಲ್ಲಿ ಓದು –ನಡೆ –ನುಡಿ –ಜ್ಞಾನಗಳೆಲ್ಲವೂ ಒಂದಕ್ಕೊಂದು ಹೊಂದಿಕೊಂಡಿರಬೇಕು ಎಂಬ ಆಶಯವು ಸ್ಪಷ್ಟವಾಗುತ್ತಾ ಹೋಗುತ್ತದೆ. ಇನ್ನೊಂದೆಡೆ (ವ.೧೨೬೨) "ಹೇಳಿಸಿಕೊಂಡು ಕೇಳಿ ಅರಿದಿಹನೆಂದಡೆ ಗಣಿತದ ಲೆಕ್ಕವಲ್ಲ, ಎನ್ನನರಿತು ನಿನ್ನನರಿವಡೆ ನಾ ಪರಂಜ್ಯೋತಿಯಲ್ಲ" (ಅದೇ; ಪು.೧೩೩೦) ಎನ್ನಲಾಗಿದೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನ(ವ.೨೧೯)ದಲ್ಲಿ "ನಿಷ್ಠಹೀನರು ಓದಿ ಹಾಡಿದರೆ ನಳ್ಳಿ ಗುಳ್ಳೆಯ ತಿಂದ ನರಿ ಹಳ್ಳದ ತಡಿಯಲ್ಲಿ ಬಳ್ಳಿಟ್ಟಯ ಬಗುಳಿದಂತೆ" (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಆ; ಪು.೨೩೦) ಎಂಬ ಸಾಲೂ ಗಮನಾರ್ಹ. "ಏನನೋದಿರೇನಯ್ಯಾ? ಏನ ಕೇಳಿದರೇನಯ್ಯಾ? ಏನ ಹಾಡಿದರೇನಯ್ಯಾ? ಓದಿ ಮರುಳಾದೆಯೋ ಕೂಚಿ ಭಟ್ಟರೇ? ಗಿಣಿಯನೋದಿ.." (ಅದೇ; ಪು.೨೩೦) ಎಂದು ಮಾತಿಗೆ ಮಾತು– ನುಡಿಗೆ ನುಡಿ ಕಲಿತು ತರ್ಕ ಮರ್ಕಟರಾಗುವ ಬಗ್ಗೆ (ವ.೨೧೮) ಹೇಳಿದ್ದಾರೆ.

ಪ್ರಸಾದಿ ಭೋಗಣ್ಣನ ವಚನ(ವ.೧೬)ದಲ್ಲಿ ಗುರು ಲಿಂಗ ಜಂಗಮದ ಬಗ್ಗೆ ಹೇಳುವ ವೇಳೆಗೆ ಅವಿದ್ಯೆ, ಅವಗುಣ, ಅವಿವೇಕ, ಅಬದ್ಧ, ಅಪ್ರಮಾಣಗಳನ್ನು ಸೂಚಿಸಿರುವುದನ್ನೂ ಇಲ್ಲಿ ಪೂರಕವಾಗಿ ನೆನಪಿಸಿಕೊಳ್ಳಬಹುದು (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಅ; ಪು.೧೩೫೩) ಇನ್ನೊಂದೆಡೆ (ವ.೨೨) ಓದು ಎಂದಾಗ "೪ ವೇದ, ೧೬ ಶಾಸ್ತ್ರ, ೨೮ ದಿವ್ಯ ಪುರಾಣ, ಶಬ್ದ ಶಾಸ್ತ್ರ, ಅಕ್ಷರಜ್ಞತ್ವ, ಭರತಶಿಲ್ಪಗಳನ್ನು ಉಲ್ಲೇಖಿಸಿರುವುದನ್ನು (ಅದೇ; ಪು.೧೩೫೪) ಇಲ್ಲಿ ವಿಶೇಷವಾಗಿ ಗುರುತಿಸಬೇಕು. ನಮಶಿವಾಯ ಎಂಬ ಅಕ್ಷರ ವಿವರಣೆಯನ್ನೂ (ವ.೫೯) ನೀಡುವುದಿದೆ (ಅದೇ; ಪು.೧೩೫೯) ಭೋಗಣ್ಣನಲ್ಲಿ(ವ.೯೫) "ವೇದ ವರ್ಣಕ, ಶಾಸ್ತ್ರ ಸಂದು, ಪುರಾಣ ಪುಚ್ಚವಿಲ್ಲದ ವೃಶ್ಚಿಕ...ಇಂತಿವೆಲ್ಲವೂ ಐವತ್ತೆರಡಕ್ಷರದ ನಾಮಬೀಜ"(ಅದೇ; ಪು.೧೩೬೪) ಎಂದಿದ್ದರೂ ಅದು ಈಗಾಗಲೇ ನೋಡಿದ ಹಾಗೆ ಸೀಮಿತವೇನಲ್ಲ.



ಮಾತು– ನಡೆ–ನುಡಿ– ಜ್ಞಾನಕ್ಕೆ ಸಂಬಂಧಿಸಿದಂತೆ ನುಲಿಯ ಚಂದಯ್ಯನ ವಚನ(ವ.೧೩೧೭)ದಲ್ಲಿ ಒಂದು ಸಾಲಿದೆ "ನುಡಿದ ಮಾತಿಂಗೆ ತಡಬಡ ಬಂದಲ್ಲಿ ನುಡಿದ ಭಾಷೆಗೆ ಭಂಗ ನೋಡಾ" (ಅದೇ; ಪು.೧೩೩೫) ಇದು ಅನೇಕ ಶರಣರಲ್ಲಿ ಅಭಿವ್ಯಕ್ತಗೊಂಡಿದೆ.

ಬಹುರೂಪಿ ಚೌಡಯ್ಯ (ವ.೧೭೭) "ವೇಧಿಸಿದ ವೇದಂಗಳೆಲ್ಲಾ ಉಲಿದುಲಿದು ನಿಂತವು। ಸಾಧಿಸಿದ ಶಾಸ್ತ್ರಂಗಳೆಲ್ಲ ಸೋಹೋ ಎಂದಡಗಿದವು। ವಿದ್ಯಾಮುಖ ಪ್ರಾಮವು ಸಿದ್ಧ ಸಿದ್ಧ ಎಂದು। ಕದ್ದು ಕಳ್ಳರಂತೆ ತಡವಡಿಸುತ್ತಿದ್ದವು ನೋಡಾ" (ಅದೇ; ಪು.೧೩೭೪-೧೩೭೫) ಎಂದಿದ್ದು ವಚನಗಳಲ್ಲಿ ಈ ಪ್ರಾಮದ, ಅಕ್ಷರದ ಕಲ್ಪನೆ ಹಲವೆಡೆ ವಿಭಿನ್ನ ಬಗೆಯಲ್ಲಿ ಕಾಣಿಸಿಕೊಂಡಿದೆ.

ಬಳ್ಳೇಶ ಮಲ್ಲಯ್ಯ(ವ.೯೫) "ಧರೆಯೊಳಗೆ ಚೋದ್ಯವ ನೋಡಿರೆ: ಒಂದು ಹರಿಣಿಯ ಮೃಗವು ಓದು ಬಲ್ಲುದಾ? ಸಂಭ್ರಮವ ನುಡಿವ ಕವಿಗಳ ಮುಖವ ಝಳಪಿಸಿತ್ತ" (ಅದೇ; ಪು.೧೩೭೬) ಎನ್ನುವಲ್ಲಿ, ಡಾಚಿ ಕಾಯಕದ ಬಸವಣ್ಣನ ವಚನ(ವ.೨೦೮)ದ "ಕವಿಕವಿಗಳೆಂದು ಹೆಸರಿಟ್ಟುಕೊಂಡು ನುಡಿವ ಅಣ್ಣಗಳು ನೀವು ಕೇಳಿರೋ" (ಅದೇ; ಪು.೧೩೭೮) ಎನ್ನುವಾಗ ಅಮರಸಿಂಹನ ನಿಘಂಟುವಿನ ಪ್ರಸ್ತಾಪ ಬರುವಲ್ಲಿ ಆ ವೈದೃಶ್ಯದ ಅರಿವು ಸ್ಪಷ್ಟವಾಗುತ್ತದೆ.

ಬಾಹೂರ ಬೊಮ್ಮಣ್ಣನ ವಚನ(ವ.೨೭೩)ದಲ್ಲಿ "ನಾನಾ ಭೇದಂಗಳಲ್ಲಿ ಷಡ್ದರುಶನವ ಹೊಕ್ಕು ತಿಳಿದಡೂ ಶೃತಿ ವೇದ ಶಾಸ್ತ್ರ ಪುರಾಣ ಆಶಯಂಗಳ ಕಲಿತಡೂ ಮೂರು ಮಲದ ಭೇದವನರಿತು ಬಿಡುಮುಡಿಯಲ್ಲಿ ಕಳೆದುಳಿಯಬೇಕು"(ಅದೇ; ಪು.೧೩೮೭) ಓದು ಹೇಗಿರಬೇಕು ಎಂಬುದು ಗೋಚರಿಸುತ್ತದೆ.

ಮಡಿವಾಳ ಮಾಚಿದೇವರ ಒಂದು ವಚನ(ವ.೪೮೯)ದಲ್ಲಿ ಬಹುದೀರ್ಘವಾದ ಪ್ರಸ್ತಾಪವಿದೆ "ಅಕ್ಕರಗಣಿತ, ಜ್ಯೋತಿಷ ..." (ಅದೇ; ಪು.೧೪೦೭) ಹೀಗೆ ಹೇಳಿ "ಪೂರ್ವಜ್ಞಾನವೆಂಬುದೇ ವೇದ, ಶಾಸ್ತ್ರ, ಆಗಮಂಗಳೆಂಬುವು। ಪೂರ್ಣ ಪ್ರಮಾಣ ಇವಲ್ಲ ಕಂಡಯ್ಯಾ" ಎಂಬ ತೀರ್ಮಾನಕ್ಕೆ ಬರುವ ಬಗೆ ಕಾಣಿಸುತ್ತದೆ. ಇಲ್ಲಿ ಕಾಣಿಸುವ ಅಂದಿನ ವಿದ್ಯೆ, ಓದಿನ ಪ್ರಸ್ತಾಪ ಬಹಳ ಮುಖ್ಯ.

ಅಮುಗೆ ರಾಯಮ್ಮ ತನ್ನ ವಚನ(ವ.೬೧೫)ದಲ್ಲಿ "ಎಲ್ಲರೂ ಓದುವುದು ವಚನಂಗಳು, ಎಲ್ಲರೂ ನುಡಿವರು ಬೊಮ್ಮವ, ಎಲ್ಲರೂ ಕೇಳುವುದು ವಚನಂಗಳು, ಹೇಳುವಾತ ಗುರುವಲ್ಲ, ಕೇಳುವಾತ ಶಿಷ್ಯನಲ್ಲ, ಹೇಳಿಹೆ ಕೇಳಿಹೆನೆಂಬನ್ನಕ್ಕರ, ವಿರಕ್ತಿ ಸ್ಥಲಕ್ಕೆ ಭಂಗ ನೋಡು ಅಮುಗೇಶ್ವರ" (ಅದೇ; ಪು.೮೫೭) ಎಂದು ಹೇಳಿರುವುದನ್ನು ಇದೇ ಸಂದರ್ಭದಲ್ಲಿ ಗಮನಿಸಬೇಕು.

ಅಕ್ಕಮಹಾದೇವಿಯ ವಚನ(ವ.೧೩೦)ವನ್ನು ಇಲ್ಲಿ ನೆನಪಿಸಿಕೊಳ್ಳಬಹುದು:"ಓದಿ ಓದಿ ವೇದ ವಾದಕ್ಕಿಕ್ಕಿತ್ತು, ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು, ಅರಿದಿಹೆ ಅರಿದಿಹೆನೆಂದು ಆಗಮ ಅರೆಯಾಗಿ ಹೋಯಿತ್ತು"(ಅದೇ; ಪು.೮೦೦) ಒಂದು ಪೂರಕ ಅಂಶವನ್ನು ಇಲ್ಲಿ ಗುರುತಿಸಿಕೊಳ್ಳಬೇಕು. ಇದೇ ವಚನದ ಮೊದಲೆರಡು ಸಾಲುಗಳು ಅಲ್ಲಮಪ್ರಭುವಿನಲ್ಲೂ ಇದೆ, ಮೂರನೇ ಸಾಲು ಮಾತ್ರ(ವ.೧೦೨೫) "ಅರಿದೆ ಅರಿದೆನೆಂದು ಆಗಮ ಅಗಲಕ್ಕೆ ಹರಿಯಿತ್ತು"(ಅದೇ; ಪು.೨೩೩) ಎಂದಾಗಿದೆ. ಇಲ್ಲಿ ಓದು ವೇದಕ್ಕೆ ಅನ್ವಯವಾಗುವುದು ಮತ್ತು ಅಂದಿನ ಬರೆಹರೂಪಿ ಅಧ್ಯಯನದ ಮಾದರಿಗೆ ದೊರೆಯುವ ಪ್ರತಿಕ್ರಿಯೆ ಗಮನಾರ್ಹ.

ಕಾಡಸಿದ್ದೇಶ್ವರ ವೀರಶೈವ ಷಟ್ಸ್ಥಲ(ವ.೪೮೮)ದಲ್ಲಿ "ಓದಿದರೆ ಓದಬಹುದು ಅಧಮ ಮೂಢರ ಮುಂದೆ। ಅರಸು ಪ್ರಧಾನಿಗಳಾದ ಪುರುಷರ ಮುಂದೆ ಓದಲಾಗದು"(ಕಲಬುರ್ಗಿ ಎಂ.ಎಂ. (ಸಂ); ೨೦೧೬ ಆ; ಪು.೧೧೫) ಎಂಬ ಸಾಲಿದೆ. "ಹಗಲೋದಿ ಬ್ರಹ್ಮಂಗೆ

ಪೇಳಿದೆ, ಇರುಳೋದಿ ವಿಷ್ಣುವಿಂಗೆ ಪೇಳಿದೆ, ಉಭಯವಿಲ್ಲದ ವೇಳೆಯಲ್ಲಿ ಓದಿ ರುದ್ರಂಗೆ ಪೇಳಿದೆ, ಎನ್ನ ಓದು ಕೇಳಿ ನಿದ್ರೆಯ ಕಳೆದು, ಜಾಗ್ರದಲ್ಲಿ ಕುಳಿತಿರ್ಪರು ನೋಡೆಂದೆನಯ್ಯಾ" (ಅದೇ: ಪು.೧೧೪) ಎಂದಾಗ (ವ.೪೮೬) ಅರ್ಥವಿಸ್ತಾರ ಕಾಣಿಸುತ್ತದೆ.

ಆದಯ್ಯರ ವಚನ(ವ.೧೯೯೧)ದಲ್ಲಿ "ಶಬ್ದಶಾಸ್ತ್ರ ತರ್ಕಾಗಮಂಗಳ ಹೇಳಿ ಕೇಳಿ, ಕಲಿತುಲಿದವರೆಲ್ಲಾ ವಿದ್ಯಾಗೂಡಾದರಲ್ಲದೆ, ಲಿಂಗಗೂಡಾದುದಿಲ್ಲ ನೋಡಯ್ಯಾ, ಕಲಿಕಲಿತು ಉಲಿವ ಅಭ್ಯಾಸದ ಮಾತಿಂಗೆ ಮರುಳಪ್ಪರೆ ನಮ್ಮ ಶಿವಶರಣರು" (ಕಲಬುರ್ಗಿ ಎಂ.ಎಂ. (ಸಂ); ೨೦೧೬ ಅ; ಪು.೧೦೫೮) ಎನ್ನುವಲ್ಲಿ ಕಲಿಯುವಿಕೆಯ, ಓದುವಿಕೆಯ ಅನ್ವಯಿಕತೆಯ ಅರಿವು ಇರುವ ಬಗೆ ಸ್ಪಷ್ಟವಾಗುತ್ತದೆ.

ಈ ಸಂಬಂಧವಾದ ಚಿಂತನೆಗಳನ್ನು ವಿಸ್ತರಿಸುವಲ್ಲಿ ಆಧುನಿಕ ಸಂದರ್ಭದ ವಚನಗಳ ಸಂಕಲನದ ಸೂಕ್ಷ್ಮಗಳನ್ನು ಗಮನಿಸಿಕೊಳ್ಳಬೇಕು(ನೋ.ಓ.ಎಲ್.ನಾಗಭೂಷಣಸ್ವಾಮಿ (ಸಂ); ೨೦೦೪) ವಚನಗಳನ್ನು ಧಾರ್ಮಿಕ ಚೌಕಟ್ಟಿನ ಗ್ರಹಿಕೆಗಳಲ್ಲಿ ನೀಡುವ ಸಂದರ್ಭದಲ್ಲಿ ಕಾಣಿಸುವ ಜ್ಞಾನ ಪರಿಕಲ್ಪನೆಗಳು ಭಿನ್ನವಾಗಿರುವುದನ್ನು(ನೋ.ಫ.ಗು.ಹಳಕಟ್ಟಿ; ೧೯೩೫) ಅರ್ಥೈಸಿಕೊಳ್ಳಲು ಇಂದಿನ ಅಧ್ಯಯನಗಳು ಸಹಾಯಕವಾಗುತ್ತವೆ.

ಕಂಠಪಾಠ, ಗಿಳಿಯೋದಿನ ಬಗ್ಗೆ ತೀಕ್ಷ್ಣವಾದ ಪ್ರತಿಕ್ರಿಯೆಗಳು ವಚನಗಳಲ್ಲಿರುವುದು ಕುತೂಹಲದ ಅಂಶವಾಗಿದೆ. ಮೌಖಿಕತೆಯ ಹಾದಿಯಲ್ಲಿ ಕಂಠಸ್ಥಗೊಳಿಸಿಕೊಳ್ಳುವುದು ಸಹಜ ಪ್ರಕ್ರಿಯೆ, ಹಾಗಾಗಿ ಇಲ್ಲಿ ಕಾಣಿಸುವ ಈ ಪ್ರತಿಕ್ರಿಯೆಗಳು ಜ್ಞಾನದ, ಅರಿವಿನ, ತಿಳಿವಳಿಕೆಯ ಕಡೆ ಗಮನಕೊಡದೆ ಉರುಹೊಡೆವ ಪರಿಪಾಠದ ಕಡೆಗಿರುವಂತೆ ತೋರುತ್ತದೆ. ಶರಣರ ಅರಿವಿನ ಹಾದಿಯ ವಿನೀತ ಭಾವವನ್ನೂ ಸೂಚಿಸಲು ಬಳಕೆ ಆಗಿರುವ "ಅಯ್ಯಾ ಎನ್ನ ಓದಿನ ಓದೆಲ್ಲಾ ಗಿಳಿ ಓದಯ್ಯಾ... ಎನ್ನ ನಡೆನುಡಿಯೆಲ್ಲ ಶುನಿ ಸೂಕರ ಕುಕ್ಕುಟ ಗಾರ್ದಭನಂತಯ್ಯ" ಎಂಬ ಸಾಲುಗಳನ್ನೂ ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಪ್ರಸ್ತುತ ವಚನಗಳಲ್ಲಿ ಓದಿನ ಗ್ರಹಿಕೆಯು ವಿದ್ಯೆ, ಜ್ಞಾನ ಮತ್ತು ಭಕ್ತಿಯ ಸಂಬಂಧ ಹೊಂದಿರುವುದು ಕಂಡುಬರುತ್ತದೆ. ಬಹುತೇಕ ಸಂದರ್ಭಗಳಲ್ಲಿ ಓದಿನ ಗ್ರಹಿಕೆಯು ಗುರು ಲಿಂಗ ಜಂಗಮದ ಪರಿಕಲ್ಪನೆಯೊಂದಿಗೆ ಬೆಸೆದುಕೊಳ್ಳುತ್ತದೆಯಾದರೂ ಓದು ಎಂಬುದು ನಡೆ, ನುಡಿ ವಿಕಸನಕ್ಕೆ ಸಂಬಂಧಿಸಿರುವುದು ಎಂಬ ಭಾವ ಇಲ್ಲಿ ಸ್ಪಷ್ಟವಾಗುತ್ತದೆ.

**ಆಕರ ಸೂಚಿ**


೧. ಕಲಬುರ್ಗಿ ಎಂ.ಎಂ. (ಪ್ರಸಂ); ೨೦೧೬ ಅ; ಬಸವಯುಗದ ವಚನ ಮಹಾಸಂಪುಟ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨. ಕಲಬುರ್ಗಿ ಎಂ.ಎಂ. (ಪ್ರಸಂ); ೨೦೧೬ ಆ; ಬಸವೋತ್ತರಯುಗದ ವಚನ ಮಹಾಸಂಪುಟ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೩. ಹಿರೇಮಠ ಎಸ್.ಎಂ (ಸಂ); ೨೦೧೧; ವಚನ ಕಾವ್ಯಚಿಂತನೆ ; ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೪. ಹಳಕಟ್ಟಿ ಫ.ಗು; ೧೯೩೫; ವಚನಶಾಸ್ತ್ರ ಸಾರ ಭಾಗ ೩; ಪಿ.ಜಿ.ಹಳಕಟ್ಟಿ, ವಿಜಾಪುರ

೫. ನಾಗಭೂಷಣಸ್ವಾಮಿ ಓ.ಎಲ್ (ಸಂ); ೨೦೦೪; ವಚನ ಸಾವಿರ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬ ವೀರಣ್ಣ ರಾಜೂರ; ೨೦೦೪; ವಚನ ಸಂಶೋಧನ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭ ಶ್ರೀನಿವಾಸಮೂರ್ತಿ ಎಂ.ಆರ್; ೧೯೬೮; ವಚನ ಧರ್ಮಸಾರ; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೆ.ಎಲ್.ಇ ಸಂಸ್ಥೆಯ

# ಎಸ್. ನಿಜಲಿಂಗಪ್ಪ ಕಾಲೇಜು

ರಾಜಾಜಿನಗರ 2ನೇ ಹಂತ, ಬೆಂಗಳೂರು - 560 010.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯಿಂದ ಮೂರನೇ ಆವೃತಿಯಲ್ಲಿ
A+ ದರ್ಜೆಯ ಮರು ಮಾನ್ಯತೆ (4 ಅಂಕಕ್ಕೆ 3.53 ಮೌಲ್ಯಂಕ) ಪಡೆದ ಸಂಸ್ಥೆ.

ಯು.ಜಿ.ಸಿ-ಸ್ಟ್ರೈಡ್, ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು
ಕನ್ನಡ ವಿಭಾಗ ಸಹಯೋಗದಲ್ಲಿ ಆಯೋಜಿಸಿದ

# ಕರ್ನಾಟಕ ಜನಪದ ಮಹಾಕಾವ್ಯಗಳು : ಪರಂಪರೆ ಮತ್ತು ಸಂಸ್ಕೃತಿ

ರಾಷ್ಟ್ರೀಯ ವಿಚಾರ ಸಂಕಿರಣ



ಸೆಪ್ಟೆಂಬರ್ 07, 2021

ISBN – 978-93-5526-247-9

**ಕೆ.ಎಲ್.ಇ ಸಂಸ್ಥೆಯ**

**ಎಸ್.ನಿಜಲಿಂಗಪ್ಪ ಕಾಲೇಜು**

**ರಾಜಾಜಿನಗರ 2ನೇ ಹಂತ, ಬೆಂಗಳೂರು – 560010**

**ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯಿಂದ ಮೂರನೇ ಆವೃತಿಯಲ್ಲಿ A+ ದರ್ಜೆಯ ಮರು ಮಾನ್ಯತೆ (4 ಅಂಕಕ್ಕೆ 3.53 ಮೌಲ್ಯಂಕ) ಪಡೆದ ಸಂಸ್ಥೆ**

**ಯು.ಜಿ.ಸಿ – ಸ್ಟ್ರೈಡ್, ಆಮತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಕನ್ನಡ ವಿಭಾಗ ಸಹಯೋಗದಲ್ಲಿ ಆಯೋಜಿಸಿದ**

# ಕರ್ನಾಟಕ ಜನಪದ ಮಹಾಕಾವ್ಯಗಳು: ಪರಂಪರೆ ಮತ್ತು ಸಂಸ್ಕೃತಿ

ಪ್ರಧಾನ ಸಂಪಾದಕರು

**ಡಾ. ಅರುಣಕುಮಾರ ಬಿ ಸೋನಪ್ಪನವರ**

ಸಂಪಾದಕರು

**ಡಾ. ಸುರೇಶ ಕೆ.ಸಿ**

ಸಹ ಸಂಪಾದಕರು

ಡಾ. ಜಿ. ಆಶಾ.

ಶ್ರೀಮತಿ. ಭುವನೇಶ್ವರಿ.ಜಿ

ಶ್ರೀ ಮೋಹನ್.ಎಂ

ಶ್ರೀ ವೆಂಕಟೇಶ್.ಟಿ.ಕೆ

ಪ್ರಕಾಶಕರು

ಡಾ. ಅರುಣಕುಮಾರ ಬಿ ಸೋನಪ್ಪನವರ

ಪ್ರಾಂಶುಪಾಲರು

ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು

ರಾಜಾಜಿನಗರ 2ನೇ ಹಂತ ಬೆಂಗಳೂರು–10

# ಪರಿವಿಡಿ


| | | | |
|---|---|---|---|
| 1. | ಜನಪದ ಮಹಾಕಾವ್ಯದ ಸ್ವರೂಪ | – ಪ್ರೊ. ಹಿ.ಚಿ.ಬೋರಲಿಂಗಯ್ಯ | 1–4 |
| 2. | ಕನ್ನಡ ಜಾನಪದ ಮಹಾಕಾವ್ಯಗಳು ಒಂದು ಸಮೀಕ್ಷೆ | – ಪ್ರೊ. ತಮಿಳ್ ಸೆಲ್ವಿ | 5–11 |
| 3. | ತುಳು ಜನಪದ ಕಾವ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪ | – ಡಾ.ಎಂ.ಎಸ್.ದುರ್ಗಾಪ್ರವೀಣ | 12–15 |
| 4. | ಕನ್ನಡ ಮೌಖಿಕ ಕಾವ್ಯ (ಬುರ್ರಕಥಾ) ಪರಂಪರೆಗೆ ದರೋಜಿ ಈರಮ್ಮನವರ ಕೊಡುಗೆ | – ಡಾ.ಚೆಲುವರಾಜು | 16–19 |
| 5. | ಜನಪದ ಕಲಾಪ್ರದರ್ಶನ ತಂತ್ರಗಳು ಮತ್ತು ಆಧುನಿಕ ರಂಗಭೂಮಿ | – ಡಾ.ಟಿ.ಎಚ್.ಲವಕುಮಾರ್ | 20–23 |
| 6. | ಜನಪದ ಮಹಾಕಾವ್ಯಗಳ ಸ್ವರೂಪ | – ಡಾ. ರವಿಶಂಕರ್ ಎ.ಕೆ | 24–28 |
| 7. | ಪುರುಷಪ್ರಧಾನ ವ್ಯವಸ್ಥೆಯ ಪ್ರತಿಭಟನೆಯಧ್ವನಿ – ಸಂಕಮ್ಮ | – ಡಾ. ಸುರೇಶ ಕೆ.ಸಿ | 29–32 |
| 8. | ಜನಪದ ಮಹಾಕಾವ್ಯಗಳಲ್ಲಿ ದೈವಿಕತೆ | – ಪ್ರೊ.ಚಂದ್ರಶೇಖರ್.ಎನ್ | 33–37 |
| 9. | ಮಲೆ ಮಾದೇಶ್ವರ ಮಹಾಕಾವ್ಯ: ಸಾಂಸ್ಕೃತಿಕ ಚರಿತ್ರೆ. | – ಡಾ. ವಿಜಯ ಕುಮಾರ್. ಎಚ್.ಜಿ | 38–42 |
| 10. | ಮಲೆಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಭಕ್ತ ಮತ್ತು ದೈವ ಇಂದಿನ ಗ್ರಹಿಕೆಗಳು | – ಡಾ. ನಾಗವೇಂದ್ರ ಸ್ವಾಮಿ | 43–49 |
| 11. | ಜನಪದ ಮಹಾಕಾವ್ಯ: ಮಂಟೇಸ್ವಾಮಿಕಾವ್ಯ: ಕೆಂಪಾಚಾರಿ ಸಾಲು ಒಂದು ವಿಮರ್ಶಾತ್ಮಕ ನೋಟ | – ವಿಜಯ್‌ಕುಮಾರ್. ಟಿ | 50–54 |
| | | – ಚರಣರಾಜ .ಜೆ ಹೆಚ್ | 55–58 |
| 12. | ಜನಪದ ಮಹಾಕಾವ್ಯಗಳಲ್ಲಿ ಐತಿಹಾಸಿಕ ಪ್ರಜ್ಞೆ | – ಚೇತನಾ ಹೆಗಡೆ | 59–62 |
| 13. | ಅಧಿಕಾರಶಾಹಿ ವ್ಯವಸ್ಥೆಗೆ ಸಂಕಮ್ಮನ ಸವಾಲು | – ಡಾ. ಜಿ. ಆಶಾ | 63–65 |
| 14. | ಜನಪದ ದೈವ ಮೈಲಾರಲಿಂಗ ಕುರಿತ ಕಥಾ ಪರಂಪರೆ | – ಅಶ್ವಿನಿ ಬಾಯಿ ಕೆ | 66–69 |
| 15. | ನಿತ್ಯನೂತನ ಮಂಟೇಸ್ವಾಮಿ ಜನಪದ ಮಹಾಕಾವ್ಯ | – ಡಿ. ಅಬ್ದುಲ್ ನಿಶಾರ್ | 70–72 |
| 16. | ಜನಪದ ಮಹಾಕಾವ್ಯಗಳ ಸಂಸ್ಕೃತಿ ಹಾಗೂ ಪರಂಪರೆ | – ಶಾಂತಕುಮಾರ | 73–76 |
| 17. | ಜನಪದ ಮಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪ | – ಲಕ್ಷ್ಮಿದೇವಿ.ಎನ್ | 77–80 |
| 18. | ಜನಪದ ವೃತ್ತಿಗಾಯಕರು: ಕಂಸಾಳೆಯವರು | – ಮಂಜುನಾಥ.ಡಿ.ಕೆ. | 81–85 |
| 19. | ಜನಪದ ಮಹಾಕಾವ್ಯಗಳಲ್ಲಿ ಪ್ರಾಣಿ ಮತ್ತು ಪಕ್ಷಿ ಜಗತ್ತು | | |
| 20. | ಕನ್ನಡ ಜನಪದ ಮಹಾಕಾವ್ಯ ಮಲೆ ಮಾದೇಶ್ವರ : ಪ್ರತಿರೋಧದ ನೆಲೆಗಳು | – ಡಾ. ಮಲ್ಲಯ್ಯ ಸಂಡೂರು | 86–90 |
| 21. | ಜನಪದ ಮಹಾಕಾವ್ಯಗಳಲ್ಲಿ ಪವಾಡಗಳು | – ಡಾ.ಕೆ.ಪ್ರೇಮಕುಮಾರ | 91–94 |
| 22. | ಜನಪದ ಸಾಹಿತ್ಯದಲ್ಲಿ ಸ್ತ್ರೀ ಪಾತ್ರ ಅಂದು – ಇಂದು | – ನಾಗವೇಣಿ ಎನ್ | 95–99 |
| 23. | ಚಂದ್ರಶೇಖರ ಕಂಬಾರ ವಿರಚಿತ ಜನಪದ ಮಹಾಕಾವ್ಯ 'ಚಕೋರಿ' : ಭಾಷೆ ಮತ್ತು ಶೈಲಿ | – ಸಂದೇಶ್.ಎ.ಎಸ್. | 100–104 |
| 24. | ಜನಪದ ಸಾಹಿತ್ಯದಲ್ಲಿ – ದೇಸಿ ಸಂಸ್ಕೃತಿ | – ಪ್ರಕಾಶ ಬಿ. | 105–108 |
| 25. | ಜನಪದ ಮಹಾಕಾವ್ಯಗಳ ವೃತ್ತಿಗಾಯಕರು ಒಂದು ವಿಶ್ಲೇಷಣೆ | – ಪ್ರೊ. ಪುಷ್ಪ.ಎಂ | 109–114 |
| 26. | ಜನಪದ ಮಹಾಕಾವ್ಯಗಳಲ್ಲಿ ವಾದ್ಯಗಳ ಪರಿಕಲ್ಪನೆ | – ಡಾ. ಗುಡ್ಡಪ್ಪ ಜಿ. | 115–120 |
| 27. | ಜನಪದ ಮಹಾಭಾರತ | – ಡಾ. ಸುಮ ಆರ್. | 121–125 |
| 28. | ಶಿಷ್ಟ ದೈವಗಳನ್ನು ಸೋಲಿಸುವ ಜನಪದ ಮಹಾಕಾವ್ಯಗಳ ನಾಯಕರು | – ಸೈಯದ್ ಮುಯಿನ್ | 126–129 |
| 29. | ಶ್ರೀ ಮಲೆ ಮಾದೇಶ್ವರ ಮಹಾಕಾವ್ಯದಲ್ಲಿ ಸ್ತ್ರೀ ಪಾತ್ರಗಳ ಪ್ರಸ್ತುತತೆ | – ಪ್ರೊ. ಭುವನೇಶ್ವರಿ. ಜಿ | 130–133 |
| 30. | ಜನಪದ ಮಹಾಕಾವ್ಯಗಳಲ್ಲಿ ನಾಯಕಿಯರು | – ಡಾ. ಸೀಮಾ. ಎಸ್.ಆರ್ | 134–137 |
| 31. | ಜುಂಜಪ್ಪನ ಕಾವ್ಯ: ಮಹಿಳೆಯನ್ನು ಕಾಡುವ ಸತ್ವ ಪರೀಕ್ಷೆಗಳು | – ಡಾ.ಪುಷ್ಪಭಾರತಿ ಆರ್.ಎ | 138–142 |
| 32. | ಜನಪದ ಕಾವ್ಯಗಳಲ್ಲಿ ಹೆಣ್ಣು | – ಮೋಹನ್. ಎಂ | 143–146 |
| 33. | ಜನಪದ ಕಾವ್ಯಗಳಲ್ಲಿ ದೈವಿಕತೆ | – ವೆಂಕಟೇಶ್.ಟಿ.ಕೆ | 147–149 |
| 34. | ಮಲೆಮಹದೇಶ್ವರ ಜನಪದ ಮಹಾಕಾವ್ಯ: ಸಂಕಮ್ಮನ ಪ್ರತಿರೋಧದ ನೆಲೆ | – ಪ್ರತಿಮಾ ಎಂ ಸಿ | 150–152 |
| 35. | ಜಾನಪದ ಕಾವ್ಯದೊಳಗಿನ ಮಹಿಳೆ | – ಮಿಲನ್ ಎಂ. ಹೆಚ್ | 153–157 |
| 36. | ಮಲೆಮಹದೇಶ್ವರ ಕಾವ್ಯದ ಸಂಕಮ್ಮನ ಸಾಲು | – ರವಿ. ಎನ್ | 158–160 |

| | | |
|---|---|---|
| 37. ಆಧುನಿಕ ಸಂವೇದನೆಯ ನಾಟಕ: ಎಚ್. ಎಸ್. ಶಿವಪ್ರಕಾಶರ ಮಂಟೇಸ್ವಾಮಿ ಕಥಾಪ್ರಸಂಗ | – ಡಾ. ತಾರಾಮಣಿ | 161–166 |
| 38. ಜನಪದ ಮಹಾಕಾವ್ಯಗಳನ್ನು ಹಾಡುವ ವೃತ್ತಿಗಾಯಕರ ಕಲೆ ಮತ್ತು ಬದುಕು | – ಪ್ರೊ. ಹರೀಶ ಎಂ.ಸಿ | 167–172 |
| 39. ಸಂಕಮ್ಮನ ಬಲಗೈ ಭಾಷೆ ಕವಟ್ಲು: ಅಸ್ಮಿತೆಗಾಗಿ ಹೆಣ್ಣಿನ ಹೋರಾಟ | – ರಶ್ಮಿ ಪಿ | 173–176 |
| 40. ಜನಪದ ವೃತ್ತಿ ಗಾಯಕ ಸಂಪ್ರದಾಯ | – ಅನಿತ ಕೆ.ವಿ | 177–181 |
| 41. ಜನಪದ ವೃತ್ತಿಗಾಯಕರು: ಒಂದು ಅವಲೋಕನ | – ಪ್ರಭಾವತಿ ಜೆ. | 182–185 |
| 42. ಜನಪದ ವೃತ್ತಿಗಾಯಕರು | – ಸುಜಾತ.ಎ | 186–192 |
| 43. ಜನಪದ ಮಹಾಕಾವ್ಯಗಳ ರಾಚನಿಕ ಸ್ವರೂಪ | – ಶೋಭಾರಾಣಿ.ಎನ್ | 193–196 |
| 44. ಮಲೆಯ ಮಾದೇಶ್ವರ ಮಹಾಕಾವ್ಯದ ನಾಯಕಿಯಾಗಿ ಸತ್ಯಶರಣೆ ಸಂಕಮ್ಮ | – ಡಾ.ಅಶ್ವಿನಿ ನಾಯಕ್ | 197–200 |
| 45. ಮಂಟೇಸ್ವಾಮಿ ಜನಪದ ಕಾವ್ಯದಲ್ಲಿ ಪವಾಡಗಳು: ಸಂಕ್ಷಿಪ್ತ ವಿಶ್ಲೇಷಣೆ | – ವೇಣುಗೋಪಾಲ್.ಆರ್ | 201–204 |
| 46. ಅಮೋಘಸಿದ್ಧ ಪರಂಪರೆಯ ವೈಶಿಷ್ಟ್ಯತೆ | – ಸಾವಿತ್ರಿ ಮೋದಿ | 205–208 |
| 47. ಜನಪದ ಮಹಾಕಾವ್ಯಗಳಲ್ಲಿ 'ವಿವಾಹ' ಒಂದು ಅವಲೋಕನ | – ಡಾ.ಪ್ರೇಮಾ ಅಪಚಂದ | 209–214 |
| 48. ಜನಪದ ಮಹಾಕಾವ್ಯಗಳ ವೃತ್ತಿಗಾಯಕರು | – ಶಶಿಕಲಮ್ಮ. ಯು | 215–218 |
| 49. ಜನಪದ ಮಹಾಕಾವ್ಯಗಳ ವೃತ್ತಿ ಗಾಯಕರು | – ಡಾ. ಶಿವಗಂಗಾ ಯು. ಬಿಲಗುಂದಿ | 219–221 |
| 50. ಜನಪದ ಮಹಾಕಾವ್ಯ: ಮಂಟೇಸ್ವಾಮಿ ಕಾವ್ಯ ಕುರಿತು ಒಂದು ಅಧ್ಯಯನ | – ವಿಜಯಲಕ್ಷ್ಮೀ. ಡಿ | 222–225 |
| 51. ಜನಪದ ಮಹಾಕಾವ್ಯಗಳ ವೃತ್ತಿಗಾಯಕರು | – ಶಾರದಮ್ಮ. ಎಂ .ಕೆ | 226–231 |
| 52. ಕನ್ನಡ ಜನಪದ ಮಹಾಕಾವ್ಯಗಳು: ಒಂದು ಅಧ್ಯಯನ | – ಡಾ. ಭಾಗ್ಯಮ್ಮ.ಜಿ | 232–233 |
| 53. ಜನಪದ ಕಥೆಗಳಲ್ಲಿ ಪ್ರತಿನಿಧೀಕರಣಗೊಂಡ ಸಾಂಸ್ಕೃತಿಕ ಮೌಲ್ಯಗಳು | – ಲೋಹಿತ್.ಪಿ | 234–238 |
| 54. ಜನಪದ ಒಗಟುಗಳ ವೈಶಿಷ್ಟ್ಯತೆಯ ಜೊತೆಗಿನ ಒಳ ನೋಟ | – ಶಿವಾನಂದ | 239–243 |

# 3. ತುಳು ಜನಪದ ಕಾವ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪ

ಡಾ.ಎಂ.ಎಸ್.ದುರ್ಗಾಪ್ರವೀಣ

ತುಳುವಿನ ಜನಪದ ಮಹಾಕಾವ್ಯಗಳಲ್ಲಿ ಕಂಡು ಬರುವ ಪ್ರಕೃತಿ ಚಿತ್ರಣವು ಬೆರಗು ಮೂಡಿಸುವಂತದಾಗಿದ್ದು ತತ್ಸಂಬಂಧೀ ಅಧ್ಯಯನಗಳನ್ನು ವಿಸ್ತರಿಸಿಕೊಳ್ಳುವ ದೃಷ್ಟಿಯಿಂದ ಈ ವಿವರಗಳಿಗೊಂದು ಪ್ರವೇಶಿಕೆಯನ್ನು ಒದಗಿಸಿಕೊಡುವುದು ಪ್ರಸ್ತುತ ಪತ್ರಿಕೆಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಮೊದಲನೆಯ ಭಾಗದಲ್ಲಿ ತುಳುವಿನ ಜನಪದ ಮಹಾಕಾವ್ಯಗಳಾಗಿ ಚರ್ಚೆಗೊಳಗಾಗಿರುವ[1], ಬಹು ಆಯಾಮಗಳಿಂದ ಅಧ್ಯಯನಕ್ಕೊಳಗಾಗಿರುವ ಸಿರಿ ಮಹಾಕಾವ್ಯ, ಕೋಟಿ ಚನ್ನಯಗಳ ಒಂದು ಪರಿಚಯಾತ್ಮಕ ಪ್ರವೇಶ ಮತ್ತು ಇಂದು ಲಭ್ಯವಿರುವ ಹಲವು ಪಠ್ಯಗಳಲ್ಲಿರುವ ಪ್ರಕೃತಿ ಚಿತ್ರಣದ ಸ್ವರೂಪವನ್ನು ಗ್ರಹಿಸಿಕೊಳ್ಳುವ ಬಗೆಯನ್ನು, ಎರಡನೆಯ ಭಾಗದಲ್ಲಿ ನಿರ್ದಿಷ್ಟವಾಗಿ ಮೌಖಿಕದಿಂದ ಬರಹರೂಪಕ್ಕೆ ಬಂದಿರುವ ಪ್ರಾರಂಭ ಘಟ್ಟದ ಪಠ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪವನ್ನು ಕಂಡುಕೊಳ್ಳುವ, ತನ್ಮೂಲಕ ಕಾಲಮಾನದ ಹಾದಿಯಲ್ಲಾಗಿರುವ ಬದಲಾವಣೆಗಳನ್ನು ಗ್ರಹಿಸಿಕೊಳ್ಳುವೆಡೆಗೆ ಸಾಗುವ ಬಗೆಯನ್ನು ಸಂಕ್ಷಿಪ್ತವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಇಲ್ಲಿ ತುಳು ಜನಪದ ಕಾವ್ಯಗಳ ಅಧ್ಯಯನ ಪರಂಪರೆ ಬೆಳೆದು ಬಂದ ಮಾರ್ಗವನ್ನು ನೆನಪಿಸಿಕೊಳ್ಳಬೇಕು.[2] ಈ ಅಧ್ಯಯನಗಳ ಅರಿವು ಪ್ರಸ್ತುತ ವಿಚಾರಕ್ಕೆ ತೆರೆದುಕೊಳ್ಳಲು ಅನುಕೂಲಕರ. ತುಳು ಜನಪದ ಮಹಾಕಾವ್ಯಗಳ ಅಧ್ಯಯನದ ಸಂದರ್ಭದಲ್ಲಿ ಕೆಲವೊಂದು ವಿಚಾರಗಳು ಮುಖ್ಯವಾಗುತ್ತವೆ. ತುಳುನಾಡು ಭೌಗೋಳಿಕವಾಗಿ-ಪ್ರಾಕೃತಿಕವಾಗಿ ಬಹು ಸಂಪದ್ಭರಿತವಾದ ಪ್ರದೇಶ. ಇಂದಿನ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹೀಗೆ ತುಳು ಭಾಷಿಕ ಪರಿಸರವನ್ನು ಬಿಂಬಿಸುವಂತಾದ್ದು ಈ ತುಳುನಾಡು ಎಂಬ ಪರಿಭಾಷೆ. ಶತಮಾನಗಳಿಂದಲೂ ಕಾಡು-ಕಡಲುಗಳು ಇಲ್ಲಿನ ಜನಪದ ಸಂವೇದನೆಯನ್ನು ರೂಪಿಸುತ್ತಾ ಬಂದಿವೆ.[3] ಅದು ಇಲ್ಲಿನ ಜನಪದ ಜಗತ್ತಿನ ಅಭಿವ್ಯಕ್ತಿಯಲ್ಲಿ ಸಮರ್ಥವಾಗಿ ಪ್ರತಿಫಲಿಸಿದೆ, ದೃಶ್ಯ-ಶ್ರವ್ಯ-ಮುದ್ರಿತ ಪಠ್ಯಗಳಲ್ಲಿ ಸಾಕ್ಷಿಗಳಾಗಿ ಉಳಿದುಕೊಂಡಿವೆ. ಈ ನಿಟ್ಟಿನಲ್ಲಿ ಪಾಡ್ದನಗಳು ಅಥವಾ ಸಂಧಿಗಳು ಬಹಳ ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ.

ಈ ಸಂದರ್ಭದಲ್ಲಿ ಕೋಟಿ ಚನ್ನಯ ಮತ್ತು ಸಿರಿ ಕಾವ್ಯಗಳು ವಿಶೇಷವಾಗಿ ಕಂಡುಬರುತ್ತವೆ. ಕೋಟಿ – ಚನ್ನಯ ಪಾಡ್ದನ ಅವಳಿ ವೀರರ ಕಥಾನಕವಾಗಿದ್ದು ಇಂದು ಶೋಷಿತ ಸಮುದಾಯದ ಸ್ವಾಭಿಮಾನದ ಪ್ರತೀಕವಾಗಿ ಕಂಡುಬರುತ್ತದೆ. ಇದನ್ನು 'ಬಂಟೆರೆ ಸಂಧಿ' ಎಂದೂ ಕರೆಯುವುದಿದೆ. ಈ ಪಾಡ್ದನದ ಒಳಗೇ ನಿರ್ದಿಷ್ಟ ಭಾಗಗಳು ದೇಯಿ ಬೈದೆತಿ ಸಂಧಿ, ಕೋಟಿ ಚನ್ನಯ ಸಂಧಿ, ಪೆರ್ಮಲೆ ಬಲ್ಲಾಳ ಸಂಧಿ ಇವು ಬಿಡಿಬಿಡಿಯಾಗಿಯೂ ಅಸ್ತಿತ್ವ ಉಳಿಸಿಕೊಂಡಿವೆ. ಅವು ಖಂಡ ಕಾವ್ಯಗಳ ಮಾದರಿಯಲ್ಲಿಯೂ ಬಹಳ ಜನಪ್ರಿಯವಾಗಿವೆ. (ನೋ: ವಾಮನ ನಂದಾವರ; 2001). ತುಳುನಾಡಿನ ವಿವಿಧ ಪ್ರದೇಶಗಳೊಂದಿಗೆ ಹೆಣೆದುಕೊಳ್ಳುವ ನಿರ್ದಿಷ್ಟ ಘಟನಾವಳಿಗಳು ಕೋಟಿ ಚನ್ನಯ ಕಾವ್ಯದ ಬೆಳವಣಿಗೆಗೆ ಮಾತ್ರವಲ್ಲ ಸಂಕೀರ್ಣತೆಗೂ ಕಾರಣವಾಗಿದೆ. ಸಮಕಾಲೀನ ಸಂದರ್ಭದಲ್ಲಿ ದೈವಗಳಾಗಿ ಕೋಟಿ ಚನ್ನಯರು ಆರಾಧನೆಗೊಳಗಾಗುವ ಬಗೆಯೂ ಗಮನಾರ್ಹವಾದುದು. (ನೋ: ದಾಮೋದರ ಕಲ್ಮಾಡಿ (ಸಂ); 2002) ಆಯಾ ಭೌತಿಕ ವಿವರಗಳೊಂದಿಗೆ ಸುದೀರ್ಘವಾಗಿ ಸಾಗುವ ಈ ಜೀವನಚಿತ್ರಣದ ಕಥಾನಕವು ಇಂದಿಗೂ ಜೀವಂತವಾಗಿರುವ ಆಚರಣೆಗಳೊಂದಿಗೆ ಬೆಸೆದುಕೊಂಡು ಅತ್ಯಂತ ಜನಪ್ರಿಯವಾಗಿದೆ.

ಅದೇ ರೀತಿ 'ಸಿರಿಯ ಪಾಡ್ದನ'ವು 'ಸಿರಿ ಸಂಧಿ'ಯಾಗಿಯೂ ಕಾಣಿಸುತ್ತದೆ. ಇಲ್ಲೂ ಅಬ್ಬಗೆ-ದಾರಗೆ ಸಂಧಿ ಬಿಡಿಯಾದ ಅಸ್ತಿತ್ವ ಉಳಿಸಿಕೊಂಡಿದೆ. ಸಿರಿ ಪಾಡ್ದನದ ಸತ್ಯನಪುರದ ಅಕ್ಕರಸು ಪೂಂಜೆದಿ ಕತೆಯಾಗಿ ಜನಪ್ರಿಯವಾಗಿದೆ. ಸಿರಿ ಕಾವ್ಯವು ಸ್ತ್ರೀ ಸ್ವಾತಂತ್ರ್ಯದ, ಸ್ವಾಭಿಮಾನದ ಪ್ರತೀಕವಾಗಿ ಕಂಡು ಬರುತ್ತದೆ. (ನೋ: ನಾವಡ ಎ.ವಿ.(ಸಂ); 1999) ಮೂರು ತಲೆಮಾರುಗಳ ಈ ಸುದೀರ್ಘ ಕಥಾನಕವು ನಮ್ಮ ಜನಪದ ಅಭಿವ್ಯಕ್ತಿಯ ಸಶಕ್ತ ಉದಾಹರಣೆಗಳಲ್ಲೊಂದು. ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಆರಾಧನೆಗೊಳಗಾಗುವ ಸಿರಿ, ಕುಮಾರ ಮೊದಲಾದವರು ಕೇವಲ ಕಥಾನಕದ ಪಾತ್ರಗಳಾಗಿ ಉಳಿಯದೆ ಇಂದಿಗೂ ದೈವಗಳಾಗಿ ಸಮುದಾಯದ ಭಾವಭಿತ್ತಿಯ ಭಾಗವಾಗಿದ್ದಾರೆ.

ಹರಿಗಡಿಯದ ನಂಬಿಕೆ, ಆಚರಣೆಗಳೊಂದಿಗೆ ಉಳಿದು ಬರುತ್ತಿರುವ ತುಳುನಾಡಿನ ಇವೆರಡೂ ಕಾವ್ಯಗಳು ಕರ್ನಾಟಕ ಮಾತ್ರವಲ್ಲದೆ ಭಾರತೀಯ ಸಂದರ್ಭದ ಜನಪದ ಅಧ್ಯಯನದಲ್ಲೂ ಗುರುತರ ಪಾತ್ರ ವಹಿಸುತ್ತಿವೆ. ತುಳು

ISBN – 978-93-5526-247-9 

ಭಾಷೆಯ ಮೌಖಿಕ ಸಾಹಿತ್ಯವು ದೇಶ ವಿದೇಶಗಳ ವಿದ್ವಾಂಸರಿಗೆ ಬಹು ಅಚ್ಚರಿಯ ಸಂಗತಿಯಾಗಿ ಕಂಡಿರುವುದನ್ನು ಈ ಹಿನ್ನೆಲೆಯಲ್ಲಿ ಮತ್ತೆ ಗುರುತಿಸಬೇಕು. (ನೋ: ಚಿನ್ನಪ್ಪ ಗೌಡ ಕೆ; 1990) ಬಹು ಆಯಾಮಗಳ ಸಂಶೋಧನೆಗಳು ಇಲ್ಲಿ ನಡೆದಿರುವುದನ್ನು ಗಮನಿಸುವಾಗ ಜನಜೀವನದ ಮೂಲಶಕ್ತಿ ಸತ್ವ ಜನಪದ ದನಿಬನಿಗಳಾಗಿ ಮೌಖಿಕ ರೂಪದಲ್ಲಿ ಉಳಿದುಕೊಂಡು ಬಂದಿರುವಲ್ಲಿ ಸುತ್ತಲಿನ ಪ್ರಾಕೃತಿಕ ಸಂಪತ್ತಿನೊಂದಿಗೆ ಹೆಣೆದುಕೊಳ್ಳುವ ಬಗೆಯೂ ಮುಖ್ಯವಾಗುತ್ತದೆ, ಪ್ರಕೃತಿಯ ಚಿತ್ರಣವು ಬರುವ ಬಗೆಯಲ್ಲಿ ನೆಲದ ದನಿಗಳು ಸೇರಿಕೊಂಡಿರುತ್ತವೆ, ಅವು ಜೀವಜಾಲದ ವಿಕಸನದ ಹೆಜ್ಜೆಗುರುತುಗಳನ್ನು ಅರ್ಥ ಮಾಡಿಕೊಳ್ಳುವಲ್ಲಿಯೂ ಸಹಾಯಕವಾಗುತ್ತವೆ. ಪ್ರಕೃತಿಯ ಸೂಕ್ಷ್ಮ ನೆಲೆಗಳು ಮಾತಿನ ರೂಪದ ಭಾಗವಾಗಿ ಬರುವ ಬಗೆ ಮುಖ್ಯವಾಗುತ್ತದೆ. ಪಾಡ್ದನಗಳು ಸಾಮಾನ್ಯವಾಗಿ ತುಳುನಾಡಿನ ಭೂತಾರಾಧನೆಗೆ ಸಂಬಂಧಪಟ್ಟಿವೆಯಾದರೂ ಕೋಟಿ ಚೆನ್ನಯರನ್ನು, ಸಿರಿಯನ್ನು ಪಾಡ್ದನಗಳಲ್ಲಿ ಭೂತಗಳು ಎಂದು ಕರೆಯುವ ಪದ್ಧತಿ ಇಲ್ಲ. (ನೋ: ವಿವೇಕ ರೈ ಬಿ.ಎ; 1985) ಅಲ್ಲಿ ಅವರನ್ನು ಅತಿಮಾನುಷ ಶಕ್ತಿಗಳಾಗಿ ಆರಾಧಿಸುವ, ಪೂಜಿಸುವ ಪದ್ಧತಿ ಇದ್ದು ಆಗ ಈ ಸಂಬಂಧಿತ ಪಾಡ್ದನವನ್ನು ಹಾಡುವಂತಹುದು ಕಾಣಿಸುತ್ತದೆ. ಸ್ತ್ರೀಯರು ಶಕ್ತಿ ಸ್ವರೂಪಿಣಿಯರಾಗಿ ಆರಾಧನೆಗೊಳಾಗುವುದನ್ನು ಇಲ್ಲಿ ಪೂರಕವಾಗಿ ಗುರುತಿಸಿಕೊಳ್ಳಬೇಕು. (ನೋ: ಸಾವಿತ್ರಿ ಕೆ; 2006)

ತುಳು ಜನಪದ ಮಹಾಕಾವ್ಯಗಳಾಗಿ ಕೋಟಿ ಚನ್ನಯ, ಸಿರಿ ಕಾವ್ಯಗಳನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಕಾವ್ಯಗಳಲ್ಲಿ ಕಾಣಿಸುವ ಪ್ರಕೃತಿ ಚಿತ್ರಣದ ಸ್ವರೂಪವನ್ನು ಎರಡು ವಿಧವಾಗಿ ಕಂಡುಕೊಳ್ಳಬಹುದು. ಮೊದಲನೆಯದು, ತುಳುವಿನ ಜನಪದ ಮಹಾಕಾವ್ಯಗಳಲ್ಲಿ ಒಟ್ಟು ನಿರೂಪಣೆಯ, ವರ್ಣನೆಯ ಭಾಗವಾಗಿ ಬರುವಂತಾದ್ದು. ಇದು ಒಟ್ಟು ಮಹಾಕಾವ್ಯದ ಮೇಲ್ಪದರದಲ್ಲಿ, ಮೊದಲ ಓದಿನಲ್ಲಿ, ಕೇಳುವಿಕೆಯಲ್ಲಿ ಕಂಡುಬರುವಂತಾದ್ದು- ಗಿಡ-ಮರ-ಬಳ್ಳಿ-ಪ್ರಾದೇಶಿಕ ಶ್ರೀಮಂತಿಕೆ, ಪ್ರಾಣಿ ಜಗತ್ತು- ಪಕ್ಷಿ ಜಗತ್ತು- ಕಾಡು -ಕಡಲಿನ ಅನುಸಂಧಾನದ ರೂಪಗಳು. ಉದಾಹರಣೆಗೆ ಕೋಟಿ ಚನ್ನಯ ಕಾವ್ಯದಲ್ಲಿ ಹಲವೆಡೆ ಬರುವ ವರ್ಣನೆಯ ಭಾಗಗಳನ್ನು ಗಮನಿಸಬಹುದು. ಬಿಲ್ಲವ ಸಮುದಾಯದ ಕೋಟಿ ಚನ್ನಯರ ಕಥಾನಕವು ಬೆಳವಣಿಗೆ ಹೊಂದುವ ಸಂದರ್ಭ, ದೇಯಿ ಬೈದೆತಿ ಹೆರಿಗೆ ನೋವು ಕಾಣಿಸಿಕೊಂಡು ತೆಂಗಿನಮರ ಹಿಡಿದುಕೊಂಡು ನಿಲ್ಲುವ ಸನ್ನಿವೇಶ, ಆಗ ಬುದ್ಯಂತನ ವ್ಯಂಗ್ಯ, ಮಕ್ಕಳ ಆಟದ ವರ್ಣನೆ, ಪ್ರಯಾಣದ ವಿವರ ಹೀಗೆ ವಿವಿಧ ಸನ್ನಿವೇಶಗಳಲ್ಲಿ ಕಾಣಿಸುವ ವಿವರಗಳು, ಹಾಗೆಯೇ ಸಿರಿ ಕಾವ್ಯದಲ್ಲಿ 'ಸುದೆ ದಾಟುವ ಸನ್ನಿವೇಶ', ಕುಮಾರ, ಅಬ್ಬಗೆ ದಾರಗೆಯ ವಿವಿಧ ಸಂದರ್ಭಗಳನ್ನು ಗುರುತಿಸಬೇಕು.

ಎರಡನೆಯದು, ನಿರ್ದಿಷ್ಟ ಆಚರಣೆಯ ಭಾಗವಾಗಿ- ಆರಾಧನಾ ಕ್ರಮದ ಅಂಗವಾಗಿ ಬರುವ ಪ್ರಕೃತಿ ಮನುಷ್ಯ ಸಂಬಂಧದ ಸ್ವರೂಪ. ಇದು ಒಟ್ಟು ಮಹಾಕಾವ್ಯದ ಒಳಪದರಗಳಲ್ಲಿ, ಸೂಕ್ಷ್ಮ ಓದಿನಲ್ಲಿ, ಆಲಿಸುವಿಕೆಯಲ್ಲಿ ಕಂಡುಬರುವಂತಾದ್ದು- ಹರಕೆ-ಆರಾಧನೆ- ಪೂಜೆ- ನಂಬಿಕೆ- ಆಚರಣೆಗಳ ಹಾಸುಹೊಕ್ಕಾಗಿ ಬರುವ ಚಿತ್ರಣಗಳು. ಉದಾಹರಣೆಗೆ 'ಸಿರಿ ಕಾವ್ಯ'ದಲ್ಲಿ ಲಂಕೆ ಲೋಕನಾಡಿನ ಸತ್ಯನಾಪುರದ ಅರಮನೆಯಲ್ಲಿದ್ದ ಬೆರ್ಮ ಆಳ್ವನಿಗೆ ಮಕ್ಕಳಿಲ್ಲದ ಕೊರಗು, ಕುಲದೈವವಾದ ಬೆರ್ಮೆರ್ ಒಂದು ದಿನ ಬ್ರಾಹ್ಮಣನ ರೂಪದಲ್ಲಿ ಬಂದು ಭಿಕ್ಷೆ ಬೇಡಿ, ಆಗ ಆದಿ ಆಲಡೆ ಪಾಳು ಬಿದ್ದಿರುವುದನ್ನು ತಿಳಿಸಿ ಅದನ್ನು ಜೀರ್ಣೋದ್ಧಾರ ಮಾಡಲು ಬೆರ್ಮಾಳ್ವನಿಗೆ ಹೇಳುವುದು, ಹಾಗೆ ಬೆರ್ಮಾಳ್ವ ಅಥವಾ ಅಜ್ಜೆರ್ ಸಂತತಿಗಾಗಿ ಆಲಡೆಯನ್ನು ಜೀರ್ಣೋದ್ಧಾರ ಮಾಡುವ ಸಂದರ್ಭ ಬರುತ್ತದೆ. ಈ ಭಾಗವನ್ನು ವಿಶೇಷವಾಗಿ ಗಮನಿಸಬೇಕು. ಸುಗ್ಗಿ ಹುಣ್ಣಿಮೆಯ ದಿನ ಜಾತ್ರೆಯನ್ನು ಏರ್ಪಡಿಸುವುದು, ಅರ್ಚಕರು ಆಗ ಪ್ರಸಾದ ರೂಪವಾಗಿ ಸಿಂಗಾರದ ಹೂವು, ಜೊತೆಗೆ ಆನೆ ಕಲ್ಲಿನಿಂದ ತೆಗೆದ ಗಂಧದ ಬಿಲ್ಲೆ ನೀಡುವುದು. ಅದನ್ನು ತಂದು ಬೆರ್ಮಾಳ್ವ ತನ್ನ ಅರಮನೆಯಲ್ಲಿ ಕಲ್ಲಕಲಂಬಿಯಲ್ಲಿ ಇಡುವುದು, ಅಲ್ಲಿ ಆ ಸಿಂಗಾರದ ಹೂ ಬಿಚ್ಚಿಕೊಂಡು ಅದರಲ್ಲಿ ಹೆಣ್ಣು ಮಗು ಕಾಣಿಸಿಕೊಳ್ಳುವಂತಾದ್ದು, ಸತ್ಯದ ಮಗು ಅದಾದುದರಿಂದ ಬೆರ್ಮಾಳ್ವ ಮಗುವಿಗೆ 'ಸತ್ಯನಾಲೋಕದ ಸಿರಿ' ಎಂಬ ಹೆಸರು ಇಡುವುದು ಗಮನಿಸಬೇಕು. ಭಿನ್ನ ಪಠ್ಯಗಳನ್ನು ಅಭ್ಯಸಿಸಿದಾಗಲೂ ಕತೆಯ ಹೊರವಿವರಗಳಿಗಿಂತಲೂ ಒಳಹೂರಣದಲ್ಲಿ ಅಡಕವಾಗುವ ಸಿಂಗಾರದ ಬಳಕೆ ಗಮನಾರ್ಹವಾಗಿ ಕಾಣಿಸುವಂತಾದ್ದಾಗಿದ್ದು ಇದು ಪ್ರಕೃತಿ ಸಂಬಂಧೀ ವಿವಿಧ ಚರ್ಚೆಗಳೆಡೆಗೆ ಕರೆದೊಯ್ಯುವಂತಾದ್ದು. ಕೋಟಿಚನ್ನಯ ಕಾವ್ಯದ ಪಠ್ಯದಲ್ಲಿ ಕಾಣಿಸುವ ದೇಯಿಯ ಸೀಮಂತದ ಚಿತ್ರಣದಲ್ಲಿ ಬರುವ 'ಬಂಗ ಬಾಳೆಯ ಕೊಡಿ ಎಲೆ'ಯನ್ನು ಇಲ್ಲಿ ಗುರುತಿಸಬೇಕು. ಅದರೊಂದಿಗೆ ಬರುವ ಮೇಲೋಗರದ ಬಗೆಗಳು, ಎಲೆ, ತಾವರೆ, ಕಾಡು, ಮರ, ಮೀನು ಇತ್ಯಾದಿ ವಿವರಗಳೂ ಈ ನೆಲೆಯವು.

ISBN – 978-93-5526-247-9

ಪಾಡ್ದನಗಳು, ಸಂಧಿಗಳು ಪ್ರಕೃತಿಯೊಂದಿಗೆ ಮಿಳಿತಗೊಳ್ಳುವ ಬಗೆಯಲ್ಲಿ ಪ್ರಾಣಿಮೂಲದ ದೈವಗಳು ಆರಾಧನೆಗೊಳಗಾಗುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಪಂಜುರ್ಲಿ ಭೂತ ಅಂದರೆ ಪಂಜಿಕುರುಳೆ –ಹಂದಿಯ ಮರಿ, ಪಿಲಿಚಾಮುಂಡಿ ಭೂತ ಅಂದರೆ ಹುಲಿ ಚಾಮುಂಡಿ, ನಂದಿಗೋಣ –ಕೋಣ ಹೀಗೆ ನಿಸರ್ಗದ ಶಕ್ತಿಗಳೊಂದಿಗೆ ಹೊಂದಿದ ಸಂಬಂಧವನ್ನು ಸೂಚಿಸುತ್ತವೆ. (ನೋ: ಅಮೃತ ಸೋಮೇಶ್ವರ; 1997) ಈ ಪ್ರಾಣಿಮೂಲದ ದೈವಗಳಲ್ಲೂ ಪ್ರಕೃತಿಯ ಸಂಬಂಧ ಬೆಸೆವ ಬಗೆ ಕಾಣಿಸುತ್ತದೆ. ಪ್ರಕೃತಿಯೊಂದಿಗಿನ ಈ ತಾದಾತ್ಮ್ಯವನ್ನು ಇಲ್ಲಿನ ಕಾವ್ಯಗಳಲ್ಲಿ ಹಲವು ನೆಲೆಯಲ್ಲಿ ಕಾಣಬಹುದು.

ತುಳುನಾಡಿನ ಮೌಖಿಕ ಕಾವ್ಯಗಳು ಕಥೆಯ ರೂಪದಲ್ಲಿ ಸಂಗ್ರಹಗೊಂಡು ಮುದ್ರಿತ ರೂಪಕ್ಕೆ ಬರುವ ವೇಳೆಗೆ ಕಥೆಯ ಮೂಲ ಆಶಯಕ್ಕೆ ಹೊಂದಿಕೊಂಡು ಕತೆಯ ನಿರೂಪಣೆಗನುಗುಣವಾಗಿ ಪ್ರಕೃತಿಯ ವಿವಿಧ ಅಂಶಗಳು ಬೆಸೆದುಕೊಂಡಿರುವುದನ್ನು ಇಲ್ಲಿ ಗುರುತಿಸಬೇಕು. ಹತ್ತೊಂಬತ್ತನೆಯ ಶತಮಾನದಲ್ಲಿ ತುಳುವಿನ ಜನಪದ ಕಾವ್ಯಗಳಿಗೆ ಸಂಬಂಧಪಟ್ಟಂತೆ ನಡೆದ ಬೆಳವಣಿಗೆಯೊಂದನ್ನು ಸಾಂದರ್ಭಿಕವಾಗಿ ಇಲ್ಲಿ ಗುರುತಿಸಬೇಕು. ಆ ಸಂದರ್ಭದಲ್ಲಿ ತುಳುನಾಡಿಗೆ ಬಂದಿದ್ದ ವಿದೇಶೀ ಅಧಿಕಾರಿಗಳು, ಮಿಶನರಿಗಳು ಈ ವಿಶಿಷ್ಟ ಪಠ್ಯಗಳನ್ನು ಕಂಡು ದಾಖಲಿಸಿದ ಮಾದರಿಗಳು ಮುಂದಿನ ಪ್ರಯತ್ನಗಳಿಗೆ ದಾರಿ ಮಾಡಿಕೊಟ್ಟಿತು. ಎ.ಮೆನ್ನರ್ ಅವರ ಪಾಡ್ದನೊಲು(1886) (ನೋ: ಅಗಸ್ಟ್ ಮೆನ್ನರ್; 2019 (ಮ.ಮು), ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾದ ಎ.ಸಿ.ಬರ್ನೆಲ್ ಸಂಪಾದನೆಯ ಡೆವಿಲ್ ವರ್ಷಿಪ್ ಆಫ್ ತುಳುವಾಸ್ (ನೋ: ನಾವಡ ಎ.ವಿ ಮತ್ತು ಡೆನ್ನಿಸ್ ಫರ್ನಾಂಡೀಸ್ (ಸಂ); 2008 (ಮ.ಮು) ಅಂದಿನ ದಾಖಲಾತಿಯ ಅನನ್ಯ ಮಾದರಿಗಳು. ಇವು ಮೌಖಿಕ ಕಾವ್ಯಗಳನ್ನು–ಪಾಡ್ದನಗಳನ್ನು ಕಥಾರೂಪದಲ್ಲೂ, ಭಾಗಶ: ಕಾವ್ಯದ ರೂಪದಲ್ಲೂ ಹಿಡಿದಿಟ್ಟ ಪ್ರಯತ್ನಗಳು. ಈಗ ಬೆನೆಟ್ ಜಿ.ಅಮ್ಮಣ್ಣ ಮತ್ತು ಡಾ.ಎಂ.ಎಸ್. ದುರ್ಗಾಪ್ರವೀಣ್ ಸಂಗ್ರಹಿಸಿರುವ ಹತ್ತೊಂಬತ್ತನೇ ಶತಮಾನದ ಹಸ್ತಪ್ರತಿಗಳಲ್ಲಿ ಇರುವ ಬೈದೆರುಳೆ ಸಂಧಿ, ಮಯಿಸಂದಾಯ ಸಂಧಿ ಮೊದಲಾದವು ಇದೇ ಸ್ವರೂಪದಲ್ಲಿ ಬಂದಂತವು. ಇಂತಹಾ ಪಠ್ಯಗಳಲ್ಲಿ ಕಾಣಿಸುವಂತಹಾ ಹಲವು ಅಂಶಗಳು ಪ್ರಕೃತಿ ಚಿತ್ರಣದ ದೃಷ್ಟಿಯಿಂದಲೂ ನಮಗೆ ಅತ್ಯಂತ ಮುಖ್ಯವಾಗುತ್ತವೆ. ಕೋಟಿ ಚನ್ನಯರ ಕಥಾನಕದಲ್ಲಿ ಬಲ್ಲಾಳನಿಗೆ ಬೇಟೆಯ ಸಂದರ್ಭದಲ್ಲಿ ಮುಳ್ಳು ಚುಚ್ಚಿದಾಗ ವೈದ್ಯನು ಔಷಧಕ್ಕಾಗಿ "ಅಕ್ಕಾಸೊಗು ಪೋತೀ ಕೊಡಿ। ಪಾತಾಳೊಗು ಪೋತ್ತಿ ಬೇರ್। ಮರ್ದ್ ಪಸೊಂಡೆ" ಎನ್ನುವಲ್ಲಿ ಔಷಧ ವಿವರವನ್ನು ಹೇಳಬಾರದೆಂಬ ಜನಪದ ವೈದ್ಯ ಸಂಬಂಧೀ ನಂಬಿಕೆಯೂ ಮಿಳಿತವಾಗುತ್ತದೆ. ಅದೇ ಮಾದರಿಯಲ್ಲಿ ಮುಂದೆ ಆ ವ್ರಣವನ್ನು ವಾಸಿ ಮಾಡುವ ತುಂಬು ಗರ್ಭಿಣಿ ದೆಯಿ ಬೈದೆದಿಯೂ "ಮೂಜಿ ಕುಂಜಗ್ ಪೋಯೊಳೂ ಮೂಜಿ ಪುಂಡಿ ಕೊಡಿ ಮಳ್‌ದ್। ಉಳಿಗೊದಯ ಕೈಟೆ ಕೊಳಿಯೊಳೂ" ಎನ್ನುವುದೂ ಮುಂದೆ ಬಲ್ಲಾಳನೇ ಆಕೆಯನ್ನು ಕರೆತರಲು ಪಲ್ಲಕಿಯನ್ನು ಕಳಿಸಿದಾಗ ತಾನು ನಡೆದುಕೊಂಡು ಹೋಗುವ, ಔಷಧವನ್ನು ಪಲ್ಲಕಿಯಲ್ಲಿರಿಸುವ ಸಂದರ್ಭದ "ಮೂಜಿ ಪುಂಡಿ ಕೊದಿ ಮಳುದು ಕೊಂಡೂದು। ಆಕಾಸೊದ ಕೊಡಿ ಪಾತಾಳಾದ ಬೇರ್ ಮಳುದ್ ಕೊಂಡೂ ಬರುವೊಳೂ। ಕೊಡಿ ಮಳ್‌ದ್ ಪೊತ್ತೂ ಪೊಡಿ ಮಳ್‌ತೊಳೂ। ಬೇರ್ ಮಳ್‌ದ್ ಕ'ಳೆತು ಪತ್ತೊಂಡೊಳೂ। ಮಳ್‌ದ್‌ದ ಪೆಟ್ಯ ಮಳ್‌ದ್‌ದ ಬುರುಡೆನು ದಂಡೆಡ್ ದಿಯ್ಯೊಳೂ" ಎಂಬುದೂ ಗಮನಾರ್ಹವಾದುದು. ಅನಾಥ ಬಾಲಕರಾದ ಕೋಟಿ ಚನ್ನಯರನ್ನು ಬೆಳೆಸಲು ಬಲ್ಲಾಳ ಹಾಲಿಗಾಗಿ ಹಸುವನ್ನೂ, ತುಪ್ಪಕ್ಕಾಗಿ ಎಮ್ಮೆಯನ್ನು ಕೊಟ್ಟನು ಎಂಬ ಸೂಚನೆಯ "ಪೇರ್‌ಗು ಪೆತ್ತಲಾ ಕೊರೊಡೂ। ನೆಯಿಕ್ ಯೆಂರ್ಮೆಲಾ ಕೊರ್ಯೆರ್।" ಎಂಬ ಸಾಲನ್ನು ಗಮನಿಸಬೇಕು. ಕೋಟಿ ಚನ್ನಯರಿಗೆ ಓದು ಬಹ ಕಲಿಸಲು ಏರ್ಪಾಡು ಮಾಡಲು ಹೊಯಿಗೆ ತರಿಸುವ "ಪೊಯ್ಯೆ ತರ್ಪಾಲ ಪೊಯ್ಯೆದ ಪೊಡಿ ಬರಲು ಕಲಪಾಲಾ। ಪಲಯಿ ಪತ್ತಲಾ ಪಲಾಯಿಾದ ಬರಲುಗ್ ಪಾಡ್‌ಲಾ" ಎಂಬ ಅಂಶವನ್ನು ಪೂರಕವಾಗಿ ಗುರುತಿಸಬೇಕು. ಇಂತಹಾ ವಿವರಗಳೊಂದಿಗೆ ಬೆಸೆದುಕೊಳ್ಳುವ ನಂಬಿಕೆಗಳು, ವರ್ಣನೆಗಳು ಅನೇಕ ವಿಚಾರಗಳನ್ನು ತೆರೆದಿಡುತ್ತವೆ. ಕೌತುಕಕ್ಕೆ ಕಾರಣವಾಗುವ ಕೆಲವು ವಿವರಗಳೂ ಲಭ್ಯವಾಗುವುದಿದೆ. ಉದಾಹರಣೆಗೆ ಬರ್ನೆಲ್ ಸಂಗ್ರಹದ ಕೋಟಿ ಚನ್ನಯ ಕಥಾನಕದಲ್ಲಿ ಮೂರ್ತೆಗಾಗಿ ಕಾಡಿಗೆ ಒಂಟೆಯ ಮೇಲೆ ಕುಳಿತು ಹೋಗುವ ಚಿತ್ರಣ ಸಹಜ ಭೌಗೋಳಿಕ ವಿವರಗಳಿಗೆ ಹೊರತಾದುದಾಗಿರುವುದನ್ನು ಇಲ್ಲಿ ಉಲ್ಲೇಖಿಸಬೇಕು.[4]ಹಾಗೆಯೇ ಅಂದಿನ ಮೆನ್ನರ್, ಬರ್ನೆಲ್ ಸಂಗ್ರಹಗಳಲ್ಲಿ ಬರುವ ಬೈದೆರ್ಲು, ಕೋಟಿಚನ್ನಯದ ಅನೇಕ ಉದಾಹರಣೆಗಳು ನೆಲ, ಜಲ ಸಂಬಂಧೀ ಅನೇಕ ಅಂಶಗಳ ಅನಾವರಣಕ್ಕೆ ಕಾರಣವಾಗುತ್ತವೆ, ಪ್ರಕೃತಿ ಚಿತ್ರಣದ ಹಲವು ನೆಲೆಯ ಅಧ್ಯಯನಗಳಿಗೆ ದಾರಿಮಾಡಿಕೊಡುತ್ತವೆ.

ISBN – 978-93-5526-247-9

**ಅಡಿಟಿಪ್ಪಣಿಗಳು**

1. ತುಳುವಿನಲ್ಲಿ ಜನಪದ ಕಾವ್ಯ , ಜನಪದ ಮಹಾಕಾವ್ಯ, ಲಾವಣಿ ಚಕ್ರಗಳ ಬಗೆಗಿನ ಚರ್ಚೆಯನ್ನೇ ಇನ್ನಷ್ಟು ಬೆಳೆಸುವ ಸಾಧ್ಯತೆಯಿದ್ದು ಪ್ರಸ್ತುತ ಪತ್ರಿಕೆಯ ಮಿತಿಯಲ್ಲಿ ಬಹುತೇಕ ವಿದ್ವಾಂಸರ ಚರ್ಚೆಗಳ ಹಿನ್ನೆಲೆಯಲ್ಲಿ, ಒಟ್ಟು ಕನ್ನಡದ ಮಹಾಕಾವ್ಯಗಳ ಚರ್ಚೆಗೆ ಅನುಕೂಲವಾಗುವಂತೆ ಸಾಂದರ್ಭಿಕವಾಗಿ ಮಹಾಕಾವ್ಯವೆಂಬ ಉಲ್ಲೇಖದೊಂದಿಗೆ ಮುಂದುವರೆಯಲಾಗಿದೆ
2. ಡಾ.ಬಿ.ಎ.ವಿವೇಕ ರೈ ಅವರ ತುಳು ಜನಪದ ಸಾಹಿತ್ಯ, ಡಾ.ಚಿನ್ನಪ್ಪ ಗೌಡ ಅವರ ಭೂತಾರಾಧನೆ ಜಾನಪದೀಯ ಅಧ್ಯಯನ, ಡಾ.ವಾಮನ ನಂದಾವರ ಅವರ ಕೋಟಿಚನ್ನಯ ಅಧ್ಯಯನ, ಪ್ರೊ.ಎ.ವಿ.ನಾವಡ ಅವರ ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಡಾ.ಅಶೋಕ ಆಳ್ವ ಅವರ ಪ್ರಾಣಿ ಜನಪದ, ಪ್ರೊ.ಅಮೃತ ಸೋಮೇಶ್ವರ, ಕನರಾಡಿ ವಾದಿರಾಜ ಭಟ್ಟ, ಸುಶೀಲಾ ಉಪಾಧ್ಯಾಯ, ಡಾ.ಗಾಯತ್ರಿ ನಾವಡ, ಡಾ.ರಾಜಶ್ರೀ ರೈ, ಡಾ.ಸುಬ್ಬಣ್ಣ ರೈ, ಡಾ.ಪುರುಷೋತ್ತಮ ಬಿಳಿಮಲೆ, ಪ್ರೊ.ಹೈಡ್ರೂನ್ ಬ್ರೂಕ್ನರ್, ಪ್ರೊ.ಪೀಟರ್.ಜೆ.ಕ್ಲಾಸ್ ಹೀಗೆ ವಿವಿಧ ಅಧ್ಯಯನಕಾರರ ಸಂಶೋಧನೆಗಳನ್ನು ಇಲ್ಲಿ ಗುರುತಿಸಿಕೊಳ್ಳಬೇಕು.
3. 'ಆಕಾಶಬೆನ್ನಿ' 'ಕಡಲ್ ಬೆನ್ನಿ' ಮೊದಲಾದ ಪರಿಕಲ್ಪನೆಗಳು ಗಾದೆಗಳಲ್ಲಿ ಅಭಿವ್ಯಕ್ತಿಗೊಳ್ಳುವುದು ಇಲ್ಲಿ ಗುರುತಿಸಬೇಕಾದಂತಹುದು. ಬೆನ್ನಿ ಅಂದರೆ ವ್ಯವಸಾಯ ಎಂದರ್ಥ. ಮೂರ್ತೆ ಮತ್ತು ಮೀನುಗಾರಿಕೆಗಳ ಸಶಕ್ತ ಅಭಿವ್ಯಕ್ತಿ ಈ ಗಾದೆಯಲ್ಲಿದೆ. ಹೀಗಾಗಿ ಕಳೆದ ಶತಮಾನಗಳಲ್ಲಿ ಮೌಖಿಕದಿಂದ ಲಿಖಿತಕ್ಕೆ ಬಂದ ಗಾದೆಗಳನ್ನು ಇಲ್ಲಿ ಪೂರಕವಾಗಿ ಗುರುತಿಸಬೇಕು. ಜನಪದ ನುಡಿಗಟ್ಟಿನ ಭಾಗವಾಗಿ ಇವುಗಳ ಗಮನಿಸುವಿಕೆ ಬಹಳ ಮುಖ್ಯ. ಅವುಗಳು ಸಂಪೂರ್ಣವಾಗಿ ಅಥವಾ ಭಾಗಶ: ಕಾವ್ಯಾತ್ಮಕ ಅಭಿವ್ಯಕ್ತಿಯ ಭಾಗವಾಗಿ ಬಂದಿರುವ ಅಥವಾ ಬರದಿರುವ ಎರಡೂ ಸಂದರ್ಭಗಳನ್ನು ಗುರುತಿಸಿಕೊಳ್ಳಬೇಕು, ಆಗ ಒಂದು ಪರಿಪೂರ್ಣತೆ ದಕ್ಕುತ್ತದೆ.
4. ಅದೇ ರೀತಿ ಈ ಕಥಾನಕಗಳು ಕಥೆಯ ರೂಪದಲ್ಲಿ ಬರುವ ಬಗೆಯೂ ಅಧ್ಯಯನಾರ್ಹವಾದುದು. ಉದಾಹರಣೆಗೆ ಪಂಜೆ ಮಂಗೇಶರಾಯರ 'ಕೋಟಿ ಚನ್ನಯ' ಈ ಸಂಬಂಧವಾದ ಸೃಜನಶೀಲ ವಿವರಣೆಗಳ ಸೇರ್ಪಡೆ, ಮೂಲ ವಿವರಗಳ ಕೈಬಿಡುವಿಕೆಗಳನ್ನು ಗಮನಿಸಬೇಕು, ಇದರ ಮುನ್ನುಡಿಯಲ್ಲಿ ಇರುವ ತತ್ಸಂಬಂಧೀ ವಿವರಗಳನ್ನು ನೋಡಬಹುದು.

**ಪರಾಮರ್ಶನ ಗ್ರಂಥಗಳು**


1. ಅಗಸ್ಟ್ ಮೆನ್ನರ್; 2019 (ಮ.ಮು); ಪಾಡ್ದನೊಳು; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
2. ಅಮೃತ ಸೋಮೇಶ್ವರ; 1997; ತುಳು ಪಾಡ್ದನ ಸಂಪುಟ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಉಪಾಧ್ಯಾಯ ಯು.ಪಿ. ಮತ್ತು ಸುಶೀಲಾ ಪಿ.ಉಪಾಧ್ಯಾಯ; 2002; ಫೋಕ್ ರಿಚುವಲ್ಸ್ ಆಫ್ ದಿ ತುಳುವ ರೀಜನ್ ಆಫ್ ಕೋಸ್ಟಲ್ ಕರ್ನಾಟಕ; ಆರ್.ಆರ್.ಸಿ., ಉಡುಪಿ
4. ಚಿನ್ನಪ್ಪ ಗೌಡ ಕೆ; 1990; ಭೂತಾರಾಧನೆ ಜಾನಪದೀಯ ಅಧ್ಯಯನ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ
5. ದಾಮೋದರ ಕಲ್ಮಾಡಿ (ಸಂ); 2002; ಕೋಟಿ ಚೆನ್ನಯ ಪಾರ್ದನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ,
6. ನಾವಡ ಎ.ವಿ. (ಸಂ), 1999, ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ನಾವಡ ಎ.ವಿ ಮತ್ತು ಡೆನ್ನಿಸ್ ಫರ್ನಾಂಡೀಸ್ (ಸಂ); 2008 (ಮ.ಮು); ಡೆವಿಲ್ ವರ್ಶಿಪ್ ಆಫ್ ತುಳುವಾಸ್ ಫ್ರಂ ದಿ ಪೇಪರ್ಸ್ ಆಫ್ ಲೇಟ್ ಎ.ಸಿ.ಬರ್ನೆಲ್; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
8. ಪಂಜೆ ಮಂಗೇಶ ರಾವ್ ; 1924; ಕೋಟಿ ಚನ್ನಯ; ಬಾಲ ಸಾಹಿತ್ಯ ಮಂಡಲ ಲಿಮಿಟೆಡ್, ಕೊಡಿಯಾಲಬೈಲ
9. ವಾಮನ ನಂದಾವರ; 2001; ಕೋಟಿ ಚೆನ್ನಯ ಜಾನಪದೀಯ ಅಧ್ಯಯನ; ಹೇಮಾಂಶು ಪ್ರಕಾಶನ,
10. ವಿವೇಕ ರೈ ಬಿ.ಎ; 1985; ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
11. ಸಾವಿತ್ರಿ ಕೆ.; 2006; ನಂಬಿದ ಸತ್ಯಗಳು–ಸ್ತ್ರೀಭೂತಗಳ ಚಾರಿತ್ರಿಕ ಅಧ್ಯಯನ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ


**ಅಪ್ರಕಟಿತ ಹಸ್ತಪ್ರತಿ**


1. ಬೆನೆಟ್ ಜಿ.ಅಮ್ಮಣ್ಣ ಮತ್ತು ದುರ್ಗಾಪ್ರವೀಣ ಎಂ.ಸ್. (ಸಂ); ಬೈದೆರುಳೆ ಸಂಧಿ


***

# ಅಭಿಜಾತ ಕನ್ನಡ

ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ

ದ್ವೈಮಾಸಿಕ ಸಂಶೋಧನಾ ಪತ್ರಿಕೆ

# ABHIJATA KANNADA

Peer Reviewed Referred Journal ISSN : 2347-4017

ರೆಫರೀಡ್ ಜರ್ನಲ್

ISSN-2347-4017- ಸೆಪ್ಟಂಬರ್ - ಅಕ್ಟೋಬರ್ 2021 ಸಂಪುಟ-7 ಸಂಚಿಕೆ-5

September - October 2021 Vol-7 Issue-5



ಪ್ರಧಾನ ಸಂಪಾದಕರು

ಪ್ರೊ. ಎಸ್. ಎಂ. ಗಂಗಾಧರಯ್ಯ

**ABHIJATA KANNADA**

Bimonthly Peer Reviewed Referred Journal with

**ISSN:2347-4017** September-October 2021, Vol-7 Issue-5

Chief Editor : **Prof. S.M. Gangadharaiah**

Executive Editor : **Dr. Kotraswamy. A.M.M.**

Managing Editor : **Dr. K.M. Rohini**

Editors : **Dr. ShobaNayak,** Assistant Professor
RCU, Belagavi

**Dr. P. Nagaraja,** Assistant Professor
RCU, Belagavi

**Dr. H.M. Nagarjuna,** Assistant Professor
Sahyadri Science College, Shimoga

**Dr. Durgapraveen,** Assistant Professor
Dravidian University, Kuppam, AP

**Dr. Savakar Kamble**
Assistant Professor, RCU, Belagavi

PUBLISHER : **PRATHIBHANA**
(An Intellectual & Cultural Form)
A Division of NADAPRASANGA (Reg.)
Under Karnataka Trust Act -10/A 1957,
Reg. No. BMH-4-00002-2010-11
Dt. 03-04-2010.

ADDRESS : No133, 'Shivadwaita', Sector II,
Shivabasavanagara, Belagavi-590010
Ph. 9448324100

PRINTER : Sri Vasavi Offset Printers, Bagalkot,
Ph: 0835-4297406

# ಪರಿವಿಡಿ


೧. ಸೃಜನಶೀಲ ಲೇಖಕಿ ವಾಣಿ : ಒಂದು ಪ್ರತ್ಯವಲೋಕನ / ೯
◆ ಪ್ರೊ. ಎಸ್. ಎಂ. ಗಂಗಾಧರಯ್ಯ

೨. ಕರಾವಳಿಯ ಜನಪದ ನಾಯಕ : ಕುಮಾರರಾಮ / ೧೫
◆ ಡಾ. ಗಜಾನನ ನಾಯ್ಕ

೩. ಹಡಪದ ಲಿಂಗಮ್ಮನ ವಚನಗಳು : ಭಕ್ತಿ ನಿರ್ವಚನ / ೨೧
◆ ಡಾ. ಪಿ. ನಾಗರಾಜ

೪. ಮಡಿವಾಳ ಮಾಚಿದೇವನ ವಚನಗಳಲ್ಲಿ ಗಾದೆಗಳು / ೨೯
◆ ಡಾ. ಎಂ. ನಾಗರಾಜ

೫. ಜಾವಳಿ : ಶೃಂಗಾರ ಹಾಗೂ ಭಕ್ತಿ ರಚನೆಯ ಅನುಸಂಧಾನ / ೩೬
◆ ಡಾ. ಕೆ.ಎಂ. ರೋಹಿಣಿ

೬ 'ಅಟ್ಟಮತಂ' ಕೃತಿಯ ಛಂದಸ್ಸು ಮತ್ತು ಷಡ್ಜಳಿ:
ಒಂದು ಟಿಪ್ಪಣಿ / ೪೧
◆ ಡಾ. ಕೊಟ್ರಸ್ವಾಮಿ. ಎ.ಎಂ.ಎಂ.

೭ ಮಣೆಗಾರ ಆತ್ಮಕಥನ : ಅಂಬೇಡ್ಕರ್ ಚಿಂತನೆಗಳು / ೪೮
◆ ಅರುಣ ಎಸ್.ಪಿ.

೮. ಜನಪದ ಸಾಹಿತ್ಯ ಸಂಗ್ರಹ : ಒಂದು ಅವಲೋಕನ / ೫೨
◆ ಡಾ. ನಾಗರೆಡ್ಡಪ್ಪ ಹೆಚ್

೯. ಅಂಬೇಡ್ಕರ್ ಅವರ ಸಂಘಟನಾತ್ಮಕ ನೆಲೆ / ೫೮
◆ ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್

೧೦. ಬಯಲಾಟ ಮತ್ತು ಬುಡಕಟ್ಟು ಸಮುದಾಯಗಳ
ಕಲಾ ಅವನ್ನತೆ / ೬೩
◆ ಡಾ. ರಾಜಕುಮಾರ

೧೧. ರತ್ನಾಕರವರ್ಣಿಯ ಭರತೇಶ ವೈಭವ : ಶೃಂಗಾರರಸ / ೬೮
◆ ಉಷಾ ಹೆಚ್.ಪಿ.

೧೨. ರಾಯಚೂರಿನ ಆಧುನಿಕ ತತ್ವಪದಕಾರ– ಎನ್.ಬಿ. ಲಕ್ಷ್ಮೀರೆಡ್ಡಿ ಹೊಸೂರು / ೭೨
❖ ಡಾ. ಮಲ್ಲಯ್ಯ

೧೩. ಕಲಚುರಿ ವಂಶದ ಇಮ್ಮಡಿ ಬಿಜ್ಜಳನ ದಾನ ದತ್ತಿಗಳು / ೭೮
❖ ಬೆಟ್ಟಲಿಂಗದೇವರು ಬಿ.ಎಸ್.
❖ ಪ್ರೊ. ಡಿ.ವಿ. ಪರಮಶಿವಮೂರ್ತಿ

೧೪. ಜೀವನ ಚರಿತ್ರೆ ಮತ್ತು ಆತ್ಮಚರಿತ್ರೆ ಅಧ್ಯಯನಗಳ ಸಾಮಾಜಿಕ ಪ್ರಭಾವಗಳು / ೮೬
❖ ಮಂಗಳ. ಎನ್

೧೫. ಮಹಿಳೆ – ನೇಕಾರಿಕೆ : ಸಮಸ್ಯೆಗಳು / ೯೪
❖ ಸುವರ್ಣಾ ರೇ. ಕಲ್ಯಾಣಶೆಟ್ಟಿ
❖ ಡಾ. ಶಿವಲೀಲಾ ಬಸವರಾಜ

೧೬. ದೇಶಿ ಗಾಯನ ಪರಂಪರೆ : ಒಂದು ಅವಲೋಕನ / ೧೦೦
❖ ಅಂಜಮ್ಮ
❖ ಡಾ. ಜಯದೇವಿ ಜಂಗಮಶೆಟ್ಟಿ

೧೭. ಅಮೃತಮತಿ : ಮನೋಮತಿ / ೧೦೬
❖ ಭೋಜರಾಜ ಟಿ.ಎಸ್.
❖ ಡಾ. ಶೋಭಾ ನಾಯಕ

೧೮. ಮಕ್ಕಳ ಕವಿತೆಗಳಲ್ಲಿ ಪ್ರಾದೇಶಿಕ ಭಾಷಾ ಪ್ರಭೇದಗಳ ಬಳಕೆ / ೧೧೩
❖ ಗಂಗಯ್ಯ ಬಿ.ಎಸ್.
❖ ಡಾ. ಎಸ್.ಎಂ. ದುರ್ಗಾ ಪ್ರವೀಣ

೧೯. ಕೋಲಾರ ಜಿಲ್ಲೆಯ ಸಣ್ಣಕಥೆಗಳ ಭಾಷಿಕ ವಿನ್ಯಾಸ / ೧೨೦
❖ ಗಿರೀಶ್ ವೈ
❖ ಡಾ. ಜಯಲಲಿತ

# ೧೮. ಮಕ್ಕಳ ಕವಿತೆಗಳಲ್ಲಿ ಪ್ರಾದೇಶಿಕ ಭಾಷಾ ಪ್ರಭೇದಗಳ ಬಳಕೆ

❖

**ಗಂಗಯ್ಯ ಬಿ. ಎಸ್.**

**ಡಾ. ಎಸ್.ಎಂ. ದುರ್ಗಾ ಪ್ರವೀಣ**

ಪ್ರಸ್ತುತ ಲೇಖನವು ಮಕ್ಕಳ ಕವಿತೆಗಳಲ್ಲಿ ಬಳಕೆಗೊಂಡಿರುವ ಪ್ರಾದೇಶಿಕ ಭಾಷಾ ಪ್ರಭೇದಗಳಾದ ಗುಲಬರ್ಗಾ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಹಾಗೂ ಮೈಸೂರು ಕನ್ನಡಗಳ ಸ್ವರೂಪವನ್ನು ಕಂಡುಕೊಳ್ಳುವ ಉದ್ದೇಶವನ್ನು ಇರಿಸಿಕೊಳ್ಳಲಾಗಿದೆ. ಈ ನಾಲ್ಕು ಭಾಗಗಳ ಆಯ್ದ ಮಕ್ಕಳ ಕವಿತೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆಧುನಿಕ ಕನ್ನಡ ಸಾಹಿತ್ಯವು ೧೯ನೇ ಶತಮಾನದಿಂದ ಈಚೆಗೆ ಅನೇಕ ಆಯಾಮಗಳನ್ನು ಒಳಗೊಂಡು ಬೆಳೆದುಬಂದಿದೆ. ನವೋದಯದಿಂದ ಆರಂಭಗೊಂಡು ಹೊಸಗನ್ನಡ ಸಾಹಿತ್ಯದಲ್ಲಿ ವಿವಿಧ ಪ್ರಕಾರಗಳು ವಿಫುಲವಾಗಿ, ಸಮೃದ್ಧವಾಗಿ ಬೆಳೆದಿವೆ. ಸಾಹಿತ್ಯದ ಪ್ರಕಾರಗಳಾದ ಸಣ್ಣಕಥೆ, ಭಾವಗೀತೆ, ಕಾದಂಬರಿ, ನಾಟಕ, ಪ್ರವಾಸ ಕಥನ ಹೀಗೆ ನಾನಾ ಪ್ರಕಾರಗಳು ಹೊಸತನ್ನು ತಂದು ಕೊಟ್ಟವು. ಮಕ್ಕಳ ಸಾಹಿತ್ಯವೂ ಈ ಸಂದರ್ಭದಲ್ಲಿಯೇ ತನ್ನನ್ನು ಕಂಡುಕೊಂಡಿತು. ಮಕ್ಕಳ ಸಾಹಿತ್ಯವು ಒಂದು ವಿಶಿಷ್ಟವಾದಂತಹ ಕ್ಷೇತ್ರವಾಗಿ ರೂಪಗೊಂಡಿತು. ಕೆಲವು ವಿದ್ವಾಂಸರ ವೈಯಕ್ತಿಕ ಹಂಬಲ, ಆಸಕ್ತಿಗಳಿಂದಾಗಿ ಮಕ್ಕಳ ಸಾಹಿತ್ಯದ ರೂಪ

---

**ಗಂಗಯ್ಯ ಬಿ.ಎಸ್.** : ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

**ಡಾ. ಎಂ.ಎಸ್. ದುರ್ಗಾಪ್ರವೀಣ** : ಸಂಶೋಧನಾ ಮಾರ್ಗದರ್ಶಕರು, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

ಬೆಳೆಯುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಆಯ್ದ ಮಕ್ಕಳ ಕವಿತೆಗಳ ಭಾಷಿಕ ಅಧ್ಯಯನವು ಒಂದು ಸಣ್ಣಪ್ರಯತ್ನವಾಗಿದೆ.

**ಮಕ್ಕಳ ಕವಿತೆಗಳಲ್ಲಿ ಗುಲಬರ್ಗಾ ಪ್ರಾದೇಶಿಕ ಭಾಷಾ ಬಳಕೆ**

ಗುಲಬರ್ಗಾ ಕನ್ನಡವು ಕನ್ನಡದ ಪ್ರಾದೇಶಿಕ ಪ್ರಭೇದಗಳಲ್ಲಿ ವೈಶಿಷ್ಟ್ಯವಾದ ಉಪಭಾಷೆಯಾಗಿದೆ. ಗುಲಬರ್ಗಾ ಜಿಲ್ಲೆಯ ಪಶ್ಚಿಮೋತ್ತರ ಭಾಗಗಳಲ್ಲಿ ಮಹಾರಾಷ್ಟ್ರ ರಾಜ್ಯವು, ಉತ್ತರಭಾಗದಲ್ಲಿ ಬೀದರ್ ಜಿಲ್ಲೆಯು, ಪೂರ್ವೋತ್ತರ ಭಾಗಗಳಲ್ಲಿ ಆಂಧ್ರಪ್ರದೇಶವೂ, ಇದರ ದಕ್ಷಿಣ ಭಾಗದಲ್ಲಿ ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳು ಆವರಿಸಿಕೊಂಡಿವೆ. ಚಾರಿತ್ರಿಕವಾಗಿ ಗುಲಬರ್ಗಾ ಜಿಲ್ಲೆಯು ಹೈದರಾಬಾದಿನ ನಿಜಾಮನ ಆಡಳಿತಕ್ಕೆ ಒಳಪಟ್ಟಿತ್ತು, ಆದ ಕಾರಣ ಇಲ್ಲಿನ ಕನ್ನಡದ ಮೇಲೆ ಉರ್ದು ಭಾಷೆಯ ಪ್ರಭಾವವು ಕಂಡಬರುತ್ತದೆ. ಭೌಗೋಳಿಕವಾಗಿ ಮಹಾರಾಷ್ಟ್ರ ರಾಜ್ಯವು ಗುಲಬರ್ಗಾಕ್ಕೆ ಹತ್ತಿರವಾಗಿದ್ದರಿಂದ ಇಲ್ಲಿನ ಕನ್ನಡ ಭಾಷೆಯ ಮೇಲೆ ಮರಾಠಿ ಭಾಷೆಯ ಪ್ರಭಾವವೂ ಗೋಚರಿಸುತ್ತದೆ. ಉರ್ದು ಮತ್ತು ಮರಾಠಿ ಭಾಷೆಗಳು ಈ ಭಾಗದ ಮೇಲೆ ಹೆಚ್ಚಾಗಿ ಪ್ರಭಾವ ಬೀರುವುದರಿಂದ ಇಲ್ಲಿ ದ್ವಿಭಾಷಿಕ ಪರಿಸರವು ಕಂಡು ಬರುತ್ತದೆ.

ಗುಲಬರ್ಗಾ ಭಾಗದ ಚಂದ್ರಕಾಂತ ಕರದಳ್ಳಿ ಅವರು ಮಕ್ಕಳಿಗಾಗಿ 'ಪುಟ್ಟನ ಕನಸು' ಎಂಬ ಕೃತಿಯನ್ನು ರಚನೆ ಮಾಡಿದ್ದಾರೆ. ಅವರು ತಮ್ಮ ಸಾಹಿತ್ಯದಲ್ಲಿ ಗ್ರಾಮೀಣ ಸೊಗಡನ್ನು ಗಮನದಲ್ಲಿಟ್ಟುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವರು ರಚಿಸಿರುವ ಮಕ್ಕಳ ಕವಿತೆಗಳು ಹಲವು ವೈಶಿಷ್ಟ್ಯತೆಯಿಂದ ಕೂಡಿವೆ.

ಇವರ 'ಪುಟ್ಟನ ಕನಸು' ಎಂಬ ಕವನ ಸಂಕಲನದಲ್ಲಿ 'ಮಳೆ ಹನಿ ಹನಿ...' ಎಂಬ ಪದ್ಯ ಭಾಗದಲ್ಲಿ

"ಬಿರುಮಳೆ, ಸುರಿಮಳೆ ಸುರಿದಾವ
ಹಾಮಳೆ, ಜಡಿಮಳೆ ಬಿದ್ದಾವ
ತರತರ ರೂಪವ ತಾಳ್ಯಾವಾ
ಜಗಕೆ ಹೊಸರಂಗನು ತಂದಾವ್"[1]

ಈ ಸಾಲುಗಳನ್ನು ಗಮನಿಸಿದರೆ ಶಿಷ್ಟ ಕನ್ನಡದಲ್ಲಿ ಬಳಕೆಯಾಗುವ 'ಸುರಿದಿವೆ', 'ಬಿದ್ದಿವೆ', 'ತಾಳಿವೆ', 'ತಂದಿವೆ' ಎಂಬ ಪದಗಳು ಗುಲಬರ್ಗಾದ ಆಡು ಭಾಷೆಯಲ್ಲಿ 'ಸುರಿದಾವ', 'ಬಿದ್ದಾವ', 'ತಾಳ್ಯಾವಾ', 'ತಂದಾವ್' ಎಂದು ಬಳಕೆಯಾಗಿದೆ. ಹಾಗೆಯೇ ಇದೇ ಸಂಕಲನದ "ಗುಡುಗುಡು ಮುತ್ತ್ಯಾ ಗುಡುಗ್ಯಾನ ಸಿಡಿಲಿನ ಕಿಡಿಮಿಂಚು ಸಿಡಿಸ್ಯಾನ"[2]



ಈ ಸಾಲುಗಳನ್ನು ಗಮನಿಸಿದರೆ ಶಿಷ್ಟ ಕನ್ನಡದಲ್ಲಿ ಬಳಕೆಯಾಗುವ 'ಅಜ್ಜ', 'ಗುಡುಗಿದನು', 'ಸಿಡಿಸಿದನು' ಎಂಬ ಪದಗಳು ಗುಲಬರ್ಗಾ ಕನ್ನಡದಲ್ಲಿ 'ಮುತ್ತ್ಯಾ', 'ಗುಡುಗ್ಯಾನ', 'ಸಿಡಿಸ್ಯಾನ' ಎಂದು ಬಳಕೆಯಾಗಿದೆ. ಗುಲಬರ್ಗಾ ಕನ್ನಡದ ಪ್ರಾದೇಶಿಕ ಭಾಷಿಕ ಸ್ವರೂಪ ಮತ್ತು ಅದರದೇ ಆದ ವೈಶಿಷ್ಟ್ಯವನ್ನು ನೋಡಲಾಯಿತು.

**ಮಕ್ಕಳ ಕವಿತೆಗಳಲ್ಲಿ ಧಾರವಾಡದ ಪ್ರಾದೇಶಿಕ ಭಾಷಾ ಬಳಕೆ**

ಪ್ರಾದೇಶಿಕ ಹಿನ್ನಲೆಯಲ್ಲಿ ಧಾರವಾಡ ಕನ್ನಡವು ತನ್ನದೇ ಆದ ವೈಶಿಷ್ಟ್ಯವನ್ನು ಒಳಗೊಂಡಿದೆ. ಧಾರವಾಡ ಜಿಲ್ಲೆಯ ಉತ್ತರಕ್ಕೆ ಬಾಗಲಕೋಟೆ ಜಿಲ್ಲೆಯು, ದಕ್ಷಿಣಕ್ಕೆ ಹಾವೇರಿ, ಉತ್ತರ ಕನ್ನಡ ಜಿಲ್ಲೆಯು, ಪೂರ್ವಕ್ಕೆ ಗದಗ ಜಿಲ್ಲೆಯು, ಪಶ್ಚಿಮೋತ್ತರ ಭಾಗಕ್ಕೆ ಬೆಳಗಾವಿ ಜಿಲ್ಲೆಯು ಆವರಿಸಿಕೊಂಡಿದೆ. ಮೈಸೂರು ಕನ್ನಡಕ್ಕೂ ಧಾರವಾಡ ಕನ್ನಡಕ್ಕೂ ತುಂಬಾ ವ್ಯತ್ಯಾಸವಿರುದನ್ನು ಕಾಣಬಹುದು. ಮೈಸೂರು ಕನ್ನಡವು ದಕ್ಷಿಣ ಕರ್ನಾಟಕ ಭಾಗಕ್ಕೆ ಸೇರಿದರೆ ಧಾರವಾಡ ಕನ್ನಡವೂ ಉತ್ತರ ಕರ್ನಾಟಕ ಭಾಗಕ್ಕೆ ಸೇರಿರುವುದರಿಂದ ವ್ಯತ್ಯಾಸವನ್ನು ಕಾಣಬಹುದು.

ಈ ಲೇಖನದಲ್ಲಿ ಮಕ್ಕಳ ಸಾಹಿತಿಯಾದ ಆನಂದ ವಿ ಪಾಟೀಲ ಅವರು ಮಕ್ಕಳಿಗಾಗಿ ಬರೆದ ಮೊದಲನೆಯ ಕವನ ಸಂಕಲನವಾದ 'ಅಜ್ಜೀ ಬಿಡಿಕಾಳ್ ಬಿಡಿಕಾಳ್ ಮೇಲೊಂದೆರಡು ಇಡಿಗಾಳು' ಎಂಬ ಕವನ ಸಂಕಲನವನ್ನು ಭಾಷಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದಾಗ ಧಾರವಾಡ ಕನ್ನಡದ ಪ್ರಾದೇಶಿಕ ವೈಶಿಷ್ಟ್ಯವನ್ನು ಈ ಮುಂದಿನಂತೆ ನೋಡಬಹುದಾಗಿದೆ. ಈ ಸಂಕಲನದ ಕವಿತೆಯಾದ 'ಅಜ್ಜೀ ಅಜ್ಜೀ ಅಜ್ಜೀದೊಂದ್ ಕೌದಿ ! ಕೌದಿಗೊಂದ್ ಹುಡಿಗಿ ! ನಡುವೊಂದ್ ಟುಣಕ್ ಟುಣಕ್ ಬಾಲದ ಮರಿ !' ಈ ಪದ್ಯದಲ್ಲಿ ಬರುವ

"ನನಗೇನೂ ಕೊಡಬ್ಯಾಡ್ರಿ
ನಿಮ್ದು ನಿಮಗ ಇರ್ಲ್ರಿ
ಹಾಸಿಗೊಂಡ ಹೊತಗೊಂಡ
ಗಡದ್ ನಿದ್ದೀ ಮಾಡ್ರಿ
ಕೌದೆಂದ್ರ ಏನಂತ
ತಿಳಿದ ಹೋಗ್ತದರಿ"[3]

ಎಂಬ ಸಾಲುಗಳಲ್ಲಿ ಶಿಷ್ಟ ಕನ್ನಡದ 'ನಿಮಗೆ' ಎಂಬ ಪದವು 'ನಿಮಗ' ಎಂದು ಬಳಕೆಯಾಗಿದೆ. ಇಲ್ಲಿ 'ಎ'ಕಾರಕ್ಕೆ ಬದಲಾಗಿ 'ಅ'ಧ್ವನಿಯಾಗಿ ಬಳಕೆಗೊಂಡಿದೆ. 'ಹಾಸಿಗೊಂಡು', 'ಹೊದ್ದುಕೊಂಡು ಎಂಬ ಪದಗಳು ಧಾರವಾಡ ಕನ್ನಡದಲ್ಲಿ 'ಹಾಸಿಗೊಂಡ', 'ಹೊತಗೊಂಡ' ಎಂದು ಬಳಕೆಗೊಂಡಿವೆ. ಇಲ್ಲಿ 'ಉ'ಕಾರಾಂತವಾದ

ಈ ಶಬ್ದವು 'ಅ'ಕಾರಾಂತವಾಗಿ ಬಳಕೆಗೊಂಡಿರುವುದನ್ನು ಗುರುತಿಸಬಹುದು. ಹಾಗೆಯೇ 'ನಿದ್ದೆ' ಎಂಬ ಪದವು 'ನಿದ್ದೀ' ಎಂಬುದಾಗಿ ಬಳಕೆಯಾಗಿದೆ. 'ಎ'ಕಾರಕ್ಕೆ ಬದಲಾಗಿ 'ಇ'ಕಾರ ಧ್ವನಿಯಾಗಿ ಬಳಕೆಯಾಗಿದೆ.

ಇದೇ ಪದ್ಯದಲ್ಲಿ "ಅಮವಾಸಿ ಕಳೆಯುತ ಹುಣ್ಣಿವಿ ಕಾಲ ಹಾಕೂತ
ಅಪ್ಪನ ಹೆಗಲೇರಿ ಬರತಾಳ ಕುವರಿ
ಚಂದಪ್ಪ ಬೆಳಕಿನ್ಯಾಗ ಏನ್ ಹೇಳಲವಳೀಗಿ"[1]

ಎಂಬ ಸಾಲುಗಳಲ್ಲಿ ಶಿಷ್ಟ ಕನ್ನಡದಲ್ಲಿ ಬಳಕೆಯಾಗುವ ಕೆಲವು ಶಬ್ದಗಳು ಧಾರವಾಡ ಕನ್ನಡದಲ್ಲಿ ವಿಶೇಷವಾಗಿ ಬಳಕೆಯಾಗಿರುವುದನ್ನು ಗಮನಿಸಬಹುದು. 'ಅಮಾವಾಸ್ಯೆ' ಎಂಬ ಶಬ್ದವು 'ಅಮವಾಸಿ' ಎಂದೂ 'ಹುಣ್ಣಿಮೆ' ಎಂಬ ಶಬ್ಧವು 'ಹುಣ್ಣಿವಿ' ಎಂದು ಬಳಕೆಯಾಗಿದೆ. ಹಾಗೆಯೇ 'ಬೆಳಕಿನಲ್ಲಿ' ಎಂಬುದು 'ಬೆಳಕಿನ್ಯಾಗ' ಎಂದೂ 'ಅವಳಿಗೆ' ಎಂಬುದು 'ಅವಳೀಗಿ' ಎಂದು ಬಳಕೆಯಾಗಿದೆ. ಧಾರವಾಡ ಜಿಲ್ಲೆಯ ಮಕ್ಕಳ ಕವಿತೆಗಳು ವೈವಿಧ್ಯಮಯವಾಗಿದ್ದು ಪ್ರಾದೇಶಿಕ ಉಪಭಾಷೆಯ ಬಳಕೆಯು ಪರಿಣಾಮಕಾರಿಯಾಗಿ ಮೂಡಿಬಂದಿದೆ.

**ಮಕ್ಕಳ ಕವಿತೆಗಳಲ್ಲಿ ಮಂಗಳೂರು ಪ್ರಾದೇಶಿಕ ಭಾಷಾ ಬಳಕೆ**

ಪ್ರಾದೇಶಿಕ ಹಿನ್ನಲೆಯಲ್ಲಿ ಮಂಗಳೂರು ಕನ್ನಡವು ತನ್ನದೇ ಆದ ವೈಶಿಷ್ಟ್ಯವನ್ನು ಒಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಉತ್ತರದಲ್ಲಿ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ಪೂರ್ವಕ್ಕೆ ಹಾಸನ ಜಿಲ್ಲೆಯು, ದಕ್ಷಿಣಕ್ಕೆ ಕೊಡಗು ಜಿಲ್ಲೆ ಮತ್ತು ಕೇರಳ ರಾಜ್ಯಗಳು ಹಾಗೂ ಪಶ್ಚಿಮಕ್ಕೆ ಅರಬ್ಬಿ ಸಮುದ್ರ ಆವರಿಸಿಕೊಂಡಿವೆ. ಮಂಗಳೂರು ಕನ್ನಡದ ಮೇಲೆ ತುಳು, ಕೊಂಕಣಿ ಮತ್ತು ಮಲೆಯಾಳಂ ಭಾಷೆಗಳ ಪ್ರಭಾವವು ವಿಶೇಷವಾಗಿ ಗೋಚರಿಸುವುದು. ಈ ಕಾರಣದಿಂದ ದಕ್ಷಿಣ ಕನ್ನಡದ ಕನ್ನಡವು ಉತ್ತರ ಕನ್ನಡಕ್ಕಿಂತ ಭಿನ್ನವಾಗಿದೆ. ಮಂಗಳೂರಿನ ದಕ್ಷಿಣ ಮತ್ತು ಪೂರ್ವಕ್ಕೆ ಇರುವ ಪುತ್ತೂರು, ಸುಳ್ಯ ಮುಂತಾದ ಕಡೆಗಳಲ್ಲಿ ಹವ್ಯಕ ಹಾಗೂ ಗೌಡಜನಾಂಗದವರು ಕನ್ನಡವನ್ನು ಹೆಚ್ಚು ಬಳಸಿದರೆ, ಮಂಗಳೂರಿನ ಉತ್ತರಕ್ಕೆ ಕೊಂಕಣಿ ಮತ್ತು ತುಳು ಭಾಷೆಗಳನ್ನು ಆಡುವವರು ಹೆಚ್ಚಿದ್ದಾರೆ.

